36th Year of Publication Phone : 3728

ಪ್ರಭಾತ

1—11—1970 ದೀಪಾವಳಿ ಅಂಕ ಬೆಲೆ 50 ಪೈಸೆ



ಶ್ರೀ ಮಂಜುನಾಥ ಸ್ವಾಮಿ ದೇವಾಲಯ, ಧರ್ಮಸ್ಥಳ

ಇಲ್ಲಿ ಈ ತಿಂಗಳ ತಾ. 28ರಂದು ದೀಪೋತ್ಸವ ನಡೆಯುವುದು.

PRABHAT DIPAVALI NUMBER 1970



ಜನಕೆ ಜಾಗ್ರತಿಯುದಯ
ವಿದುವೆ ತಾಮಸ ಜಡತೆ
ಗಳೆವ ವಿಜಯುವ ಸಾರ್ವ
ಮೊದಲ ತೂರ್ಯಂ

ಪ್ರಭಾತ

ಬಗೆಗೆ ಬಾಹ್ಯಜ್ಞಾನ
ವೀವಾಡ್ಯ ಶಕ್ತಿಯಿದು
ಸದಮಲಾಂತಃಕರಣ
ತರುಣ ಪ್ರಭಾತಂ

ದೀಪಾವಳಿ ಅಂಕ — 1–11–1970 — Dipavali Number

★ ದೀಪ ★

ಅಂಧಕಾರದಲ್ಲಿ ಅಂಧಕಾರವು ಲೀನವಾಗಿತ್ತು. ಎಷ್ಟು ಲಕ್ಷ ಅಥವಾ ಕೋಟಿ ವರ್ಷಗಳವರೆಗೆ ಈ ಗಾಢಾಂಧಕಾರವಿತ್ತೋ ಊಹನೆಗೂ ನಿಲುಕದು. ಮತ್ತೆ ಭಗವಾನ್ ಭಾಸ್ಕರನು ಬೆಳಕು ಬೀರಿದನು. ಜೀವರಾಶಿ ಸೃಷ್ಟಿಯಾಗಿ,ಚಲಿಸತೊಡಗಿತು. ಬಾಹ್ಯಚಕ್ಷುಗಳು ಪ್ರಪಂಚವನ್ನೀಕ್ಷಿಸಿದುವು. ಅಂತಃಚಕ್ಷುಗಳು ಗೂಢವನ್ನು ಭೇದಿಸಿ ಇಣಿಕಿದುವು. ಹಗಲಲ್ಲಿ ಬೆಳಕನ್ನಿತ್ತು ಹರ್ಷವನ್ನು ಪಸರಿಸುವ ವಿಶ್ವಾಕಾಶದ ಆ ಮಹಾಜ್ಯೋತಿಯನ್ನು ನೋಡಿ, ಮಾನವನು, ರಾತ್ರೆ ಕತ್ತಲು ಕವಿದಾಗ ತನ್ನ ಪುಟ್ಟ ಕೈಗಳಿಂದ ಪುಟ್ಟ ಹಣತೆಯನ್ನು ಹಚ್ಚಿದನು. ವಸ್ತುಗಳನ್ನು ಕಾಣುವಲ್ಲಿ ಅವನಿಗೆ ದಣುವಿಲ್ಲ. ವಿಷಯುಗಳನ್ನು ಭೇದಿಸಿ ಶೋಧಿಸುವಲ್ಲಿ ಅವನ ತೃಷ್ಣೆ ಮುಗಿಯದು.

ಸ್ವಯಂಪ್ರೇರಣೆಯಿಂದ ಓರ್ವ ಜಾಣನು ಹಚ್ಚಿದ ಸೊಡರು ನೂರಾರು–ಸಾವಿರಾರು ಜನರನ್ನು ಅಚ್ಚರಿಗೊಳಿಸಿತು; ಅಮಿತಾನಂದವನ್ನಿತ್ತಿತು; ತಾನೂ ಅಂಥ ದೀವಿಗೆಯೊಂದನ್ನು ಹಚ್ಚಬೇಕೆಂದು ಪ್ರೇರಣೆ ಕೊಟ್ಟಿತು. ಎರಡು ಕೈಗಳು ಹಣತೆ ಹಚ್ಚಿದುವು; ಎರಡುಸಾವಿರ, ಲಕ್ಷ, ಕೋಟಿ ಕರಗಳಿಂದ ದೀವಿಗೆಗಳು ಬೆಳಗಿ, ಮಿತ ಪ್ರದೇಶದ ಬೆಳಕನ್ನು ಅಮಿತವಾಗಿ—ವಿಶಾಲವಾಗಿ ಪ್ರಕಾಶಿಸಿದುವು. ಕೋಟಿ ಹೃದಯುಗಳಲ್ಲಿ ಜ್ಯೋತಿ ಬೆಳಗಿತು; ಒಳಗೂ ಹೊರಗೂ ಪ್ರಭೆ ಬೀರಿತು.

ಮಾನವನು, ಮಬ್ಬನ್ನು ಕಳೆದು ಸುಪ್ರಭೆಯ ಲೋಕವನ್ನು ಕಂಡಿದ್ದನು. ಅವನ ಭಾರವಾದ ಹೃದಯುವು ನಲವಿಂದ ಲಘುವಾಗಿ, ಗೆಲುವನ್ನು ತಂದಿತ್ತು. ಮಾನವ ಕೋಟಿಯ ವಿಕಾಸದಲ್ಲಿ ಮೊದಲಬಾರಿ ನಗುಮೂಡಿತ್ತು. ಈ ನಗು, ಆ ಬೆಳಕಿನ ಶೋಭೆಯನ್ನು ದ್ವಿಗುಣಿಸಿತ್ತು. ಅದು ಮಹಾ ಅದ್ಭುತವಾಗಿತ್ತು; ದಿವ್ಯಾನಂದ ತಂದಿತ್ತು.

ಒಂದು ಪುಟ್ಟ ಕೈ, ಚಿಕ್ಕ ಹಣತೆ ಹಚ್ಚಿ, ಅಸಹನೀಯ ಬಾಹ್ಯಅಂಧಕಾರವನ್ನೋಡಿಸಿ ದಾರಿತೋರಬಲ್ಲುದಾದರೆ, ಅಂಧಕಾರದಲ್ಲಡಗಿದ್ದ ಅಪಾಯುಗಳನ್ನು ತೋರಿಸಿ ನಿರಪಾಯದ ಕಡೆಗೆ ನಡೆಯಿಸುವುದಾದರೆ, ಆಂತರಿಕ ದೀಪವು ಆಂತರಿಕ ಅಂಧಕಾರವನ್ನು ತೊಲಗಿಸಲಾರದೇಕೆಂದು, ಬಹುಕಾಲದ ನಂತರ ಮಾನವನು ಕಂಡುಕೊಂಡನು. ಇದುವೆ ಜ್ಞಾನದೀಪವಾಯಿತು. ಇದುವೇ ಅಧ್ಯಾತ್ಮಪ್ರಕಾಶದ ಉಗಮವಾಯಿತು; ಅಧ್ಯಾತ್ಮ ಜ್ಯೋತಿಯೆನಿಸಿತು. ಪ್ರಪಂಚವು ಅತ್ಯದ್ಭುತವಾದ ಇನ್ನೊಂದು ಶೋಧಮಾಡಿತ್ತು. ಯುಗಯುಗಾಂತರಗಳವರೆಗೆ ಮಾನವನ ಬಾಳು ಸುಖಕರವಾಗುವಂತೆ ಆತ್ಮಪ್ರಕಾಶವನ್ನು ಕಂಡುಕೊಂಡಿತ್ತು.

ಆರ್ಯರು "ತಮಸೋಮಾ ಜ್ಯೋತಿರ್ಗಮಯ" ಎಂದು ಪ್ರಾರ್ಥಿಸಿದರು.

ಭಗವಂತನು ವ್ಯಾಪಿಸಿರುವ ಅನಂತಾಕಾಶದಲ್ಲಿ ಬೃಹದಾಕಾರದ ದೀಪವಾಗಿ ಸೂರ್ಯನು ಪ್ರಜ್ವಲಿಸಿ ಪೃಥ್ವಿಗೆ ಶಾಖ ಕೊಡುತ್ತಿದ್ದಾನೆ, ಬೆಳಕುಕೊಡುತಿದ್ದಾನೆ, ಅದರಿಂದಲೇ ಸಮಸ್ತ ಜೀವರಾಶಿ ಚಲಿಸುತ್ತಿದೆ, ನಿರ್ಭೀತಿಯಿಂದ ಜೀವಿಸುತ್ತಿದೆ. ಕತ್ತಲು ಕವಿವಾಗ ಪುಟ್ಟ ಮಾನವ ತನ್ನ ಇತಿಮಿತಿಗೊಳಪಟ್ಟು ಪುಟ್ಟ ಹಣತಿಗೆ ಹಚ್ಚಿ, ಭಗವಾನ್ ಭಾಸ್ಕರನನ್ನೆ ಧ್ಯಾನಿಸುತ್ತಾನೆ. ವಿಶಿಷ್ಟಕಾಲ ನಿರ್ಣಯುಮಾಡಿ, ಒಂದಲ್ಲ ಸಾವಿರ ದೀಪ ಹಚ್ಚುತ್ತಾನೆ—ದೀಪಾವಳಿಯೆಂದು ಹೆಸರಿಸಿದ್ದಾನೆ.

ದೀಪಾವಳಿ—ಒಂದು ಪರಿಮಿತ ಸಮಾಜದ ಅಥವಾ ವರ್ಗದ ಹಬ್ಬವಲ್ಲ. ಅದು ಸಮಸ್ತ ಮಾನವರು ಆಚರಿಸಬೇಕಾದ ಅತೀ ಮಹತ್ವದ, ಮಾನವ-ಮಾನವರ ಸಂಬಂಧವನ್ನುತ್ತಮಗೊಳಿಸುವ ವೃದ್ಧಿಸಾಧಕ, ಉತ್ತಮತೆ ಸಾಧಿಸುವ ಅಮಿತ ಸಾಧ್ಯತೆಗಳ ಮಹಾಪರ್ವ. ವಣಿಜನು ಗತವರ್ಷದ ಸಿಂಹಾವಲೋಕನಮಾಡುತ್ತಾನೆ. ಕೃಷಿಕನು ಉತ್ತು ಬಿತ್ತು ಪಡೆದುದನ್ನು, ಆಯಾಸ ನೀಗಿ ನೋಡಿ ಆನಂದಿಸುತ್ತಾನೆ. ಜನಸಾಮಾನ್ಯವು, ಕಳೆದ ವರುಷದಲ್ಲಿ ಅರಿತೋ ಅರಿಯದೆಯೋ ಕೂಡಿದ್ದ ಆಂತರಿಕ ಮಾಲೀನ್ಯವನ್ನು ತೊಳೆವ ಸಾಂಕೇತಿಕವಾಗಿ ತೈಲಾಭ್ಯಂಗದ ಆಚಾರವನ್ನು ಪೂರೈಸುತ್ತಾನೆ. ರಾಜನೂ ರಂಕನೂ ಎಲ್ಲರೂ ದೀಪಹಚ್ಚುತ್ತಾರೆ. ದೀಪಾವಳಿಯ ಕರೆ ಒಂದೇ—ಜ್ಞಾನದೀವಿಗೆ ಹಚ್ಚಿರಿ! ನಿಮ್ಮ ನೆರೆಕರೆಯವರೊಡನೆ,ಸಹೋದರರೊಡನೆ, ಬಂಧುಬಳಗದವರೊಡನೆ ಸ್ನೇಹಸಂವರ್ಧನೆ ಮಾಡಿರಿ! ಘಟಿಸಿಹೋದ ಪ್ರಮಾದಗಳನ್ನು ಚಿಂತಿಸಿ, ತೊಳೆದುಹಾಕಿ, ಉತ್ತಮತೆಯ ಬಗ್ಗೆ ನವಸಂಕಲ್ಪಮಾಡಿರಿ! ಮಾತಿನಲ್ಲಿ, ಕೃತಿಯಲ್ಲಿ ಕಲಂಕವಿರದಂತೆ ಸತ್ಯದ ದೀಪ ಹಚ್ಚಿರಿ. ಅಜ್ಞಾನವನ್ನು ತೊಳೆದುಬಿಡಿರಿ. ಸಂಕುಚಿತ ಭಾವಗಳನ್ನು ಧ್ವಸಾಡಿಸಿಬಿಟ್ಟು ಸೂರ್ಯನು ತಾರತಮ್ಯವಿಲ್ಲದೆ ಎಲ್ಲರ ಮೇಲೂ ಬೆಳಕುಬೀರುವಂತೆ, ದೀಪವು ಹಾವಿನ ಮೇಲೆ ಬೆಳಕು ಚೆಲ್ಲಿದಂತೇ ಹೂವಿನ ಮೇಲೂ ಚೆಲ್ಲುವಂತೆ ಸಮಾನತೆ, ನಿರ್ವಿಕಾರಗಳಿಂದ ನೋಡಿರಿ. ಧನಸಂಗ್ರಹಕ್ಕಾಗಿ ತೊಡಗಿರುವ ದೆಸೆಗೆಟ್ಟ ಓಟವನ್ನು ನಿಲ್ಲಿಸಿ, ನ್ಯಾಯಪಥದಲ್ಲಿ ಸಾಗಿರಿ. ಕಟುವಚನಗಳನ್ನಾಡದೆ ಮಧುರ ನುಡಿಗಳನ್ನಾಡಿರಿ. ಎರಡೂ ಕೈಗಳಿಂದ ಪರಚಿ ಚಿವುಟಿ ಅಪಹರಿಸಿ ದುಸ್ವಾರ್ಥದಿಂದ ಕೂಡಹಾಕಿ ಕೃಪಣರಾಗಿ ಬಾಳಲು ಇಚ್ಛಿಸದೆ, ಕರ್ತವ್ಯವೆಂದು ಭಾವಿಸಿ ಕೂಡಿಹಾಕುತಿದ್ದಂತೆ ನಿಮ್ಮ ಹೊಣೆಯೆಂದು ತಿಳಿದು ಪುನರ್ವಿತರಣೆಮಾಡಿರಿ. ನಿಮ್ಮ ಸುತ್ತಮುತ್ತಲೂ ಅಸಹಾಯಕ ಸ್ಥಿತಿಯಲ್ಲಿರುವವರಿಗೆ ನೆರವಾಗಿರಿ. ನೊಂದವರನ್ನು ಸಮಾಧಾನಗೊಳಿಸಿ, ಜೀವಿಸಗೊಡುವ ಮೂಲಕವೇ ನೀವೂ ಬಾಳಿರಿ! ನಿಮ್ಮ ಯೌವನದ ಶಕ್ತಿಯು ದೀನದಲಿತರ ಸಹಾಯಕ್ಕಾಗಿರಲಿ—ನಿಮ್ಮ ಧನಸಂಪತ್ತು ನಿಸ್ಸಹಾಯಕ ಧನಹೀನರ ಜೀವನೋದ್ಧಾರಕ್ಕಾಗಿ ವಿನಿಯೋಗವಾಗಲಿ—ನಿಮ್ಮ ಪ್ರಭುತ್ವವು ನ್ಯಾಯ, ಸತ್ಯ ದಯೆಗಳಿಂದ ಕೂಡಿರಲಿ—ನಿಮ್ಮ ಅವಿವೇಕತೆಯನ್ನು ಜ್ಞಾನದೀವಿಗೆ ಹಚ್ಚಿ ಹೋಗಲಾಡಿಸಿರಿ.

ಆರ್ಯರ ಮಹಾಗ್ರಂಥಗಳು ಆದರ್ಶ ರಾಜ, ಆದರ್ಶ ಮಂತ್ರಿ, ಆದರ್ಶ ದಳಪತಿ, ಆದರ್ಶ ಪಿತ, ಆದರ್ಶ ಪುತ್ರ, ಆದರ್ಶ ಸತಿ, ಆದರ್ಶ ವರ್ತಕ, ಆದರ್ಶ ಸೇವಕ, ಆದರ್ಶ ದಾನಿ, ಆದರ್ಶ ಬ್ರಹ್ಮಚಾರಿ.... ಹೀಗೆ ಪ್ರತಿಯೊಬ್ಬರನ್ನೂ ಒಂದೊಂದು ಸುಪ್ರಕಾಶದ ದೀಪದಂತೆ ನಮಗಾಗಿ ಕಾಯ್ದುಕೊಂಡಿಟ್ಟು, ನಿನ್ನೆಯ–ಇಂದಿನ–ನಾಳೆಯ ಮಾನವಕೋಟಿಯ ಕಲ್ಯಾಣಕ್ಕಾಗಿ ಭದ್ರವಾಗಿಟ್ಟು–ಅವಶ್ಯವಿದ್ದಾಗ ದೀಪಹಚ್ಚಿ ತೆರೆದುನೋಡಿರಿ ಎಂದು ಸಾರುತ್ತಿವೆ. ವಿವೇಕಶೂನ್ಯತೆಯನ್ನು ನೀಗಿರಿ. ದಿಕ್ಕುಗೆಟ್ಟ ಓಟವನ್ನು ನಿಲ್ಲಿಸಿರಿ! ಇದುವೇ ದೀಪ, ಇದುವೇ ದೀಪಾವಳಿ.

ಜಗತ್ತಿನ ಎಲ್ಲ ಪ್ರಾರ್ಥನೆಗಳಲ್ಲಿ, ಸಂಕುಚಿತತೆ ಇಲ್ಲದ, ಅತ್ಯುದಾರ ವಾಕ್ಯಗಳೆರಡು: ಇವೆರಡು ವಾಕ್ಯಗಳಿಗೆ ಸರಿಸಮಾನವಾದುವು ಮತ್ತಾವುವೂ ಇಲ್ಲ:

ತಮಸೋಮಾ ಜ್ಯೋತಿರ್ಗಮಯ
ಲೋಕಾಸ್ಸಮಸ್ತಾ ಸುಖಿನೋ ಭವಂತು.

ಕುಡ್ಪಿ ವಾಸುದೇವ ಶೆಣೈ.

— —

ಸಾಹಿತ್ಯಸಂಗೀತ ಕಲಾವಿಹೀನಃ ಸಾಕ್ಷಾತ್ ಪಶುಃ ಪುಚ್ಛವಿಷಾಣಹೀನಃ ।
ತೃಣನ್ನಖಾದನ್ನಪಿ ಜೀವಮಾನಸ್ತದ್ಭಾಗಧೇಯಂ ಪರಮಂ ಪಶೂನಾಂ ॥

ಸಾಹಿತ್ಯ, ಸಂಗೀತ ಕಲಾವಿಹೀನ (ಅವುಗಳ ಬಗ್ಗೆ ಅಜ್ಞಾನವನ್ನು ಪ್ರಕಟಿಸುವವನು) ಕೋಡು–ಬಾಲಗಳಿಲ್ಲದಂಥ ಪಶುವಿನ ಸಮಾನನು. ಅಷ್ಟೇ ಅಲ್ಲ, ಅವನು ಹುಲ್ಲು ತಿಂದು ಜೀವಿಸದಿರುವುದು ಪಶುಗಳ ಭಾಗ್ಯ.

(ಭರ್ತೃಹರಿಯ "ನೀತಿಶತಕ"ದಿಂದ)

— —

ಯೇಷಾಂ ನ ವಿದ್ಯಾ ನ ತಪೋ ನ ದಾನಂ ಜ್ಞಾನಂ ನ ಶೀಲಂ ನ ಗುಣೋ ನ ಧರ್ಮಃ ।
ತೇ ಮರ್ತ್ಯಲೋಕೇ ಭುವಿಭಾರಭೂತಾ ಮನುಷ್ಯರೂಪೇಣ ಮೃಗಾಶ್ಚರಂತಿ ॥


ಯಾರಿಗೆ ವಿದ್ಯೆಯಿಲ್ಲವೋ, ತಪಸ್ಸಿಲ್ಲವೋ, ದಾನಬುದ್ಧಿಯಿಲ್ಲವೊ, ಜ್ಞಾನವಿಲ್ಲವೋ, ಶೀಲವಿಲ್ಲವೋ, ಗುಣಗಳೂ ಧರ್ಮವೂ ಇಲ್ಲವೋ, ಅವನು ಕೇವಲ ಭೂಮಿಗೆ ಭಾರವಾಗಿದ್ದು ಮನುಷ್ಯರೂಪದಲ್ಲಿ ಚರಿಸುವ ಮೃಗವಾಗಿರುತ್ತಾನೆ.

(ಭರ್ತೃಹರಿಯ "ನೀತಿಶತಕ"ದಿಂದ)

— —

ಮನುಸಂತಾನರಾದ ನಾವು ಅವನ ಆದೇಶದಂತೆ ನಡೆಯಬೇಕು

(ಸ್ವಾಮಿ ವಿವೇಕಾನಂದ)



ಪ್ರಗತಿಮಾರ್ಗದಲ್ಲಿ ಹಲವು ವಿಘ್ನಗಳಿವೆ. ಅದರಲ್ಲಿ ಒಂದೆ ಪೃಥ್ವಿಯಲ್ಲಿ ನಮ್ಮ ಸಮಾನ ಯಾರೂ ಇಲ್ಲವೆಂಬ ದುರಾಗ್ರಹ ಭಾವನೆ. ನಾನು ಹೃತ್ಪೂರ್ವಕ ಭರತ ಖಂಡವನ್ನು ಪ್ರೀತಿಸುವೆ. ದೇಶಭಕ್ತಿ ಇದೆ; ನಮ್ಮ ಪೂರ್ವಿಕರಿಗೆ ಗೌರವವಿದೆ. ಆದರೂ ಪ್ರಪಂಚದ ಇತರರಿಂದ ಹಲವು ವಿಷಯಗಳನ್ನು ನಾವು ಕಲಿತುಕೊಳ್ಳಬೇಕಾಗಿದೆ ಎಂದು ತಿಳಿಯುತ್ತೇನೆ. ಎಲ್ಲರ ಪದತಳದಲ್ಲಿ ಕುಳಿತು ಕಲಿಯಲು ನಾವು ಸಿದ್ಧರಾಗಿರಬೇಕು. ಇದನ್ನು ಗಮನಿಸಿ, ಪ್ರತಿಯೊಬ್ಬರೂ ನಮಗೆ ಒಂದು ದೊಡ್ಡ ಪಾಠವನ್ನು ಕಲಿಸಬಹುದು. ಶ್ರೇಷ್ಠ ಸ್ಮೃತಿಕಾರನು ಹೀಗೆ ಹೇಳುವನು.

"ಶ್ರದ್ಧಧಾನೊ ಶುಭಾಂ
ವಿದ್ಯಾಮಾದದೀತಾವರಾದಪಿ ।
ಅನ್ತ್ಯಾದಪಿ ಪರಂ ಧರ್ಮಂ
ಸ್ತ್ರೀರತ್ನಂ ದುಷ್ಕುಲಾದಪಿ ॥

ಅಂತ್ಯಜನಾಗಲೀ ನೀಚಜನಾಗಲೀ ಅವನಿಂದ ಒಳ್ಳೆಯುದನ್ನು ಕಲಿ. ಶ್ರದ್ಧೆಯಿಂದ ಮುಕ್ತಿಮಾರ್ಗವನ್ನು ಅರಿ. ಸ್ತ್ರೀರತ್ನ ನೀಚಕುಲದಿಂದ ಬಂದರೂ ಸ್ವೀಕರಿಸು.

ಮನುಸಂತಾನರಾದ ನಾವು ಅವನ ಆದೇಶದಂತೆ ಅನುಸರಿಸಬೇಕು. ಇಹ ಮತ್ತು ಪರಜನ್ಮಕ್ಕೆ ಸಂಬಂಧಿಸಿದ ವಿಷಯವನ್ನು ಯಾರಿಂದಲಾದರೂ ಕಲಿಯಲು ಸಿದ್ಧರಾಗಿರಬೇಕು. ಜೊತೆಗೆ ನಾವು ಕೂಡ ಪ್ರಪಂಚಕ್ಕೆ ವಿಶೇಷವಾಗಿ ಏನನ್ನು ಕೊಡಬೇಕಾಗಿದೆ ಎಂಬುದನ್ನು ಲಕ್ಷ್ಯದಲ್ಲಿಡಬೇಕು. ಹೊರಗೆ ಇರುವ ಪ್ರಪಂಚದ ಸಹಾಯವಿಲ್ಲದೆ ನಾವು ಇರಲಾರೆವು. ನಾವು ಹಾಗೆ ಇರಲು ಸಾಧ್ಯವೆಂದು ತಿಳಿದುದೇ ನಮ್ಮ ಮೂರ್ಖತನ. ಅದಕ್ಕಾಗಿ ಸಾವಿರಾರು ವರುಷದ ಗುಲಾಮಗಿರಿಯ ಶಿಕ್ಷೆ ಅನುಭವಿಸಿರುವೆವು. ಭಾರತೀಯನ ಅವನತಿಗೆ ಮುಖ್ಯಕಾರಣ, ಅವನು ಹೊರಗೆ ಹೋಗಿ ಪ್ರಪಂಚದ ಇತರರೊಂದಿಗೆ ತಮ್ಮನ್ನು ತುಲನೆಮಾಡಿ ನೋಡಿಕೊಳ್ಳಲಿಲ್ಲ. ಸುತ್ತಲೂ ಏನಾಗುತ್ತಿದೆ ಎಂಬುದನ್ನು ಗಮನಿಸಲಿಲ್ಲ. ಅದಕ್ಕೆ ತಕ್ಕ ಶಿಕ್ಷೆಯನ್ನು ಅನುಭವಿಸುವೆವು. ಇನ್ನು ಹೆಚ್ಚು ಮಾಡದೆ ಇರೋಣ. ಭಾರತೀಯ ಹೊರಗೆ ಹೋಗಕೂಡದು ಎಂಬ ಮೂರ್ಖಭಾವನೆಯಲ್ಲಿ ಹುರುಳಿಲ್ಲ. ಈ ಭಾವನೆಯನ್ನು ತ್ಯಜಿಸಬೇಕು. ನೀವು ಎಷ್ಟು ಹೊರಗೆ ಹೋಗಿ ಇತರ ರಾಷ್ಟ್ರಗಳನ್ನು ನೋಡಿಕೊಂಡು ಬರುವಿರೋ, ಅಷ್ಟೂ ನಿಮಗೆ ಮತ್ತು ನಿಮ್ಮ ದೇಶಕ್ಕೆ ಒಳ್ಳೆಯದು. ನೀವು ಕಳೆದ ನೂರಾರು ವರುಷದಿಂದ ಹೀಗೆ ಮಾಡಿದ್ದರೆ, ಯಾರು ನಮ್ಮನ್ನು ಆಳಲು ಬಂದರೋ ಅವರ ಪದತಳದಲ್ಲಿ ಇರುತ್ತಿರಲಿಲ್ಲ. ವಿಕಾಸವೇ ಜೀವನದ ಪ್ರಥಮ ಚಿಹ್ನೆ. ನೀವು ಬಾಳಬೇಕಾದರೆ ವಿಸ್ತಾರವಾಗಬೇಕು, ವಿಕಾಸ ನಿಂತೊಡನೆಯೇ ಮೃತ್ಯು ಸನ್ನಿಹಿತವಾಗಿರುವುದು; ಅಪಾಯ ಸನ್ನಿಹಿತವಾಗಿರುವುದು.

ನಾನು ಯೂರೋಪ್ ಅಮೇರಿಕಾ ದೇಶಗಳಿಗೆ ಹೋದೆನೆಂದು ನೀವು ಸಹೃದಯ ಪೂರ್ವಕ ವಿವರಿಸಿರುವಿರಿ. ನಾನು ಹೋಗಲೇಬೇಕಾಯಿತು. ಏಕೆಂದರೆ ವಿಕಾಸವೇ ಜೀವನದ ಪ್ರಥಮ ಚಿಹ್ನೆ. ನಮ್ಮ ಜನಾಂಗದ ಜಾಗೃತಿ ಆಂತರಿಕ ವಿಕಾಸ ನನ್ನನ್ನು ಹೊರಗೆ ಎಸೆಯಿತು. ಸಾವಿರಾರು ಜನರು ಹಾಗೆಯೇ ಎಸೆಯಲ್ಪಡುವರು. ನಮ್ಮ ಜನಾಂಗ ಬಾಳಬೇಕಾದರೆ ಇದು ಆಗಲೇಬೇಕು. ಇದನ್ನು ಗಮನಿಸಿ. ವಿಸ್ತಾರವಾಗುತ್ತಿರುವ ಜನಾಂಗದ ಜೀವನಪುನರಭ್ಯುದಯದ ಪ್ರಥಮ ಚಿಹ್ನೆ. ಇದರಿಂದ ಮನುಷ್ಯನ ಜ್ಞಾನಸಮಷ್ಟಿಗೆ, ಸಮಗ್ರ ಜಗತ್ತಿನ ಉನ್ನತಿಗೆ, ನಾವು ಏನನ್ನು ಕೊಡಬೇಕಾಗಿದೆಯೋ, ಅದನ್ನು ಕೊಡುತ್ತಿರುವೆವು. ಇದು ಹೊಸದಲ್ಲ, ಹಿಂದಿನಿಂದಲೂ ಹಿಂದುಗಳು ಭರತಖಂಡದಲ್ಲೇ ಇದ್ದರು. ಎಂದೂ ಹೊರಗೆ ಹೋಗಲಿಲ್ಲವೆಂದು ಭಾವಿಸಿದರೆ ಅದು ತಪ್ಪು. ನೀವು ಹಾಗೆ ಭಾವಿಸಿದ್ದರೆ, ನೀವು ಪುಸ್ತಕ ಓದಿಲ್ಲ, ಜನಾಂಗದ ಚರಿತ್ರೆಯನ್ನು ಸರಿಯಾಗಿ ತಿಳಿದುಕೊಂಡಿಲ್ಲ. ಜನಾಂಗವೂ ಬಾಳಬೇಕಾದರೆ ಏನನ್ನಾದರೂ ಕೊಡಬೇಕು. ನೀವು ಜೀವನ ಕೊಟ್ಟರೆ ಜೀವನ ದೊರಕುವುದು. ಸ್ವೀಕರಿಸಿದರೆ, ಇತರರಿಗೆ ಕೊಡಬೇಕು. ನಾವು ಸಹಸ್ರಾರು ವರುಷಗಳಿಂದ ಬಾಳುತ್ತಿರುವೆವು ಎಂಬುದು ನಿಸ್ಸಂದೇಹವಾಗಿದೆ. ಇದರಿಂದ ದೊರಕುವ ಉತ್ತರವೇ, ಮೂಢರು ಅನ್ಯಥಾ ಭಾವಿಸಿದರೂ, ನಾವು ಜಗತ್ತಿಗೆ ಯಾವಾಗಲೂ ಕೊಡುತ್ತಿದ್ದೆವು.

ಭಾರತದ ದಾನಧರ್ಮ ದಾರ್ಶನಿಕ ಜ್ಞಾನ ಮತ್ತು ಅಧ್ಯಾತ್ಮ ವಿದ್ಯೆ. ಧಾರ್ಮಿಕ ಪ್ರಚಾರಕ್ಕೆ ಮುಂಚೆ ಸೇನೆಹೋಗಿ ಮಾರ್ಗ ರಚಿಸಬೇಕಾಗಿಲ್ಲ. ಜ್ಞಾನ ಮತ್ತು ದಾರ್ಶನಿಕ ತತ್ತ್ವ, ರಕ್ತಪ್ರವಾಹದ ಮೇಲೆ ಹೋಗಬೇಕಾಗಿಲ್ಲ. ಜ್ಞಾನ ಮತ್ತು ತತ್ತ್ವ ಕೊಲೆಯ ಮೂಲಕ ಹಿಂಸೆಯ ಮೂಲಕ ಸಂಚರಿಸುವುದಿಲ್ಲ. ಶಾಂತಿ ಮತ್ತು ಪ್ರೇಮದ ರೆಕ್ಕೆಯ ಮೇಲೆ ಬರುವುದು. ಇದರ ರೀತಿಯೇ ಹೀಗೆ. ಆದಕಾರಣ ನಾವು ಕೊಡಬೇಕಾಗಿತ್ತು. ಒಬ್ಬ ತರುಣಿ, ಲಂಡನ್ನಿನಲ್ಲಿ ನನ್ನನ್ನು, "ಹಿಂದೂಗಳು ಏನು ಮಾಡಿರುವಿರಿ? ನೀವು ಯಾವ ಒಂದು ರಾಷ್ಟ್ರವನ್ನೂ ಗೆದ್ದಿಲ್ಲ" ಎಂದು ಕೇಳಿದಳು. ಧೀರ ವೀರನಾದ ಕ್ಷಾತ್ರಗುಣ ಆಂಗ್ಲೇಯನ ದೃಷ್ಟಿಯಿಂದ ಇದು ಸರಿ. ಆದರೆ ನಮ್ಮ ದೃಷ್ಟಿ ಅದಕ್ಕೆ ಸಂಪೂರ್ಣ ವಿರೋಧ. ಭರತಖಂಡದ ಹಿರಿಮೆಗೆ ಕಾರಣ ನಾನು ಪರ್ಯಾಲೋಚಿಸಿದಂತೆ, ನಾವು ಅನ್ಯರನ್ನು ಗೆಲ್ಲದಿದ್ದದ್ದು. ಹಿಂದೂಧರ್ಮ ಅನ್ಯರನ್ನು ಗೆಲ್ಲುವ ಧರ್ಮವಲ್ಲವೆಂದು ಅನೇಕರು ನಮ್ಮನ್ನು ಪ್ರತಿದಿನ ದೂರುತ್ತಿರುವರು. ಅವರಿಗೆ ನಮ್ಮ ಧರ್ಮ ಪರಿಚಯ ಹೆಚ್ಚು ಆಗಬೇಕಾಗಿದೆ ಎಂದು ವ್ಯಸನದಿಂದ ಹೇಳಬೇಕಾಗಿದೆ. ನನ್ನ ಮನಸ್ಸಿಗೆ ನಮ್ಮ ಧರ್ಮ ಅನ್ಯಧರ್ಮಗಳಿಗಿಂತ ಹೆಚ್ಚು ಸತ್ಯವೆನ್ನುವುದಕ್ಕೆ ಇದೇ ಕಾರಣ, ಅದು ಮತ್ತೊಬ್ಬರನ್ನು ಗೆಲ್ಲಲಿಲ್ಲ. ರಕ್ತಪಾತ ಹರಿಸಲಿಲ್ಲ. ಅವರ ಬಾಯಿಯಿಂದ ಯಾವಾಗಲೂ ಆಶೀರ್ವಾದ, ಪ್ರೀತಿ, ಶಾಂತಿ, ಸಹಾನುಭೂತಿಯ ವಾಣಿಗಳೇ ಬರುತ್ತಿದ್ದವು. ಇಲ್ಲಿ ಮಾತ್ರ ಮೊದಲು ಅನ್ಯಧರ್ಮ ಸಹಿಷ್ಣುತೆಯ ಭಾವವನ್ನು ಬೋಧಿಸಿದರು. ಇಲ್ಲಿ ಮಾತ್ರ ದಯೆ ಸೌಹಾರ್ದಗಳು ಅನುಷ್ಠಾನದಲ್ಲಿತ್ತು. ಉಳಿದ ದೇಶಗಳಲ್ಲೆಲ್ಲಾ ಅದು ಬರಿಯ ಬಾಯಿಮಾತಾಗಿತ್ತು. ಇಲ್ಲಿ ಮಾತ್ರ ಹಿಂದು ಮಹಮ್ಮದೀಯರಿಗೆ ಮಸೀದಿ ಕಟ್ಟುವನು, ಕ್ರೈಸ್ತರಿಗೆ ಚರ್ಚು ಕಟ್ಟುವನು. ನೋಡಿ! ನಮ್ಮ ಭಾವನ ಪ್ರಪಂಚಕ್ಕೆ ಅನೇಕವೇಳೆ ನಿಧಾನವಾಗಿ ಮೌನವಾಗಿ ಮತ್ತೊಬ್ಬರಿಗೆ ಕಾಣದಂತೆ ಹೋಗಿದೆ. ಇಂಡಿಯಾದೇಶದಲ್ಲಿರುವ ಎಲ್ಲಾ ವಿಷಯಗಳಂತೆಯೇ ಇದು. ಶಾಂತಿ ಮೌನವೇ ಭಾರತೀಯನ ಮುಖ್ಯ ಲಕ್ಷಣ. ಅದರ ಹಿಂದೆ ಇರುವ ಅದ್ಭುತ ಶಕ್ತಿಯನ್ನು ಎಂದಿಗೂ ಹಿಂಸೆಯ ಮೂಲಕ ಪ್ರದರ್ಶಿಸುವುದಿಲ್ಲ. ಯಾವಾಗಲೂ ಭಾರತೀಯನ ಭಾವನೆ ಮೌನವಾಗಿ ಮತ್ತೊಬ್ಬರನ್ನು ಪರವಶಗೊಳಿಸುವುದು. ಅನ್ಯರು ನಮ್ಮ ಸಾಹಿತ್ಯ ಅಧ್ಯಯನಕ್ಕೆ ಪ್ರಯತ್ನಿಸಿದರೆ, ಮೊದಲು ಜಿಗುಪ್ಸೆಯಾಗುವುದು ತಕ್ಷಣವೆ ಅವನನ್ನು ಜಾಗ್ರತಗೊಳಿಸುವುದಿಲ್ಲ. ಯುರೋಪ್ಯರ ರುದ್ರನಾಟಕಗಳನ್ನು ನಮ್ಮ ನಾಟಕಗಳೊಂದಿಗೆ ಹೋಲಿಸಿ ನೋಡಿ ಅವು ತಾತ್ಕಾಲಿಕವಾಗಿ ನಿಮ್ಮನ್ನು ಕೆರಳಿಸುವಂತಹ ಘಟನೆಗಳಿಂದ ತುಂಬಿವೆ: ಆದರೆ ಇದಾದ ಮೇಲೆ ಪ್ರತಿಕ್ರಿಯೆ ಬರುವುದು. ಎಲ್ಲಾ ಮಾಯವಾಗುವುದು. ಭಾರತೀಯ ರುದ್ರನಾಟಕ ಐಂದ್ರಜಾಲಿಕನ ಶಕ್ತಿಯಂತೆ, ಮಂದಗತಿಯಿಂದ ಮೌನವಾಗಿ ಚಲಿಸುವುದು. ಆದರೆ ಅದನ್ನು ಓದುತ್ತಾ ಹೋದರೆ ಪರವಶರಾಗುವಿರಿ. ನೀವು ಚಲಿಸುವುದಕ್ಕೇ ಆಗುವುದಿಲ್ಲ. ಸ್ತಬ್ಧರಾಗುವಿರಿ. ಯಾರು ನಮ್ಮ ಸಾಹಿತ್ಯವನ್ನು ಓದಲು ಮನಸ್ಸುಮಾಡುವರೋ ಅವರೆಲ್ಲ ಇದರಲ್ಲಿ ಭಾಗಿಗಳು; ಚಿರಕಾಲಬದ್ಧರಾಗಿರುವರು.

* * * *


ಆಹಾರದ ನಿಯಮವನ್ನು ಕುರಿತು ನಿಮಗೆ ಸ್ವಲ್ಪ ಹೇಳುತ್ತೇನೆ. ಹಿಂದಿನ ಆಚಾರಗಳೆಲ್ಲ ಈಗ ಮಾಯವಾಗಿವೆ. ಇವನೊಂದಿಗೆ ಊಟಮಾಡಬಾರದು, ಅವನೊಂದಿಗೆ ಊಟಮಾಡಬಾರದು ಎನ್ನುವುದು ಮಾತ್ರ ನಮ್ಮ ದೇಶದಲ್ಲಿ ಈಗ ಉಳಿದಿದೆ. ನೂರಾರು ವರುಷಗಳ ಹಿಂದೆ ನಮಗೆ ಹೇಳಿದ ಒಳ್ಳೆ ವಿಷಯಗಳಲ್ಲಿ ಸ್ಪರ್ಶದೋಷವೊಂದೇ ಉಳಿದಿರುವ ಅವಶೇಷ. ಮೂರು ವಿಧದ ಆಹಾರವನ್ನು ಶಾಸ್ತ್ರ ನಿಷೇಧಿಸುವುದು. ಮೊದಲನೆಯದು ಜಾತಿದೋಷ, ಈರುಳ್ಳಿ ಬೆಳ್ಳುಳ್ಳಿ ಮುಂತಾದುವು. ಇದನ್ನು ಹೆಚ್ಚು ಸೇವಿಸಿದರೆ ಕಾಮೋದ್ರೇಕವಾಗಿ ದೇವರು ಮತ್ತು ಮನುಷ್ಯರಿಗೆ ಆಗದ ಹಲವು ಹೀನಕೃತ್ಯಗಳನ್ನು ಅವನು ಮಾಡಬಹುದು. ಎರಡನೆಯದು ನಿಮಿತ್ತ ದೋಷ. ಬಾಹ್ಯ ವಸ್ತುಗಳಿಂದ ಅಶುದ್ಧವಾದುದು. ಆಹಾರವನ್ನು ಇಡುವುದಕ್ಕೆ ಒಳ್ಳೆಯ ಪರಿಶುದ್ಧವಾದ ಸ್ಥಳವನ್ನು ನೋಡಬೇಕು. ಮೂರನೆಯದೆ ಆಶ್ರಯ ದೋಷ. ದುಷ್ಟ ಜನರು ತಂದ ಆಹಾರವನ್ನು ಸೇವಿಸಬಾರದು. ಅವನ್ನು ಸ್ಪರ್ಶಿಸಿದರೆ ನಮಗೂ ಹೀನ ಭಾವನೆ ಬರುವುದು. ಒಬ್ಬ ಬ್ರಾಹ್ಮಣನ ಮಗನಾದರೂ ಅವನು ಸ್ತ್ರೀಲಂಪಟ ದುಷ್ಕರ್ಮಿ ಆದರೆ ಅವನಿಂದ ಆಹಾರವನ್ನು ಸೇವಿಸಬಾರದು.

ಈ ಆಚಾರದ ಅರ್ಥವೆಲ್ಲ ಈಗ ಮಾಯವಾಗಿದೆ. ಶ್ರೇಷ್ಠ ಕುಲಕ್ಕೆ ಸೇರಿದವನ ಕೈಯಿಂದ ಮಾತ್ರ ಸ್ವೀಕರಿಸಬೇಕು. ಅವನು ಆ ಕುಲಕ್ಕೆ ಸೇರದೇ ಇದ್ದರೆ ಎಷ್ಟೇ ಧರ್ಮಿಷ್ಠನಾದರೂ ಯೋಗ್ಯನಾದರೂ ಸ್ವೀಕರಿಸಕೂಡದು ಎಂಬ ಭಾವನೆ ಮಾತ್ರ ಉಳಿದಿದೆ. ಹಳೆಯ ನಿಯಮಗಳನ್ನೆಲ್ಲ ವಿರಾಯಿ ಮಾಡುವವರು ಅಲ್ಲಗಳೆದಿರುವರು. ಅವನ ಅಂಗಡಿ ನೋಡಿದರೆ ಮಿಠಾಯಿ

(3ನೇ ಪುಟಕ್ಕೆ ಮುಂದುವರಿದಿದೆ)

ಸ್ವಧರ್ಮವನ್ನು ನಿರ್ಧರಿಸುವುದು ಹೇಗೆ?

(ಆಚಾರ್ಯ ವಿನೋಬಾಭಾವೆ)



ಸ್ವಧರ್ಮವನ್ನು ನಿರ್ಧರಿಸುವುದು ಹೇಗೆ ಎಂದು ಕೇಳಿದರೆ 'ಅದು ಸ್ವಾಭಾವಿಕ' ಎಂಬುದೇ ಉತ್ತರ. ಸ್ವಧರ್ಮ ಸಹಜವಾಗಿ ಇರುತ್ತದೆ. ಅದನ್ನು ಹುಡುಕಬೇಕೆಂಬ ವಿಚಾರವೇ ಆಶ್ಚರ್ಯಕರ. ಮನುಷ್ಯ ಹುಟ್ಟಿದಾಗ ಅವನ ಸ್ವಧರ್ಮವೂ ಹುಟ್ಟಿತು. ಮಗು ತಾಯಿಯನ್ನು ಹುಡುಕಬೇಕಾದುದಿಲ್ಲ, ಹಾಗೇ ಸ್ವಧರ್ಮವನ್ನೂ ಹುಡುಕಬೇಕಾದುದಿಲ್ಲ. ಅದು ಮುಂಗಡವಾಗಿಯೆ ಬರುತ್ತದೆ. ನಮಗಿಂತ ಮೊದಲು ಜಗತ್ತು ಇತ್ತು. ನಾವು ಹೋದಮೇಲೂ ಇರುತ್ತದೆ. ನಮ್ಮ ಹಿಂದೆ ದೊಡ್ಡ ಪ್ರವಾಹ ಹರಿಯುತ್ತಿತ್ತು. ಮುಂದೆಯೂ ಹರಿಯುತ್ತದೆ. ಅಂಥ ಪ್ರವಾಹದಲ್ಲಿ ನಾವು ಹುಟ್ಟಿ ಬಂದಿದೇವೆ. ಯಾರ ಹೊಟ್ಟೆಯಲ್ಲಿ ಹುಟ್ಟಿದೆವೋ ಆ ತಂದೆ ತಾಯಿಗಳ ಸೇವೆ, ಯಾರ ನಡುವೆ ಹುಟ್ಟಿದೆವೋ ಆ ರೈತರ ಸೇವೆ, ಇವು ನಮಗೆ ನಿಸರ್ಗವಿತ್ತ ಸಂದೇಶ. ನನ್ನ ವೃತ್ತಿ ನನ್ನ ಅನುಭವದ್ದೇ ತಾನೆ. ನನಗೆ ಹಸಿವಾಗುತ್ತದೆ, ನೀರಡಸುತ್ತದೆ. ಹಸಿದವರಿಗೆ ಅನ್ನ ನೀಡುವ, ನೀರಡಸಿದವರಿಗೆ ನೀರು ಕುಡಿಸುವ, ಧರ್ಮ ನನಗೆ ಅದರಿಂದ ದೊರೆಯಿತು. ಸೇವಾರೂಪದ, ಭೂತದಯಾರೂಪದ ಸ್ವಧರ್ಮವನ್ನು ಹುಡುಕಬೇಕಾದುದಿಲ್ಲ. ಸ್ವಧರ್ಮದ ಶೋಧನೆ ನಡೆಸಿದ ಕಡೆ. ಪರಧರ್ಮದ ಅಥವಾ ಅಧರ್ಮವಿದ್ದಿರಬೇಕೆಂದು ನಿಶ್ಚಯವಾಗಿ ತಿಳಿಯಬೇಕು.

ಸೇವಕನಿಗೆ ಸೇವೆಯನ್ನು ಹುಡುಕುವ ಅಗತ್ಯವೇನು? ಅದು ತಾನೇ ಅವನ ಬಳಿಗೆ ಬರುತ್ತದೆ. ಆದರೆ ಒಂದು ಮಾತು: ಅನಾಯಾಸವಾಗಿ ಲಭಿಸಿದ್ದೆಲ್ಲ ಧರ್ಮವಲ್ಲ. ಒಬ್ಬ ರೈತ ಬಂದು 'ರಾತ್ರಿ ಸ್ವಲ್ಪ ನಮ್ಮ ಬೇಲಿಯನ್ನು ಪತ್ತುಮಾರು ಮುಂದಕ್ಕೆ ಹಾಕೋಣ ಬಾ. ಗದ್ದಲವಿಲ್ಲದೆ ನನ್ನ ಹೊಲ ವಿಸ್ತಾರವಾಗುತ್ತದೆ' ಎಂದು ನನಗೆ ಹೇಳಿದರೆ, ಅದು ಅಸತ್ಯವಾದುದರಿಂದ ನನ್ನ ಕರ್ತವ್ಯವಾಗದು.

ಚಾತುರ್ವರ್ಣ್ಯದಲ್ಲಿ ಸ್ವಾಭಾವಿಕತೆ, ಧರ್ಮ ಇವೆ. ಆದರಿಂದ ನನಗದು ರುಚಿಸುತ್ತದೆ. ಈ ಸ್ವಧರ್ಮವನ್ನು ತಪ್ಪಿಸಲು ಸಾಧ್ಯವಿಲ್ಲ. ಯಾರು ನನ್ನನ್ನು ಪಡೆದರೋ ಅವರೇ ನನ್ನ ತಾಯಿತಂದೆ. ಅವರು ನನಗೆ ಇಷ್ಟವಿಲ್ಲ ಎಂದರೆ ಹೇಗೆ? ತಾಯಿತಂದೆಗಳ ಕಸಬು ಮಕ್ಕಳಿಗೆ ಸ್ವಾಭಾವಿಕವಾಗಿಯೆ ಪ್ರಾಪ್ತವಾಗುತ್ತದೆ. ಹಿಂದಿನಿಂದ ಬಂದ ಕಸಬು ನೀತಿವಿರುದ್ಧವಿಲ್ಲದಿದ್ದರೆ ಅದನ್ನು ಮಾಡುವುದು, ಮುಂಬರಿಸುವುದು ಚಾತುರ್ವರ್ಣ್ಯದ ಮುಖ್ಯ ವಿಶೇಷ. ಇವೊತ್ತು ಚಾತುರ್ವರ್ಣ್ಯ ಕೆಟ್ಟಿದೆ. ಅದನ್ನು ಆಚರಿಸುವುದು ಕಠಿಣವಾಗಿದೆ. ಅದರ ಮಡಿಕೆಯನ್ನು ಅಚ್ಚುಕಟ್ಟಾಗಿ ಇಡಲು ಸಾಧ್ಯವಾದರೆ ಬಹಳ ಆನಂದವಾದುದು, ಅದು ಇಲ್ಲವಾದರೆ ಹೊಸ ಕಸಬು ಕಲಿಯುವುದರಲ್ಲೇ ಮನುಷ್ಯ ಮೊದಲನೆ ಇಪ್ಪತ್ತೈದು ಮೂವತ್ತು ವರ್ಷ ಕಳೆಯುತ್ತಾನೆ. ಕಲಿತ ಮೇಲೆ ಸೇವಾಕ್ಷೇತ್ರದ ಶೋಧನೆ. ಹೀಗೆ ಮೊದಲಿನ ಇಪ್ಪತ್ತೈದು ವರ್ಷ ಶಿಕ್ಷಣದಲ್ಲೆ ಕಳೆಯುತು. ಆ ಶಿಕ್ಷಣ ಬಾಗೆ ಸಂಬಂಧಿಸಿದುದಲ್ಲ. ಇದು ಮುಂದಿನ ಬಾಳಿಗೆ ಸಿದ್ಧತೆ ಎಂದು, ಕಲಿಯುವಾಗ ಯಾರೂ ಬದುಕುವ ಮಾತಿಲ್ಲ. ಏನಿದ್ದರೂ ಅನಂತರ. ಮೊದಲು ಬರೀ ಕಲಿಕೆ, ಅಮೇಲೆ ಬದುಕು. ಶಿಕ್ಷಣ ಬೇರೆ ಜೀವನ ಬೇರೆ— ಹೀಗಾಗಿದೆ. ಆದರೆ ಯಾವುದಕ್ಕೆ ಜೀವನದ ಸಂಬಂಧವಿಲ್ಲವೋ ಅದು ಸಾವು. ಹಿಂದುಸ್ಥಾನದ ಸರಾಸರಿ ಆಯುಸ್ಸು ೨೭ ವರ್ಷ, ಅದರಲ್ಲಿ ೨೫ ವರ್ಷದವರೆಗೆ ಈ ಸಿದ್ಧತೆ. ಹೊಸ ಕಸಬನ್ನು ಕಲಿಯಲು ಬಹಳ ಕಾಲ ಹಿಡಿಯುತ್ತದೆ. ಆ ಮೇಲೆ ಎಲ್ಲಾದರೂ ಕಸಬು ನಡೆಸಬೇಕು. ಅದರಲ್ಲಿ ಉತ್ಸಾಹದ ಎಷ್ಟೋ ಕಾಲ ವ್ಯರ್ಥವಾಗುತ್ತದೆ. ಆ ಹುರುಪು, ಹುಮ್ಮಸ್ಸು, ಸೇವೆಯಿಂದ ದೇಹ ಸಾರ್ಥಕ ಮಾಡುವುದು, ಎಲ್ಲವೂ ವ್ಯರ್ಥ. ಬಾಳು ಆಟವಲ್ಲ. ಆದರೆ ಬಾಳಿನ ಕಸಬನ್ನು ಹುಡುಕುವುದರಲ್ಲೇ ಹುಡುಗನ ಆಯುಷ್ಯ ಪೂರ್ಣವಾಗುತ್ತದಲ್ಲ. ಎಂಥ ದುಃಖದ ಸಂಗತಿ. ಇದಕ್ಕಾಗಿಯೇ ಹಿಂದೂಧರ್ಮ ವರ್ಣಧರ್ಮದ ಯುಕ್ತಿ ಮಾಡಿತು.

ಚಾತುರ್ವರ್ಣ್ಯದ ಕಲ್ಪನೆಯನ್ನು ಬದಿಗಿಡೋಣ. ಆದರೂ ಎಲ್ಲ ರಾಷ್ಟ್ರಗಳಲ್ಲೂ, ಎಲ್ಲೆಡೆಯಲ್ಲೂ, ಚಾತುರ್ವರ್ಣ್ಯವಿಲ್ಲದ ಕಡೆಯೂ, ಎಲ್ಲರಿಗೂ ಸ್ವಧರ್ಮ ಪ್ರಾಪ್ತವಾಗಿದೆ. ನಾವೆಲ್ಲರೂ ಒಂದೇ ಪ್ರವಾಹದಲ್ಲಿ, ಹೆಚ್ಚು ಕಡಿಮೆ ಒಂದೇ ಪರಿಸ್ಥಿತಿಯಲ್ಲಿ ಹುಟ್ಟಿಬಂದವರು. ಆದುದರಿಂದ ಸ್ವಧರ್ಮಾಚರಣರೂಪಿ ಕರ್ತವ್ಯ ತಾನಾಗಿಯೆ ಪ್ರಾಪ್ತವಾಗುತ್ತದೆ. ಅಂತೆಯೇ ದೂರದ ಕರ್ತವ್ಯ-ಎಷ್ಟಾದರೂ ಅದು ಗೌಣವೇ. ಎಷ್ಟೇ ಸೊಗಸಾಗಿದ್ದರೂ ಅದನ್ನು ಹಿಡಿದರೆ ಪ್ರಯೋಜನವಿಲ್ಲ. ಅನೇಕ ಸಲ ದೂರದ್ದು ಅಂದವಾಗಿಯೆ ಕಾಣುತ್ತದೆ. ಮನುಷ್ಯ ದೂರದ್ದಕ್ಕೆ ಬೆರಗಾಗುತ್ತಾನೆ. ನಿಂತಲ್ಲೆ ಮನುಷ್ಯನ ಸುತ್ತಲೂ ಮಂಜು ಕವಿದಿರುತ್ತದೆ. ಆದರೆ ಹತ್ತಿರದ ಮಂಜು ಅವನಿಗೆ ಕಾಣದು. ದೂರ ಬೊಟ್ಟುಮಾಡಿ 'ಅಲ್ಲಿ ಮಂಜು ಇದೆ' ಎನ್ನುತ್ತಾನೆ. ಅಲ್ಲಿಯವನು 'ಇಲ್ಲಿ ಮಂಜಿದೆ' ಎನ್ನುತ್ತಾನೆ. ಮಂಜು ಎಲ್ಲೆಡೆಯಲ್ಲೂ ಇದೆ. ಆದರೆ ಹತ್ತಿರದ್ದು ಕಾಣದು. ಮನುಷ್ಯನಿಗೆ ದೂರದುದರ ಸೆಳೆತ ಹೆಚ್ಚು. ಹತ್ತಿರದ್ದು ತಲೆಗೆ ಹತ್ತುತ್ತದೆ. ದೂರದ್ದು ಕನಸಿನಲ್ಲಿ ಕಾಣುತ್ತದೆ. ಇದು ಮೋಹ. ಇದನ್ನು ತಪ್ಪಿಸಿಕೊಳ್ಳಲೇಬೇಕು. ಸಹಜಪ್ರಾಪ್ತ ಸ್ವಧರ್ಮ ಸರಳವಾದರೂ, ಕೊರೆಯೆನಿಸಿದರೂ, ನೀರಸವಾಗಿ ತೋರಿದರೂ, ನನಗೆ ಯಾವುದು ಸಹಜಪ್ರಾಪ್ತವೋ ಅದೇ ಹಿತ, ಅದೇ ಸುಂದರ. ಸಮುದ್ರದಲ್ಲಿ ಮುಳುಗುತ್ತಿರುವವನಿಗೆ ಸೊಟ್ಟೋ ಡೊಂಕೋ ಅಂತೂ ಒಂದು ಕಟ್ಟಿಗೆ ಸಿಕ್ಕರೆ, ಅದು ನಯವಾಗಿ ಪಾಲಿಷ್ ಮಾಡಿದುದಲ್ಲದಿದ್ದರೂ ಅದು ಅವನನ್ನು ಪಾರುಮಾಡೀತು. ಬಡಗಿಯ ಅಂಗಳದಲ್ಲಿ ಅಂದವಾದ ಕೆತ್ತನೆ ಸಾಮಾನು ಬಹಳ ಇದ್ದಾವು. ಅವು ಅಲ್ಲಿದ್ದರೆ ಈ ಮುಳುಗುವವನಿಗೆ ಏನು ಲಾಭ? ಅವನಿಗೆ ಆ ಸೊಟ್ಟ ತುಂಡೇ ತಾರಕವಾದಂತೆ, ನನಗೆ ಸಹಜವಾಗಿ ಬಂದ ಧರ್ಮ ಹೇಗೇ ಇರಲಿ, ಅದೇ ನನಗೆ ತಾರಕ. ಅದರಲ್ಲಿ ಮಗ್ನನಾಗುವುದೇ

(4ನೇ ಪುಟಕ್ಕೆ ಮುಂದುವರಿದಿದೆ)

(2ನೇ ಪುಟದಿಂದ ಮುಂದುವರಿದುದು.)

ಮೇಲೆಲ್ಲ ನೊಣ ಹಾರಾಡುತ್ತಿರುವುದು. ದಾರಿಯ ಧೂಳೆಲ್ಲ ಅದರ ಮೇಲೆ ಇರುವುದು. ಆ ಮಿಠಾಯಿ ಮಾರುವವನ ಉಡುಪು ಕೂಡ ಶುಭ್ರವಿಲ್ಲ. ಅಂಗಡಿಯಲ್ಲಿ ಮಿಠಾಯಿಯನ್ನು ಗಾಜಿನ ಪೆಟ್ಟಿಗೆಯಲ್ಲಿಡದಿದ್ದರೆ ತೆಗೆದುಕೊಳ್ಳುವುದಿಲ್ಲವೆಂದು ಜನ ಹಟಹಿಡಿಯಬೇಕು. ಇದರಿಂದ ಕಾಲರ ಪ್ಲೇಗು ನೊಣಗಳ ಮೂಲಕ ಹರಡದಂತೆ ಮಾಡಬಹುದು. ನಾವು ಇದನ್ನು ಉತ್ತಮಗೊಳಿಸಬೇಕು. ಆದರೆ ಹಾಗೆ ಮಾಡದೆ ಇನ್ನೂ ಅಧೋಗತಿಗೆ ಇಳಿದಿರುವೆವು. ಮನು ನೀರಿನಲ್ಲಿ ಉಗುಳಬೇಡಿ ಎನ್ನುವನು. ಆದರೆ ನದಿಗೆ ಬೇಕಾದಷ್ಟು ಕಸವನ್ನೆಲ್ಲ ಹಾಕುವೆವು. ಇದನ್ನೆಲ್ಲ ನೋಡಿದರೆ ಬಾಹ್ಯ ಶುದ್ಧಿ ಬಹಳ ಅವಶ್ಯಕವೆಂದು ಕಾಣುವುದು. ಶಾಸ್ತ್ರಕಾರರಿಗೆ ಇದು ಚೆನ್ನಾಗಿ ಗೊತ್ತಿತ್ತು. ಆದರೆ ಈಗ ಆಹಾರ ನಿಯಮದ ಅರ್ಥವೆಲ್ಲ ಮಾಯವಾಗಿ ಬಾಹ್ಯ ಆಚಾರ ಒಂದು ಉಳಿದಿದೆ. ನಮ್ಮ ಜಾತಿಯಲ್ಲೆ ಕಳ್ಳರು, ಕುಡುಕರು, ಕೊಲೆಪಾತಕರು ಇರಬಹುದು. ಆದರೆ ಒಬ್ಬ ಒಳ್ಳೆ ಮನುಷ್ಯ ತನ್ನ ಜಾತಿಗಿಂತ ಕೆಳಗೆ ಇರುವವರೊಂದಿಗೆ ಅವನು ತನ್ನಷ್ಟೇ ಯೋಗ್ಯನಿದ್ದರೂ ಅವನೊಂದಿಗೆ ಊಟಮಾಡಿದರೆ ಅವನನ್ನು ಬಹಿಷ್ಕರಿಸಿದರು. ಇದೊಂದು ನಮ್ಮ ದೇಶದ ದೊಡ್ಡ ದೋಷ. ಪಾಪಿಗಳೊಂದಿಗೆ ಬಂದಾಗ ಪಾಪ ಸೋಕುವುದು, ಪುಣ್ಯಾತ್ಮರ ಸಂಗದಿಂದ ಪುಣ್ಯಬರುವುದು. ಪಾಪಿಗಳಿಂದ ದೂರವಿರುವುದೇ ಬಾಹ್ಯ ಶುದ್ಧಿ ಎಂಬುದನ್ನು ನಾವು ಗಮನದಲ್ಲಿಡಬೇಕು. ಅಂತರಂಗ ಶುದ್ಧಿ ಇದಕ್ಕಿಂತ ಬಹಳ ಕಷ್ಟ. ಸತ್ಯಹೇಳುವುದು, ದೀನರಿಗೆ ಸೇವೆಮಾಡುವುದು, ಕಷ್ಟದಲ್ಲಿದ್ದವರಿಗೆ ಸಹಾಯಮಾಡುವುದು ಇದರಲ್ಲಿದೆ ಅಂತರಂಗ ಶುದ್ಧಿ. ನಾವು ಯಾವಾಗಲೂ ಸತ್ಯವನ್ನು ಹೇಳುವೆವೆ? ಅನೇಕ ವೇಳೆ ಹೀಗೆ ಆಗುವುದು. ಶ್ರೀಮಂತನ ಮನೆಗೆ ತನ್ನ ಸ್ವಂತ ಕೆಲಸಕ್ಕೆ ಹೋಗಿ ದೀನರಕ್ಷಕ ಎಂದು ಅವನನ್ನು ಹೊಗಳುವರು. ಅವನು ತನ್ನ ಮನೆಗೆ ಬರುವ ಬಡವನ ನಾಶಮಾಡುವುದು ಇವನಿಗೆ ಗೊತ್ತಿದ್ದರೂ ಹಾಗೆ ಹೇಳುವರು. ಇದೇನು, ಸುಳ್ಳಲ್ಲದೆ ಬೇರೆಯಲ್ಲ. ಇದೇ ಮನಸ್ಸನ್ನು ಅಶುದ್ಧಿಮಾಡುವುದು, ಹನ್ನೆರಡು ವರುಷ ಯಾರು ಹೀನ ಆಲೋಚನೆಮಾಡದೆ ತಮ್ಮ ಮನಸ್ಸನ್ನು ಶುದ್ಧಿಮಾಡಿಕೊಂಡಿರುವರೊ ಅವರು ಆಡಿದ ಮಾತು ಸತ್ಯವಾಗುವುದರಲ್ಲಿ ಸಂದೇಹವಿಲ್ಲ. ಇದೇ ಸತ್ಯ ಶಕ್ತಿ. ಯಾರು ತನ್ನ ಬಾಹ್ಯ ಮತ್ತು ಅಂತರಂಗವನ್ನು ಶುದ್ಧಿಮಾಡಿಕೊಂಡಿರುವನೊ ಅವನೇ ಭಕ್ತ. ಆದರೆ ವಿಶೇಷವೇ, ಭಕ್ತಿಯೇ ಒಬ್ಬನ ಮನಸ್ಸನ್ನು ಎಷ್ಟೋ ಪಾಲು ಪರಿಶುದ್ಧ ಮಾಡುವುದು. ಯಹೂದ್ಯರು ಮಹಮ್ಮದೀಯರು ಕ್ರೈಸ್ತರು ಹಿಂದೂಗಳಷ್ಟು ಬಾಹ್ಯಶುದ್ಧಿಗೆ ಪ್ರಾಮುಖ್ಯತೆಯನ್ನು ಕೊಡದೇ ಇದ್ದರೂ ಅದು ಸ್ವಲ್ಪ ಹೆಚ್ಚು ಕಡಿಮೆ ಇದ್ದೇ ಇರುವುದು. ಸ್ವಲ್ಪ ಅದೂ ಕೂಡ ಅವಶ್ಯಕ ಎಂದು ಅವರೂ ಭಾವಿಸುವರು.

———

ಕೆಲವು ಗಾದೆಗಳು

ಗಾದೆಗಳು ಅನುಭವದ ಸಾರವಾಗಿವೆ. ಎಲ್ಲ ದೇಶಗಳಲ್ಲಿ, ಎಲ್ಲ ಭಾಷೆಗಳಲ್ಲಿ ಗಾದೆಗಳಿರುತ್ತವೆ. ಒಂದೊಂದು ಪಂಕ್ತಿಯಲ್ಲಿ ಅವು ಧಾರಾಳ ಅರ್ಥ ತುಂಬಿಕೊಂಡು, ಒಂದೊಂದು ವಿಷಯವನ್ನು ಚುರುಕಾಗಿ, ರುಚಿಕರವಾಗಿ, ತಿಳಿಯಾಗಿ ಚಿತ್ರಿಸುತ್ತವೆ. ಕನ್ನಡದಲ್ಲಿ ಗಾದೆಗಳು ಐದು ಸಾವಿರಕ್ಕೂ ಹೆಚ್ಚು ಇದ್ದರೂ, ಈ ವರೆಗೆ ಸುಮಾರು ಮೂರು ಅಥವಾ ಮೂರುವರೆ ಸಾವಿರ ಗಾದೆಗಳು ಮಾತ್ರ ಪ್ರಕಟವಾಗಿವೆ. ನಾವು ಕಳೆದ ಕೆಲವು ವರ್ಷಗಳಲ್ಲಿ ಅಲ್ಲಲ್ಲಿ ಸಂಗ್ರಹಮಾಡಿದ ಗಾದೆಗಳೂ ಹಲವಿದ್ದು, ಐದುಸಾವಿರಕ್ಕೂ ತುಸ ಹೆಚ್ಚು ಗಾದೆಗಳನ್ನು ಸದ್ಯದಲ್ಲಿ ಪ್ರಕಟಿಸಲಿರುವೆವು. ಇಲ್ಲಿ, ಕೆಲವು ಗಾದೆಗಳನ್ನು ಹೆಕ್ಕಿ, ಕೊಡುತಿದ್ದೇವೆ [ಸಂಪಾದಕ: ಪ್ರಭಾತ.]

ಕನ್ನಡ ಗಾದೆಗಳು

೧. ಅಕ್ಕ–ತಂಗಿ ಮಾತಿಗೆ ಬೆಕ್ಕು ತನ್ನ ಒಲೆ ಕಳೆಕೊಂಡಿತು.

೨. ಅಜ್ಜ ಸತ್ತದ್ದು ಕೇಳಿ ಬಲ್ಲ, ಅಪ್ಪ ಸತ್ತದ್ದು ನೋಡಿ ಬಲ್ಲ, ತಾ ಸಾಯುವುದು ಮೊದಲೇ ಬಲ್ಲ.

೩. ಅರಮನೆ ಮುನಿದರೆ ಇರಬಹುದು, ನೆರೆಮನೆ ಮುನಿದರೆ ಇರಲಾಗದು.

೪. ಅಹಂಕಾರದಿಂದ ಹರಿ ಕೆಟ್ಟ, ಭೀಂಕಾರದಿಂದ ಬಲಿ ಕೆಟ್ಟ. (ಭೀಂಕಾರ= ಭಯಂಕರನಾಗಿರುವಿಕೆ.)

೫. ಆಕಾಶ ನೋಡಬೇಕಾದರೆ ನೂಕಾಟ ಯಾಕೆ?

೬. ಆರು ಯತ್ನ ತನ್ನದು, ಏಳನೇದು ದೈವೇಚ್ಛೆ.

೭. ಇಪ್ಪತ್ತು ವರ್ಷದವನಿಗೆ ಹೆಗ್ಗಡೆತನ ಕೊಡಬಾರದು, ಎಪ್ಪತ್ತು ವರ್ಷದವನಿಗೆ ಉಬ್ಬಾಟ ಹತ್ತಬಾರದು.

೮. ಎಮ್ಮೆಗೆ ಎರಡು ಕೋಡು, ಹೆಮ್ಮೆಗೆ ಎಂಟು ಕೋಡು.

೯. ಓದುವದು ಕಾಶಿ ಖಂಡ, ತಿನ್ನುವದು ಮಶಿ ಕೆಂಡ,

೧೦. ಕತ್ತೆಗೆ ಲತ್ತೆ ಪೆಟ್ಟು, ಜಾಣಗೆ ಮಾತಿನ ಪೆಟ್ಟು.

೧೧. ಕೂಳು ಕುತ್ತ, ನೀರು ಪಿತ್ಥ, ಎರಡೂ ಬಿಟ್ಟರೆ ಸತ್ತಾ.

೧೨. ಕುಲಾ ಕಂಡು ಹೆಣ್ಣು, ಮರಾ ಕಂಡು ಬಳ್ಳಿ, ಜಲಾ ನೋಡಿ ಬಾವಿ.

೧೩. ಕೈಯಲ್ಲಿದ್ದರೆ ಅರ್ಥ, ಹತ್ತಿರ ವಿದ್ದರೆ ಹೆಂಡತಿ.

೧೪. ಕೊಟ್ಟು ಕೆಟ್ಟವರಿಲ್ಲಾ, ತಿರಿದು ಬದುಕಿದವರಿಲ್ಲಾ.

೧೫. ಗಡ್ಡಕ್ಕೆ ಬೆಂಕಿ ಹತ್ತಿದಾಗ ದೀಪ ಹಚ್ಚುತ್ತೇನೆ ನಿಲ್ಲು ಅಂದನಂತೆ.

೧೬. ಗಂಡ ಸತ್ತ ದುಃಖ ಬೇರೆ, ಬಡ್ಡು ಕತ್ತಿಯ ಉರಿ ಬೇರೆ.

೧೭. ಗೆದ್ದಲು ಹುತ್ತವಿಕ್ಕಿ ಹಾವಿಗೆ ಮನೆಮಾಡಿತು.

೧೮. ಛತ್ರಚಾಮರ ಒಯ್ದರೆ ಬರಲಿಲ್ಲ, ಕಸಬರಿಗೆ ಒಯ್ದರೆ ಬಂದನಂತೆ.

೧೯. ಜನಾ ನೋಡಿ ಬೇಡಬೇಕು, ಜಾಗಾ ನೋಡಿ ಉಗುಳಬೇಕು.

೨೦. ತಗ್ಗು ಗದ್ದೆಗೆ ಮೂರು ಬೆಳೆ, ಎತ್ತರ ಗದ್ದೆಗೆ ಒಂದೇ ಬೆಳೆ.

೨೧. ತಾನು ಬೂದಿ ತಿಂತಾನೆ, ಪರರಿಗೆ ಹಿಟ್ಟು ಕೊಟ್ಟಾನೇ?

೨೨. ದನ ತಿಂಬುವವನಿಗೆ ಗೊಬ್ಬರದ ಆಣೆಯೇ?

೨೩, ದೊಡ್ಡವನ ಮನೆ ನೋಟ, ಬಡವನ ಮನೆ ಊಟ.

೨೪. ನುಡಿ ಪುರಾತನದ್ದು, ನಡೆ ಕಿರಾತನದ್ದು.

೨೫. ನೆಲ ಬಲವಂತಗೆ, ಕುಲ ನೇಮವಂತಗೆ.

೨೬. ಪಾಲಕಿಯಾಗೆ ಕೂತು, ಕಲ್ಲು ಆರಿಸಿದಂತೆ.

೨೭. ಪೆಟ್ಟೆಲ್ಲಾ ಅವನಿಗೆ, ನೋವೆಲ್ಲಾ ನನಗೆ.

೨೮. ಬಡವರ ಕಂಡರೆ ತಿರುಕನೂ ಸೊಕ್ಕಿದನಂತೆ.

೨೯. ಬಲಿಯ ರಾಜ್ಯ, ವಿಭೀಷಣನ ಸಿರಿ.

೩೦. ಬೀದಿ ಕೂಸು ಬೆಳೆಯಿತು, ಕೋಣೆ ಕೂಸು ಕೊಳೆಯಿತು.

೩೧. ಬೆಟ್ಟಕ್ಕೆ ನಾಯಿ ಬೊಗಳಿ. ಹೊಟ್ಟೆ ಉಬ್ಬಿ ಸತ್ತಿತು.

೩೨. ಬೆಲ್ಲದ ಗಣಪತಿಗೆ ತೊಡೆ ಚಿವುಟಿ ನೈವೇದ್ಯ.

೩೩. ಬೆಲ್ಲದ ಸಿಪಾಯಿ ಮಾಡಿ, ಇರುವೆಯ ಹತ್ತಿರ ಕಳಿಸಿದ ಹಾಗೆ.

೩೪. ಮಕ್ಕಳಿಲ್ಲದವನಿಗೆ ಹೆಂಡತಿ ಮುಂದ್ದು, ಹೆಂಡತಿ ಇಲ್ಲದವನಿಗೆ ತಾನೇ ಮುದ್ದು.

೩೫. ಮಂತ್ರಿಯ ಮನೆ ಹಾಳು, ತಂತ್ರಿಯ ಕುಲ ಹಾಳು.

೩೬. ಮರವೆಲ್ಲಾ ಹಣ್ಣು, ಕೊರಗನ ಕಾಲಿಗೆ ಹುಣ್ಣು.

೩೭. ಮೆದ್ದು ನೋಡು ಮದ್ದಿನ ಗುಣ, ಸೋತು ನೋಡು ಸಂಗಾತಿ ಗುಣ.

೩೮. ಮೈಯೆಲ್ಲಾ ಪುತ್ಥಳಿ ಚಿನ್ನ, ಕಿವಿ ಹಿತ್ತಾಳಿ.

೩೯. ಯಾವ ರಾಯರಿಗೆ ರಾಜ್ಯವಾದರೂ ರಾಗಿ ಬೀಸೋದು ತಪ್ಪದು.

೪೧. ರಾಗಿ ತಿಂದವ ರೋಗಿ, ಅಕ್ಕಿ ತಿಂದವ ಹಕ್ಕಿ.

೪೧. ಲಕ್ಷಕ್ಕೊಬ್ಬ ಭಕ್ತ, ಕೋಟಿಗೊಬ್ಬ ಮುಕ್ತ.

೪೨. ವಿಷ ತಿಂದು ಸಾಯುವವ ಹಾಲು ಕೊಟ್ಟರೆ ಬದುಕ.

೪೩. ಶೀಲವಂತರ ಓಣಿಯಲ್ಲಿ ಕೋಳಿ ಮಾಯೆಯಾಯಿತು.

೪೪. ಸಂಜೆಗೆ ಬಂದ ಮಳೆ ಹೋಗದು, ಸಂಜೆಗೆ ಬಂದ ನೆಂಟನು ಹೋಗ.

೪೫. ಸತ್ಯಕ್ಕೆ ಹೋದವನ ಹೆಂಡತಿ ಬತ್ತಲೆ.

೪೬. ಸೂಳೆಗೆ ಕೊಟ್ಟ ಹಣ ಸುಡುಕಾಡಿಗೆ ಒಯ್ದ ಹೆಣ.

೪೭. ಹಗಲು ಕಾಡಿನಾಗೆ ಮಾತಾಡಬೇಡ, ಇರುಳು ಮನೆಯಾಗೆ ಮಾತಾಡಬೇಡ.

೪೮. ವರಹ ಸಲ್ಲುವಲ್ಲಿ ಹೊನ್ನು ಮುರಿಸಲಿಕ್ಕೆ ಹೋದನಂತೆ.

೪೯. ಶಾನಭೋಗನ ಸಂಬಳ ಸಂತೋಷ ಕೇಳಬೇಡಾ, ಹೆಂಡತಿಯ ಕಡೆಯವರು ಉಂಡರೋ ಕೇಳಬೇಡಾ.

೫೦. ಸಾಲದವರ ಮುಂದೆ ಅಡ್ಡಾಡಬೇಕು, ಅರಮನೆಯ ಹಿಂದೆ ಅಡ್ಡಾಡಬೇಕು.

೫೧. ಸಾಲಮಾಡಿ ಲಗ್ನಮಾಡಬೇಕು, ಗಳಿಕೆಮಾಡಿ ಮನೆಕಟ್ಟಿಸಬೇಕು.

೫೨. ಸಾವಿರ ಕುದುರೆ ಸಾವಕಾರ, ಮನೆ ಹೆಂಡತಿ ಕಾಸ್ತಾರ.

೫೩. ಹಗೆಯುವನ್ನ ಚಂದ್ರ ತಾರಾಬಲ ಕೇಳಿದರೆ ಮಧ್ಯಾಹ್ನಕಾಲಕ್ಕೆ ಮರಣ.

೫೪. ಹಣ ಸೊಕ್ಕಿದವನಿಗೆ ತಿರುಪತಿ, ರಣ ಸೊಕ್ಕಿದವನಿಗೆ ಕಾಳಗ.

೫೫. ಹತ್ತು ಆಡಬಹುದು. ಒಂದು ಬರೆಯಬಾರದು.

೫೬. ಹನುಮಂತರಾಯ ಹಗ್ಗ ತಿನ್ನುವಾಗ ಪೂಜಾರಯ್ಯ ಶಾವಿಗೆ ಬೇಡಿದ

೫೭ ಹಂದಿಗೆ ಹಲವು ಮರಿ, ಸಿಂಹಗೆ ಒಂದೇ ಮರಿ.

೫೮. ಹಸಿವೆಗೆ ಬಾಯಿ ಸವಿ ಬೇಡ, ನಿದ್ದೆಗೆ ಹಾಸಿಗೆ ಬೇಡ.

೫೯. ಹಳ್ಳಿದೇವರ ತಲೆಹೊಡೆದು, ಢಿಲ್ಲಿ ದೇವರ ಹೊಟ್ಟೆ ಹೊರೆದ.

೬೦. ಹಿಂದೆ ಬಯ್ಯಬಾರದು, ಮುಂದೆ ಹೊಗಳಬಾರದು.

೬೧. ಹೆಂಗಸರ ಪ್ರಾಯ ಕೇಳಬೇಡ, ಗಂಡಸಿನ ಸಂಪತ್ತು ಕೇಳಬೇಡ.

೬೨. ಹೊಟ್ಟೆಯಾಗಿನ ಕೂಸು ಹೊಟ್ಟೇಲಿರುವಾಗ ಪುಟ್ಟಪ್ಪ ಎಂತ ಹೆಸರಿಟ್ಟರು.

೬೩. ಹೌದಪ್ಪನ ಮನೆಯಲ್ಲಿ ಹೌದಪ್ಪಾ, ಅಲ್ಲಪ್ಪನ ಮನೆಯಲ್ಲಿ ಅಲ್ಲಪ್ಪಾ.

(3ನೇ ಪುಟದಿಂದ)

ನನಗೆ ಶೋಭಾಯಮಾನ. ಆದರಿಂದಲೇ ನನಗೆ ಉದ್ಧಾರ. ಬೇರೆ ಸೇವೆಗಾಗಿ ಅರಸುತ್ತಾ ಹೋದರೆ ಅದು ಸಿಗದು, ಇದು ಉಳಿಯದು. ಹೀಗಾಗಿ ಕಡೆಗೆ ಸೇವಾವೃತ್ತಿಯೇ ದೂರವಾಗುತ್ತದೆ. ಅಂತೇ, ಸ್ವಧರ್ಮರೂಪಿ ಕರ್ತವ್ಯದಲ್ಲಿ ಮಗ್ನನಾಗಿರಬೇಕು.

ಸ್ವಧರ್ಮದಲ್ಲಿ ಮಗ್ನನಾದರೆ ರಜೋಗುಣ ಬಾಡುತ್ತದೆ. ಚಿತ್ತ ಏಕಾಗ್ರವಾಗುತ್ತದಲ್ಲ. ಆದುದರಿಂದ ಸ್ವಧರ್ಮಕ್ಕೆ ವ್ಯತಿರಿಕ್ತ ಅದು ಓಡದು. ಅದರಿಂದ ಚಂಚಲ ರಜೋಗುಣದ ರಭಸ ಕರಗಿಹೋಗುತ್ತದೆ. ಶಾಂತವೂ ಆಳವೂ ಆಗಿದ್ದರೆ, ಎಷ್ಟೇ ನೀರು ಹರಿದುಬರಲಿ, ಅದನ್ನು ಹೊಳೆ ತನ್ನ ಗರ್ಭದಲ್ಲಿ ಒಳಗಿಸಿಕೊಳ್ಳುತ್ತದೆ. ಮಂನುಷ್ಯನ ಸರ್ವಬಲ, ಸಮಸ್ತ ವೇಗ, ಸಕಲ ಶಕ್ತಿಯನ್ನೂ ಸ್ವಧರ್ಮದ ನದಿ ಧರಿಸಬಲ್ಲದು. ಸ್ವಧರ್ಮದಲ್ಲಿ ಎಷ್ಟು ಶಕ್ತಿ ತುಂಬಿದರೂ ಕಡಮೆಯೇ. ಸ್ವಧರ್ಮದಲ್ಲಿ ಶಕ್ತಿ ತುಂಬಿದರೆ ರಜೋಗುಣದ ಹಾರಾಟ ಮುಂಗಿಯುತ್ತದೆ. ಚಂಚಲತೆಯ ಕೊಂಡಿ ಮುರಿದಂತಾಗುತ್ತದೆ. ಹೀಗೆ ರಜೋಗುಣವನ್ನು ಸೋಲಿಸಬೇಕು.

ಆರಿಸಿದ ಕೆಲವು ತುಳುಗಾದೆಗಳು

೧. ಇಲ್ಲ್‌ಡ್ ಜನ ದಿಂಜ ಆವೆರೆ ಆವಂದ್, ಓಡೊಡು ಸರಕ್ ದಿಂಜ ಆವೆರೆ ಆವಂದ್.

—ಮನೆಯೊಳಗೆ ಜನ ಹದಮೀರಿ ತುಂಬಿರಬಾರದು, ದೋಣಿಯಲ್ಲಿ ಸರಕು ಹದಮೀರಿ ತುಂಬಬಾರದು.

೨. ಉಣಂದೆ ಇತ್ತ್ಂಡ ಒಂಜಿ ಸಂಕಡ, ಉಣುಂಡ ರಡ್ಡ್ ಸಂಕಡ.

—ಉಣ್ಣದೆ ಇದ್ದರೆ ಒಂದು ಸಂಕಟ, ಉಂಡರೆ ಎರಡು ಸಂಕಟ.

೩. ಎಲಿ ತೆಲಿ ಪರಂದ್, ಪಿಲಿ ನೆಲ್ಲಿದ ಮರತಡಿಟ್ ಜೆಪ್ಪಂದ್.

—ಇಲಿ ಗಂಜಿನೀರು ಕುಡಿಯೋದಿಲ್ಲ, ಹುಲಿ ನೆಲ್ಲಿಕಾಯಿ ಮರದಡಿಯಲ್ಲಿ ಮಲಗೋದಿಲ್ಲ.

೪. ಒಂತೆ ಪೇರ್‌ದ ಪೆತ್ತ ತೊರಿಪುನಿ ಎಚ್ಚಗೆ.

—ಸ್ವಲ್ಪವೇ ಹಾಲಿನ ಹಸು, ಒದೆಯುವುದು ಹೆಚ್ಚಂತೆ.

೫. ಒಂಜಿ ದಿನತ ಆಟೊಗು ಪಂಬದೆ ಮೀಸೆ ಗೀಸಾದೆಗೆ.

—ಒಂದು ದಿನದ ಆಟಕ್ಕೆ ಪಂಬದ ಮೀಸೆ ಬೋಳಿಸಿದನಂತೆ.

೬. ಕಂಚಲ ಇತ್ತ್ಂಡ ಎಂಚಲಾ ಉಣೊಲಿ.

—ಹಾಗಲಕಾಯಿ ಇದ್ದರೆ ಹೇಗೂ ಉಣಬಹುದು.

೭. ಕಂಡಣ್ಯ ದುಃಖ ಪಂಡ್‌ಪಂಡ್‌ದ್ ಅರ್ಪಳ್‌ಗೆ. ಮಿಂಡ ದುಃಖ ಎಣ್ಣ್ ಎಣ್ಣ್‌ದ್ ಅರ್ಪಳ್‌ಗೆ.

—ಗಂಡನಿಗೆ ದುಃಖ ಹೇಳಿ ಹೇಳಿ ಅಳುತ್ತಾಳಂತೆ, ಮಿಂಡನ ದುಃಖ ನೆನೆನೆನೆದು ಅಳುತ್ತಾಳಂತೆ.

೮. ಕತ್ತೆರಿಲಾ ಬೀಸತ್ತಿಲಾ ನ್ಯಾಯ ಮಳ್ತೊಂಡಿ ಲೆಕ್ಕ.

—ಕತ್ತರಿಯೂ ಚೂರಿಯೂ ಜಗಳಾಡಿಕೊಂಡಂತೆ.

೯. ಕಪ್ಪಲ್ ದಿಂಜಾವೆರೆ ಪೋಯಿನಾಯೆ ಬೈದೆಗೆ, ಬಂಜಿದಿಂಜಾವೆರೆ ಪೋಯಿನಾಯೆ ಬೈದಿಜೆಗೆ.

—ಹಡಗು ತುಂಬಿಸಲು ಹೋದಾತ ಬಂದಿರುವನಂತೆ, ಹೊಟ್ಟೆತುಂಬಿಸಲು ಹೋದವನು ಮರಳಲಿಲ್ಲವಂತೆ.

೧೦. ಕರಿಯ ಬ್ರಾಣನ್ ನಂಬೆರೆ ಬಲ್ಲಿ, ಬೊಳ್ಯ ಮಾನ್ಯನ್ ನಂಬೆರೆ ಬಲ್ಲಿ.

—ಕರಿಯ ಬ್ರಾಹ್ಮಣನನ್ನು ನಂಬಬಾರದು, ಬಿಳಿಯ ಹೊಲೆಯನನ್ನು ನಂಬಬಾರದು.

೧೧. ಕಾಂಡೆದ ದೊಂಬು ಪಡಿಕೆ, ಕಾಷ್ಟದ ಪುಗೆ ಪಡಿಕೆ.

—ಬೆಳಗ್ಗಿನ ಬಿಸಿಲು ಕೆಟ್ಟದ್ದು, ಚಿತೆಯ ಹೊಗೆ ಕೆಟ್ಟದ್ದು.

೧೨. ಕಾಲ್ ಪಣವುದ ಪುಚ್ಚೆಗ್ ಮುಕ್ಕಾಲ್ ಪಣವುದ ಪೇರು.

—ಕಾಲು ಹಣದ ಬೆಕ್ಕಿಗೆ ಮುಕ್ಕಾಲು ಹಣದ ಹಾಲು.

೧೩. ಕಾಸ್ ಉಂಡುಡ ಕುಡಲ, ಇಜ್ಜಿಡ ನಡಿಯಲ.

—ಕಾಸು ಇದ್ದರೆ ಕೊಡಿಯಾಲ (ಮಂಗಳೂರು), ಇಲ್ಲದಿದ್ದರೆ ನಡಿಯಾಲ.

(18ನೇ ಪುಟಕ್ಕೆ ಮುಂದುವರಿದಿದೆ)

ಸಾಮಾನ್ಯ ದಿಗ್ದರ್ಶನ

(1) ಠಾಣೆದಾರ ರಾಘಪ್ಪನು ಅಜಾನುಬಾಹು ವಾಗಿರಬೇಕು. ಹಣೆಯ ಮೇಲಿನ ನೆಂಗೆ, ಕಣ್ಣಲ್ಲಿ ತುಂಬಿದ ನೀರು ಮತ್ತು ಮುಖದ ಮೇಲೆ ಬೆಳೆದ ಗಡ್ಡದಿಂದ ಈತನು ಬಹುಕಾಲ ದಿಂದ ದುಃಖದಿಂದ ಕೊರಗಿರುವನೆಂಬುದು ತಿಳಿ ಯುತ್ತಿರಬೇಕು. ಹಾಗೂ ಅವನ ಮಾತಿನ ಸ್ವರಗಾಂಭೀರ್ಯ, ನಿಧಾನವಾದ ದೃಷ್ಟಿ ಚಲನೆ, ಸಿಂಹದಂಥ ಮುಖಮುದ್ರೆಯಿಂದ ಈತನು ನಿರ್ಧಾರ ಮನಸ್ಸಿನವನೂ ತ್ಯಾಗಿಯೂ ಎಂಬು ದು ವ್ಯಕ್ತವಾಗಬೇಕು.

(2) ರಹೀಮ: ಇವನೊರ್ವ ಮುಸಲ್ಮಾನ್ ಗೃಹಸ್ಥನು. ಈತನ ಮುಖದಲ್ಲಿ ಚಂಚಲತೆ ಹಾಗೂ ಕ್ರೂರತನಗಳನ್ನು ಉಂಟು ಮಾಡಲು ತಕ್ಕಂತೆ ಒಪ್ಪುವವರೇ ಇದನ್ನು ಅಭಿ ನಯಿಸುವದು ಉತ್ತಮ. ಮುಖ ಸ್ವಲ್ಪ ಉದ್ದ ವಾಗಿದ್ದು, ಹಲ್ಲು ಮುಂದೆ ಕಾಣುವವರು ಹಾಗೂ ಉದ್ದ ಮೂಗಿನವರಿಗೆ ಇದು ಉತ್ತಮ ವಾಗಿ ಒಪ್ಪುವದು. ಅವನಿಗೆ ಕನಿಷ್ಠ 2 ವರುಷ ದಿಂದ ಬೆಳೆದುಬಂದ ಪ್ರಮಾಣದ ಗಡ್ಡವಿರ ಬೇಕು. ಅದು ಮೇಲಿನ ಕಡ್ಡಿಮೀಸೆ ಯಲ್ಲಿ ಕೂಡಿಕೊಂಡು ಮಧ್ಯದಲ್ಲಿ ಕಾಣುವ ಅವನ ದಂತ ಸೌಂದರ್ಯದಿಂದ ಈತನು ಶ್ವಪಚ, ಹಾಗೂ ಕ್ರೂರನೆನ್ನಲು ಬೇರೆ ಯಾವ ಕೃತ್ರಿಮ ಸಾಧನಗಳೂ ಬೇಡ, ಅವನ ಮಾತು ಗಳು ಬೆದರಿದಂತೆಯೂ, ಬೆದರಿಸುವಂತೆಯೂ ಇರುವದು ಅವಶ್ಯ. ಈ ಪಾತ್ರವೆಷ್ಟು ಎದ್ದು ಕಾಣುವದೋ ಅಷ್ಟೇ ನಾಟಕದ ಜೀವಕಳೆ ತುಂಬುವದು.

(3) ನಜಮಾ: ಈಕೆ ಮಗುವನ್ನು ಕಳೆದು ಕೊಂಡ ಓರ್ವ ತಾಯಿ. ಇವಳ ದೀನ ಹಾಗೂ ದುಃಖಿತ ಮುಖಮುದ್ರೆಯೇ ಈ ಪಾತ್ರದ ಜೀವಾಳ. ಅಲಗು ಧ್ವನಿಯಿಂದ ಮಾತಾಡ ಬೇಕಾದರೂ ನಾಟಕ ನೋಡುವವರಿಗೆ ಕೇಳಿಸು ವಂತೆ ಇವಳ ಮನದ ಬಿಸಿಯುಸಿರು ನಾಟಕದ ಮಾತಾಗಿ ಹೊರಡಬೇಕು. ಈಕೆಯ ಮಾತು ಗಳು ಹೃದಯದಿಂದ ಸ್ವರಗೂಡಿ ಹೊರಟರೆ ಮಾತ್ರ, ಮಾತಿಗೆ ಸರಿಯಾಗಿ ಮುಖಮುದ್ರೆ ಯಾಗಿ ದುಃಖಿತ ಉಸಿರಿಗೆ ಸರಿಯಾಗಿ ಕಣ್ಣಲ್ಲಿ ನೀರು ಬರುವದು. ಕೆಲವು ನಟರು ಸ್ತ್ರೀಪಾತ್ರ ವೆಂದಾಕ್ಷಣ ಕೇವಲ ಗಂಟಲ ಬಿಗಿಹಿಡಿದು ಸಪೂರ ಧ್ವನಿಯಿಂದ ಮಾತಾಡಿ ಜನಮೆಚ್ಚುಗೆ ಪಡೆಯಲು ಪ್ರಯತ್ನಿಸುತ್ತಾರೆ. ಆದರೆ, ಭಾವನಾಮಯವಾದ ಯಾವದೇ ಪಾತ್ರಕ್ಕಾ ದರೂ ಇದು ವಿಷಪ್ರಾಯವಾದುದು. ಹೃದಯ ದಿಂದ ಮಾತುಬಾರದೆ ಭಾವನೆ ಮೂಡದು. ಕಾರಣ ವಾತ್ಸಲ್ಯದಿಂದ ತುಂಬಿದ ತಾಯಿಯು ತನ್ನ ಮಗುವಿನ ಸಮಾಧಿಯ ಮುಂದೆ ಕುಳಿತು ತನ್ನ ಮಗುವೇ ತನ್ನ ಮುಂದೆ ನಲಿಯುತ್ತಿದೆ ಎಂಬ ಭಾವನೆಯನ್ನು ಆವ್ಹಾನಿಸಿಕೊಳ್ಳುವ ಈ ನಾಟಕದ ಸಂದರ್ಭದಲ್ಲಿ ತಾನು ತನ್ನನ್ನೇ ಮರೆತಿರುವೆನೆಂಬಷ್ಟು ಅಚ್ಚುಕಟ್ಟಾಗಿ ಈ ಪಾತ್ರ ವನ್ನು ಅಭಿನಯಿಸಬೇಕು.

(4) ಸುರಮಾ: 4 ವರ್ಷದ ಒಂದು ಹೆಣ್ಣು ಮಗು. ಮುದ್ದುಮುದ್ದಾಗಿ ತೊದಲುನುಡಿ ಮಾತಾಡುವಂತಿದ್ದು, ರಂಗಭೂಮಿಗೆ ಬರುತ್ತ ಲೇ ಜನರನ್ನು ಕಂಡು ಹೆದರಿ ಒಳಗೆ ಓಡಿ ಹೋಗದಂಥ ದಿಟ್ಟ ಮಗುವಿರಬೇಕು. ನೋ ಡಲು ದುಂಡಾಗಿ, ಗಿಡ್ಡನ ದೇಹ, ಹಾಗು ಎಡ ಗಲ್ಲದ ಮೇಲೆ ಒಂದು ಚಿಕ್ಕ ಇದ್ದು ರಾಷ್ಟ್ರಗೀತ ವನ್ನು ಅದರಿಂದ ರಂಗದಲ್ಲಿ ಹೇಳಿಸಬೇಕು.

(5) ಹಾವು: ಇದು ಕೃತ್ರಿಮವಾಗಿಯೇ ಇರ ಬೇಕು. ಆದರೂ ಅದರ ಬಣ್ಣ ಆಕಾರಗಳು ಹಾವಿನಂತೆ ಭಾಸವಾಗಬೇಕು. ಅದರ ಚಲನ ವಲನಗಳು ಒಳಗಿನ ಕಪ್ಪುಹಗ್ಗದಿಂದ ನಡೆಸು ತ್ತಿದ್ದರೂ ರಂಗದಲ್ಲಿ ಅಭಿನಯಿಸುವವರ ಕಾಲಲ್ಲಿ ಆ ಕಪ್ಪುಹಗ್ಗ ತೊಡಕುಬಿದ್ದು ಮಧ್ಯ ನಾಟಕ ದಲ್ಲಿಯೇ ಆ ಹಾವು ಕೆಲಸಕ್ಕೆ ಬಾರದಂತಾಗ ಬಾರದು.

ಏಕಾಂಕ ನಾಟಕ.

ಪತಿತಪಾವನ

(ರಚಯಿತರು: ಶ್ರೀ| ಆರ್. ಡಿ. ಕಾಮತ್, ಮುಂಬಯಿ)



ಲೇಖಕರು.

ಪಾತ್ರಗಳು

ಠಾಣೇದಾರ ರಾಘಪ್ಪ (೪೦ ವರ್ಷ ವಯಸ್ಸು)
ರಹೀಮ (೩೫ ವರ್ಷ ವಯಸ್ಸು)
ನಜಮಾ (ರಹೀಮನ ಹೆಂಡತಿ)
ಸುರಮಾ (ನಜಮಾನ ಮಗು)

ದೃಶ್ಯ

(ರಂಗದ ಮಧ್ಯೆ ಶುಭ್ರ ಬೆಳಕಿದ್ದು ಬದಿಗೆ ಕತ್ತಲಿರಲಿ.) ಈ ನಾಟಕಕ್ಕೆ ಮೊದಲಿಂದ ಕೊನೆಯಂತನಕ ಒಂದೇ ದೃಶ್ಯವಿದ್ದ ಕಾರಣ ದಿಂದ ಇಡೀ ರಂಗವನ್ನು ದೃಶ್ಯಕ್ಕಾಗಿಯೂ ಅಭಿನಯಿಸುವವರಿಗೆ ಸರಿಯಾಗಿ ಸ್ಥಳಾವ ಕಾಶವಾಗುವಂತೆ ನಿರ್ಮಿಸುವದು ಅಗತ್ಯ.

ರಂಗದ ಅತ್ಯಂತ ಹಿಂದೆ ಒಂದು ಮಸುಕಾಗಿ ಕಾಣುವ ದೂರದ ದಿಗಂತ, ಅದರ ಮುಂದೆ ಅಲ್ಲಲ್ಲಿ ಸುಟ್ಟುಹೋದ ಮನೆಗಳ ಕಲ್ಲಿನ ಗೋಡೆಗಳ ಅವಶೇಷ ಕಾಣುತ್ತಿರ ಬೇಕು. ರಂಗದ ಬಲಬದಿಯಲ್ಲಿ ಒಂದು ಗಂಡಿಸಲು ಅರ್ಧ ಕಾಣುತ್ತಿರಬೇಕು. ಎಡ ಬದಿಯಲ್ಲಿ ಒಂದು ಮುದಿ ಮರದ ಬೊಡ್ಡೆ ನಿಂತಿದ್ದು ಅದು ಯಾವುದೊ ಬೆಂಕಿಯ ಹಾವಳಿಯಲ್ಲಿ ತನ್ನ ಕೊಂಬೆರೆಂಬೆಗಳನ್ನೆಲ್ಲ ಕಳೆದುಕೊಂಡಂತೆ ಕಂದು ಕಪ್ಪಾಗಿ ಕಾಣುತ್ತಿರ ಬೇಕು. ರಂಗದ ಮಧ್ಯದಲ್ಲಿ ಎರಡು ಸಮಾಧಿಗಳಿದ್ದು, ಒಂದು ದೊಡ್ಡದಾಗಿಯೂ ಮತ್ತೊಂದು ಪುಟ್ಟ ಮಗುವಿನದೆಂದು ಆಕಾರದಿಂದ ತಿಳಿಯುತ್ತಿರಬೇಕು. ಅದರ ಮುಂದೆ ಎರಡು ನಂದಾ ದೀಪಗಳು ಉರಿ ಯುತ್ತಿರಬೇಕು ಮತ್ತು ಬದಿಗೆ ಕೂಡ್ರಲು ಅನುಕೂಲವಾಗುವ ಒಂದು ಕಲ್ಲುಬಂಡೆ, ಅದರ ಸುತ್ತಲೂ ಹುಲ್ಲು ಬೆಳೆದಿದ್ದು ಹಾವಿಗೆ ಮರೆಯಾಗಲು ಅದು ಆಶ್ರಯವಾಗಿ ರಬೇಕು. ಮಧ್ಯರಾತ್ರಿಯ ಸಮಯ ಅಲ್ಲಲ್ಲಿ ದೂರದ ಕತ್ತಲೆಯಲ್ಲಿ ಮಿಣುಕು ಹುಳಗಳು ಹೊಳೆಯುತ್ತಿವೆ. ದೂರದಿಂದ ನಾಯಿಯ ಕೂಗು ಕೇಳುತ್ತಿದೆ. ಇಂಥಹ ಭೀಕರ ದೃಶ್ಯದಿಂದ ನಾಟಕದ ಪ್ರಾರಂಭ ವಾಗುತ್ತದೆ. ಒಂದು ವ್ಯಕ್ತಿಯು ಕೈಯಲ್ಲಿ ಲಾಟಾನು ಹಿಡಿದು ಮೆಲ್ಲಮೆಲ್ಲನೆ ಹೂಹಿಡಿದು ಸಮಾಧಿಗಳ ಬಳಿಗೆ ಬರುವನು. ಅವನೇ ರಾಘಪ್ಪನು. ಮಂದ್ರಧ್ವನಿಯಲ್ಲಿ ಉಕ್ಕುವ ದುಃಖವನ್ನು ತಡೆಯುತ್ತ ಏನನ್ನೊ ಹಾಡುತ್ತಾ ಬರುವನು.)

ರಾಘಪ್ಪ:—ಬೆಳಗು ಬಂದಿತಯ್ಯಾ
ದೇಶಕೆ ಸೌಭಾಗ್ಯ ತಂದಿತಯ್ಯಾ ॥
ಸರ್ವಧರ್ಮಧರಿಸಿ । ಮನದಾತ್ಮ
ಒಂದೆ। ಎನಿಸಿ।
ಭಾಗ್ಯ ಬಂದಿತಯ್ಯಾ । ದೇಶಕೆ ಸೌಭಾಗ್ಯ
ತಂದಿತಯ್ಯಾ ॥
ಎಚ್ಚರಗೊಳಿರಯ್ಯಾ । ಮೆಚ್ಚಿದೆ ಲೋಕ
ನಮಗಯ್ಯಾ ।
ಉಚ್ಚನೀಚರೆಂಬ। ಬಿಡಿ
ಹುಚ್ಚತನವಿದಯ್ಯಾ ।
ಕೆಚ್ಚಿದೆ ಭಾರತ। ಶಾಂತಿ ಅಹಿಂಸೆ।
ಪಾಡಿ ಹೇಳಿರಯ್ಯಾ ।
। ಸೌಭಾಗ್ಯ ಬಂದಿತಯ್ಯಾ ॥

(ರಾಘಪ್ಪನು ಸಮಾಧಿಗಳಿಗೆ ಹೂಹಾಕಿ ತಲೆಬಾಗಿ)

ರಾಘಪ್ಪ:—ಲಕ್ಷ್ಮೀ....ಇಂದು ಅದೇ ಆ ಮಧ್ಯರಾತ್ರಿ. ದೇಶಮಾತೆಯು ಸ್ವಾತಂತ್ರ್ಯಸಿಂಹಾಸನವನ್ನೇರಿದ ನಾಲ್ವತ್ತುಕೋಟಿ ಜನತೆಯ ಸಂಭ್ರಮದ ರಾತ್ರಿ. ಆಗಸ್ಟ ೧೪ರ ಮಧ್ಯರಾತ್ರಿ. ಇಂದು ಭಾರತ ಸಾಮ್ರಾಜ್ಯ ಲಕ್ಷ್ಮಿಯ ಪೂಜೆಗಾಗಿ ಹಿಮಾಚಲನು ಮೋಡಗಳ ಮೇಲೆ ಕೈ ಎಳೆದು ಮೃದಂಗ ನುಡಿಸುತ್ತಿರುವನು. ರತ್ನಾಕರನು ಆನಂದದಿಂದ ತನ್ನ ಗರ್ಭದೊಳಗಿನ ರತ್ನಗಳನ್ನು ತೂರುತ್ತಾ ತೆರೆಗಳ ನಾದದೊಡನೆ ನಿನ್ನ ಜಯಘೋಷ ಮಾಡುತ್ತಿರುವನು; ಸುವರ್ಣ ಲಂಕೆಯಿಂದ ರಜತಗಿರಿಯತನಕ ತುಂಬಿದ ಆ ನಿನಾದದಲ್ಲಿ ಲಕ್ಷ್ಮೀ ಅದೇ ನುಡಿ, ನಿನ್ನ ನುಡಿ ಕೇಳಿಬರುತ್ತಿದೆ.

(ಒಳಗಿನಿಂದ ಮುಂದಿನ ಹಾಡು ಕೇಳುವದು; ರಾಘಪ್ಪನು ಅದರೊಡನೆ ತನ್ನಧ್ವನಿ ಗೂಡಿಸುವನು)

ಧರ್ಮ ಯಾವುದಯ್ಯ। ದಯೆಯೆ।
ಧರ್ಮವು ನಿಜವಯ್ಯಾ ।
ಅಚ್ಚಿನೊಳಗೆ ಮೆಚ್ಚಿ । ಜಗಪ್ರೇಮ
ಧರ್ಮ ಹೆಚ್ಚಿ ।

ಕೆಚ್ಚೆದೆ ಭಾರತ। ಧರ್ಮದ। ಹೆಸರಾ
ಬಿಚ್ಚಿಹೇಳಿರಯ್ಯಾ।
ಸಮತೆಯ ಗೀತ। ಹಾಡಿರಯ್ಯಾ।

(ಹಾಡು ಮುಗಿಯುತ್ತಲೇ ಕಣ್ಣನ್ನೊರಸಿಕೊಂಡು ಒಂದು ಶ್ವಾಸ ಹಾಕಿ)

ಇಂದಿಗೆ ಸರಿಯಾಗಿ ಒಂದು ವರ್ಷವಾಯಿತು. ಮುಸ್ಸಂಜೆಯ ಹೊತ್ತು ನೀನು ಹಸಿರು ಸೀರೆ ಉಟ್ಟು ದೊಡ್ಡ ಕುಂಕುಮ ತಿಲಕವನ್ನಿಟ್ಟುಕೊಂಡು ಮಗುವನ್ನು ಕಂಕುಳಲ್ಲಿ ಎತ್ತಿಕೊಂಡು ಬಂದು ನನ್ನೊಡನೆ ಕೇಳಿದೆ....ಇಂದು ಭಾರತಕ್ಕೆ ಸ್ವಾತಂತ್ರ್ಯ ಸಿಗುವದು; ಇಂದಿನ ಮಧ್ಯರಾತ್ರಿ ಮಹಾತ್ಮಾಗಾಂಧಿಯವರ ತಪಸ್ಸು ಫಲಿಸುವದು. ಹಳ್ಳಿಯ ಜನರೆಲ್ಲ, ಧ್ವಜವಂದನೆಗೆಂದು ಅದೋ ನೋಡಿ ಭಾರತದ ಗಡಿಗೆ ಸಾಗಿರುವರು. ತೀರ ಸಮೀಪವಿದೆ. ನಾನೂ ಹೋಗಿಬರಲೇ ಎಂದು ಕೇಳಿದೆ....ಆದರೆ ಲಕ್ಷ್ಮೀ ಆಗ ನಾನು ಹೇಡಿ ರಾಘಪ್ಪನಾಗಿದ್ದೆ, ನವಾಬನ ಗುಲಾಮನಾಗಿದ್ದೆ, ನಾನು ನಿನ್ನ ಆಶೆಯನ್ನು ನಿರಾಕರಿಸಿದೆನು, ನಿನ್ನನ್ನು ತಡೆದು. ಲಕ್ಷ್ಮೀ ಭಾರತಕ್ಕೆ ಸ್ವಾತಂತ್ರ್ಯ ಬಂದಿರುವದೇನೊ ನಿಜ, ಆದರೆ ಇದರ ಮುಂದಿನ ಭಯಾನಕ ಪರಿಣಾಮವೇನಿದೆಯೊ ಏನೊ! ಸರಹದ್ದಿನ ವಾಸಿಗಳಾಗಿರುವ ನಾವು ಎಷ್ಟು ಎಚ್ಚರ ವರ್ತಿಸಿದರೂ ಸಾಲದು. ಲಕ್ಷ್ಮೀ, ಭಾರತದ ಅಭಿಮಾನ ನಮ್ಮ ಮನದಲ್ಲಿದ್ದರೂ. ನವಾಬರ ಪ್ರಜೆಗಳಾದ ನಾವು ಒಂದು ಬದಿಯಿಂದ ಮೊಗಲಾಯ ನಿಬಂಧನೆ, ಮತ್ತೊಂದು ಬದಿಯಿಂದ ರಜಾಕಾರರ ಚಿತ್ರಹಿಂಸೆ ಇವೆರಡರಿಂದಲೂ ಬದುಕಿಕೊಳ್ಳಬೇಕಾದರೆ, ರಾಷ್ಟ್ರಪ್ರೇಮದ ಅಧಿಕ ಪ್ರಸಂಗವನ್ನು ನಾವು ಮಾಡಬಾರದು. ನಿನ್ನ ಮುಖ ಬಾಡಿತು ಮರುಮಾತಾಡದೇ ಒಳಗೆ ನಡೆದೆ. ಇದೇ ನಾನು ನಿನ್ನೊಡನೆ ಮಾತಾಡಿದ ಕೊನೆಯ ಮಾತು. ಆ ಮೇಲೆ....ನಾನು ಸರಹದ್ದಿನ ಠಾಣೆಯ ಕಾವಲಿಗೆ ಹೋದೆ....ಆ ಮೇಲೆ. ಆಮೇಲೆ....ಲಕ್ಷ್ಮೀ (ಭ್ರಮಿಷ್ಟನಂತಾಗಿ) ರಕ್ತದ....ರಕ್ತದ ಓಕಳಿಯಾಯಿತು, ಬೆಂಕಿ ಉರಿದೆದ್ದು ನನ್ನ ಸಂಸಾರ, ಸಂಪತ್ತು, ಹೆಂಡತಿ, ಮಗೂ. ಸರ್ವಸ್ವ ಹೋಯಿತು. ಎಲ್ಲಾ ಹೋಯಿತು....ನನ್ನ ಪಾಲಿನ ಲೋಕವೇ ಮುಳುಗಿತು....ಆದರೆ ನಾನು ಸಾಯಲು ಆಗಲಿಲ್ಲ....ಯಾವುದೊ ಪುಟ್ಟ ಮಗು ಬಂದು ಕತ್ತಲೆಯಲ್ಲಿ ನನ್ನ ಕಾಲಿಗೆ ಅಪ್ಪಿಕೊಂಡು ಅಬ್ಬಾಜಾನ್, ಅಬ್ಬಾಜಾನ್ ಎಂದು ಕೂಗಿತು....ಆ ಮಾಯೆ ಆ ಅಪರಿಚಿತ ಮಾಯೆ ನನ್ನ ಹೃದಯವನ್ನು ಆವರಿಸಿ ಪುನಃ ನನ್ನನ್ನು ಬದುಕಲು ಪ್ರೇರೇಪಿಸಿತು....ಲಕ್ಷ್ಮೀ ಆ ಮಗು....ನಿನ್ನ ನನ್ನ ಮಗುವಾದ ಗಿಳಿಯಂತೆಯೇ ಇದೆ. ಲಕ್ಷ್ಮೀ (ಚೀರುತ್ತಾ) ನಮ್ಮ ಗಿಳಿಯಂತೆಯೇ ಇದೆ. (ಸಮಾಧಿಯನ್ನೇ ದಿಟ್ಟಿಸಿ ನೋಡುತ್ತಾ) ಆಂ, ಏನೆಂದೆ ಗಿಳಿಯೊಡನೆ....ನಾನು ಮಾತಾಡಲಿಲ್ಲವೆಂದು ಹೇಳುವೆಯಾ....ಅಯ್ಯೊ ಸಾನೆಂದಾದರೂ ನನ್ನ ಮಗುವನ್ನು ಮರೆಯಲು ಸಾಧ್ಯವಿದೆಯೇ (ಮಗುವಿನ ಸಮಾಧಿಯ ಕಡೆಗೆ ತಿರುಗಿ) ಗಿಳಿ....ಗಿಳಿ....ನನ್ನ ಗಿಳಿ....ನನ್ನ ಮುದ್ದು....ನನ್ನ ಪಾಪು. ನನ್ನ ಬಾಬು....ಮತ್ತೊಮ್ಮೆ ನಿನ್ನ ತೊದಲ್ ನುಡಿಯ ಆ ಹಾಡನ್ನು ಇನ್ನೊಂದು ಹೇಳುವೆ. ನಿನ್ನ ಹಾಡು....ಹೇಳು (ಮೆಲ್ಲ ಮೆಲ್ಲನೆ ಹಾಡುತ್ತಾ)

ನನ್ನ ಮನೆ। ನನ್ನ ಮನೆ। ನನ್ನ ಸಂಸಾರವೆ।
ನನ್ನ ಮನೆ।
ಗಾಂಧಿ ಅಜ್ಜ ಕೊಟ್ಟ ಮಂದು।
ಚಂದ ಮನೆ।
ಮೂರು ಬಣ್ಣದ 'ಕಿಟಿಕಿ'
ಚಕ್ರದ್ವಾರದ ಮನೆ।
ಸತ್ಯಧರ್ಮ ಶಾಂತಿ। ಇಲ್ಲಿ ಹಾಲಕೆನೆ।
ನನ್ನ ದೇಶವೇ ನನ್ನ ಸಂಸಾರದಾ ಮನೆ॥

ಅಪ್ಪಾ! ನನಗೆ ಚಣ್ಣ, ಚಣ್ಣ, ಪತಾಕೆ ತಂದುಕೊಡು ಅಪ್ಪಾ! ನನಗೆ ಗಾಂಧೀ ಅಜ್ಜನ ಚಿತ್ರ ತಂಧು ಕೊಡು, ಎಂದು ನನ್ನ ಕೊರಳಿಗೆ ತೆಕ್ಕೆ ಬಿದ್ದು ಹಟ ಹಿಡಿಯುತ್ತಿದ್ದ ಕಂದಾ ಮಣ್ಣಿನ ಹೊಂಡದಲ್ಲಿ ಮಲಗಿದೆಯಾ? ನನ್ನ ಕರುಳೇ (ಅತೀ ದುಃಖದಿಂದ ಅಳುತ್ತಾ) ನಾನು ಮನೆಗೆ ಬರಲು ಎಷ್ಟು ರಾತ್ರೆಯಾದರೂ, ಹೊರಲಾರದ ನಿದ್ದೆಯ ಕಣ್ಣುಗಳಿಂದ ನನ್ನ ಹಾದಿಯನ್ನೇ ಕಾಯುತಿದ್ದೆ. ನಾನು ಊಟಕ್ಕೆ ಕುಳಿತಾಗ ನನ್ನ ಬಟ್ಟಲ ಬಳಿ ಕುಳಿತು, ಅಪ್ಪಾ, ನನಗೆ ಕೈತುತ್ತು, ಅಪ್ಪಾ ನನಗೆ ಕೈತುತ್ತು ಎಂದು ನನ್ನೊಡನೆ ಉಣ್ಣುತ್ತಿದ್ದ ಗಿಳಿ....(ಶ್ವಾಸಬಿಟ್ಟು) ಯಾವ ಜನ್ಮದ ಮಾಯೆಯನ್ನು ನನಗಾಗಿ ತಂದಿದ್ದೆ ಮಗೂ ಅದನ್ನೆಲ್ಲಾ ಕೇವಲ ಮೂರೇ ವರ್ಷದಲ್ಲಿ ಮುಗಿಸಿಕೊಂಡು ಹೋದೆಯಾ.

(ಗುಡಿಸಲಿನಲ್ಲಿ ಮಲಗಿದ್ದ ಮಗುವೆದ್ದು ಬರುತ್ತಾ)

ಸುರಮಾ:—ಅಬ್ಬಾಜಾನ್ .... ಅಬ್ಬಾಜಾನ್....

ರಾಘಪ್ಪ:—(ದುಃಖವನ್ನೆಲ್ಲ ಮರೆತು) ಮಗು....ಬಾ....ಏಕೆ ಎದ್ದು ಬಂದೆ.

(ಮಗುವಿನ ಹಿಂದೆ ಸರ್ಪವೂ ಆಡುತ್ತಾ ಬಂದು ರಾಘಪ್ಪನ ಮುಂದೆ ಕೂಡ್ರುವದು)

ರಾಘಪ್ಪ:—ನಾಗಾ, ನೀನೂ ನಮ್ಮ ಬಾಬುವಿನೊಡನೆ ಬಂದೆಬಿಟ್ಟೆಯಾ (ಮಗುವು ತೊಡೆಯ ಮೇಲೆ ಕುಳಿತುಕೊಳ್ಳುವದು ಸರ್ಪವು ಅದರ ಡೊಳ್ಳು ಹೊಟ್ಟೆಗೆ ತನ್ನ ಹೆಡೆ ಸವರುವದು)

ರಾಘಪ್ಪ:— ನಾಗಾ....ಏನಿದು....ನಮ್ಮ ಬಾಬುವಿನ ಮೇಲೆ ನಿನಗೆಷ್ಟು ಮಮತೆ.... (ಶ್ವಾಸಹಾಕಿ) ನಾಗಾ ನೀನೇ ಮನುಷ್ಯನಾಗಿದ್ದರೆ ನಿನಗೆ ಈಗ ಹಲ್ಲಿನಲ್ಲಿರುವ ವಿಷವು ಹೃದಯದಲ್ಲಿದ್ದರೆ....ಇದು ಅಬ್ಬಾಜಾನ್ ಎನ್ನುವದು. ಇದು ಮುಸಲ್ಮಾನರ ಮಗುವಿರಬೇಕೆಂದು ನೀನು ಇದನ್ನು ಘಾತಿಸದೇ ಬಿಡುತ್ತಿರಲಿಲ್ಲಾ ಧನ್ಯ ನಾಗಾ, ಧನ್ಯ. ಮನಸ್ಸಿನಲ್ಲಿ ವಿಷವಿರುವ ಮನುಷ್ಯನಿಗಿಂತ, ಹಲ್ಲಿನಲ್ಲಿ ವಿಷವಿರುವ ಹಾವಾಗುವದೇ ಲೇಸು....ಇರಲಿ....ಮಗೂ....ಇಂದಿನ ಈ ರಾತ್ರಿಯು ಭಾರತ ಇತಿಹಾಸದ ಮಹಾ ರಾತ್ರಿಯಾಗಿದೆ....ಕೈಮುಗಿದು ನಿಲ್ಲು (ಮಗು ಕೈಮುಗಿದು ನಿಲ್ಲುವದು) ನಾನು ನಿನಗೆ ಹೇಳಿಕೊಟ್ಟ ಆ ಹಾಡನ್ನು ಹೇಳು ನಿನ್ನೊಡನೆ ನಾನು ಹೇಳುತ್ತೇನೆ,

ಸುರಮಾ:—

ಜನಗಣಮನ ಅಧಿ ನಾಯಕ ಜಯಹೇ।
ಭಾರತ ಭಾಗ್ಯವಿಧಾತಾ।
ಪಂಜಾಬ। ಸಿಂಧ। ಗುಜರಾತ ಮರಾಠಾ।
ದ್ರಾವಿಡ। ಉತ್ಕಲ। ವಂಗ।
ವಿಂದ್ಯಹಿಮಾಚಲ। ಜಮುನಾ ಗಂಗಾ।
ಉಚ್ಛಲ। ಜಲಜಿತರಂಗಾ।

(ಹಾಡಿನ ಜೊತೆಗೆ ಹಾವು ಸಹಾ ತಲೆಹತ್ತಿ ತೂಗಲಾರಂಭಿಸುವದು)

ರಾಘಪ್ಪ:—ಸಾಕು, ಮಗೂ ಸಾಕು. ನಿನ್ನ ನಿಷ್ಕಲ್ಮಷ ಮನಸ್ಸಿನ ಒಂದೇ ಒಂದು ನುಡಿಗೆ ರಾಮರಹೀಮರಿಬ್ಬರೂ ಸಂತುಷ್ಟರಾಗುವರು. ಬಾ....ಇನ್ನು ಹಾಲು ಕುಡಿದು ನಿದ್ರಿಸು....ನಾಗಾ ಅದೋ ನಿನ್ನ ಸ್ಥಳದಲ್ಲಿ ಹಾಲಿಟ್ಟಿರುವೆನು. ಹೋಗು ಅದನ್ನು ಕುಡಿದು ವಿಶ್ರಾಂತಿ ಪಡೆ; ಯಾರಾದರೂ ಹಾದಿತಪ್ಪಿ ಕತ್ತಲೆಯಲ್ಲಿ ಬಂದರೆ ಅವರಿಗೆ ತೊಂದರೆ ಕೊಡಬೇಡಾ ಹೋಗು, ಬಾ ಮಗು.

(ಎಂದು ಎತ್ತಿಕೊಂಡು ಮುದ್ದಿಸುವನು. ಮಗುವು ಸಹಾ ಪ್ರತಿಯಾಗಿ ರಾಘಪ್ಪನನ್ನು ಮುದ್ದಿಸುವದು. ಹೋಗುವರು.)

(ರಂಗದ ಮಧ್ಯದಲ್ಲಿ ಬೆಳಕು ಹಾಗೆಯೇ ಇದ್ದು ಬದಿಗೆ ಮೊದಲಿಗಿಂತ ಹೆಚ್ಚು ಕತ್ತಲಾಗಬೇಕು. ಆ ಮೇಲೆ ಮೆಲ್ಲ ಮೆಲ್ಲನೆ ಹಾದಿ ತಪ್ಪಿದ ರಹೀಮನು ಸುತ್ತಮುತ್ತಲೂ ನೋಡುತ್ತ ಬರುವನು)

ರಹೀಮ:— (ಸಮಾಧಿಗಳ ಮುಂಬದಿಯಲ್ಲಿ ನಿಂತು ತನ್ನ ಕೈಯಲ್ಲಿರುವ ದೊಣ್ಣೆಯನ್ನು ಸವರುತ್ತಾ) ನಾನು .. ಹಾದಿತಪ್ಪಿದ್ದೇನೆ....ನನಗೇಕೊ ಈ ಸ್ಥಳವು ಪರಿಚಿತವೆಂದು ಅನಿಸುತ್ತಿದೆ....ಆದರೆ ಎಂದು ನಾನು ಇಲ್ಲಿಗೆ ಬಂದಿದ್ದೆ....ಅದೋ ಆ ಬೋಳು ಮರ....ಆ ಕಾಲು ಹಾದಿ (ವೇಲುಧ್ವನಿಯಲ್ಲಿ) ಅದೋ....ಆ ಸುಟ್ಟುಹೋದ ಮನೆ....ನಿಜ, ನಿಜ. ಇದು....ಇದು ಅದೇ ಸ್ಥಳ....ಯಾ....ಅಲ್ಲಾ....ನನ್ನನ್ನೇಕೆ ಇಲ್ಲಿಗೆ ಎಳೆತಂದೆ....ನಾನದನ್ನು ಮರೆಯಲು ಪ್ರಯತ್ನಿಸಿರುವೆನು....ನಾನು ಮರೆಯುವೆನು.... (ಕಣ್ಣು ತಿಕ್ಕಿಕೊಳ್ಳುತ್ತಾ) ಅಂದು ಮಧ್ಯರಾತ್ರಿ ಉರಿಯುವ ಕೊಳ್ಳಿಗಳನ್ನು ಹಿಡಿದು ರಜಾಕಾರರ ಗುಂಪು ನಮ್ಮ ಊರನ್ನು ನುಗ್ಗಿತು. ನಾನು ನನ್ನ ಹೆಂಡತಿ, ನಜಮಾ, ೩ ವರ್ಷದ ಮಗುವನ್ನು ಕಂಕುಳಲ್ಲಿ ಹಿಡಿದು ಧಾವಿಸಿದೆವು. ಕಂಡಕಂಡವರಲ್ಲಿ ಆಶ್ರಯ ಬೇಡಿದೆವು. ತಮ್ಮ ಉಳಿಯುವಿಕೆಯೋ ತಿಳಿಯದೆ ಕೆಲವರಿದ್ದರು ಮತ್ತೆ ಕೆಲವರು ನಾನು ಮುಸಲ್ಮಾನನೆಂದು ಅಟ್ಟಿದರು. ಕೊನೆಗೆ ಅದೇ ಆ ಅವಶೇಷ ಉಳಿದಿರುವ, ಠಾಣೆದಾರನ ಮನೆಗೆ ಬಂದು ಆಶ್ರಯ ಬೇಡಿದೆವು.... ಅವನಿರದಿದ್ದರೂ ಅವನ ಹೆಂಡತಿಯು ನಮಗಾಶ್ರಯ ಕೊಟ್ಟಳು; ಅಷ್ಟರಲ್ಲಿ ರಜಾಕಾರರ ಗುಂಪು ಆ ಮನೆಯ ಮುಂದೆ ಬಂತು; ನಮ್ಮನ್ನು ಉಳಿಸಲು ನನ್ನ ಹೆಂಡತಿ ಮಗುವನ್ನು ಒಳಕೋಣೆಯಲ್ಲಿ ಕೂಡ್ರಿಸಿ ನನ್ನನ್ನು ಮೆಲುಪ್ಪರಿಗೆಗೆ ರಾಘಪ್ಪನ ಹೆಂಡತಿ ಕಳುಹಿಸಿದಳು....ನಾನು....ಮಾಳಿಗೆಯೊಳಗೆ ಹೋಗಿ ನೋಡಿದ್ದೇನು....ಸರಕಾರಿ ಖಜಾನೆ....ಠಾಣೆದಾರನ ಖಜಾನೆ.... ಬೀಗವನ್ನು ಅಲುಗಾಡಿಸಿದೆ ಹಳೇ ಬೀಗ ಕಿತ್ತು ಬಿತ್ತು. ಬಾಗಿಲೆತ್ತಿದರೆ (ಪಿಶಾಚಿಯಂತೆ ನಗುತ್ತಾ) ಹಣ....ರೂಪಾಯಿ ಒಂದಲ್ಲಾ.... ನೂರಲ್ಲಾ.... ಸಾವಿರವಲ್ಲಾ ಎತ್ತಲಾರದಷ್ಟು.... ಹೊರಲಾರದಷ್ಟು .... ಆಗತಾನೇ ರಜಾಕಾರನಂತಾದೆ....ಮೊದಲು ಕೆಳಗಿಳಿದು ನೋಡಿದೆ....ರಜಾಕಾರರು ಹೆಬ್ಬಾಗಿಲು ಹೊಡೆಯುತ್ತಿದ್ದರು. ರಾಘಪ್ಪನ ಹೆಂಡತಿ ಕತ್ತಿ ಹಿರಿದು ಸಿದ್ಧಳಾಗಿ ನಿಂತಿದ್ದಳು....ನಾನದನ್ನು ನೋಡಿಯೂ ನೋ-

ಹದಂತೆ ಮಾಡಿ ಮೊದಲು ಹಿಂಬಾಗಿಲಿಂದ ನನ್ನ ಹೆಂಡತಿ ಮಕ್ಕಳನ್ನು ಒಂದು ಸ್ಥಳದಲ್ಲಿ ನಿಲ್ಲಿಸಿ ತಿರಿಗಿ ಬಂದು ಖಜಾನೆಯನ್ನೆತ್ತಿ ಕೆಳಗೆ ಬರುವದರೊಳಗೆ ರಾಘಪ್ಪನ ಹೆಂಡತಿಯ ಹತ್ಯವಾಯಿತು. ರಜಾಕಾರರು ನುಗ್ಗಿದರು ಮೊದಲು ನನ್ನನ್ನು ಹಿಡಿದು ಖಜಾನೆ ಕಸಿದುಕೊಂಡರು ಅಷ್ಟರಲ್ಲಿ ಮನೆಗೆ ಬೆಂಕಿಹತ್ತಿತು....ಅವರ ಕೈಕೊಸರಿ ನಾನು ಪಾರಾದೆ....ಉರಿಯುವ ಬೆಂಕಿಯ ಘೋರಾಟದಲ್ಲಿ ಕೂಗಿದೆ....ನಜಮಾ....(ಕೂಗುತ್ತಾ) ಸುರಮಾ....ನಜಮಾ....ಸುರಮಾ....ಇಲ್ಲಾ ಯಾರೂ ಉತ್ತರಿಸಲಿಲ್ಲಾ....ಅಲ್ಲಾಹ್....ಯಾರೂ ಉತ್ತರಿಸಲಿಲ್ಲಾ ನಾನು ನಿರ್ಗತಿಕನಾದೆ. ಭಿಕಾರಿಯಾದೆ....(ಅಳುತ್ತಾ ಮಂಡಿಯೂರಿ ಕೂಡ್ರುವನು) ಇದೇನು ಬೆಳಕು (ತನ್ನ ಹಿಂದೆ ಇರುವ ಸಮಾಧಿಗಳನ್ನು ಕಂಡು ಜಗ್ಗನೆ ಎದ್ದು) ಇದಾರ ಸಮಾಧಿಗಳು ಇದು ನನ್ನ ಹೆಂಡತಿ ನಜಮಾ. ಇದು....ನನ್ನ ಮಗು ಸುರಮಾ....ನಜಮಾ. ನಜಮಾ ಬಿಕ್ಕಟ್ಟ ನನ್ನ ಪಾಡು ನೋಡು ನಜಮಾ. ನೀವಿಬ್ಬರೂ ನನ್ನನ್ನು ಬಿಟ್ಟು ಹೋದಿರಿ. ನಾನು ನಿಮ್ಮೊಡನೆ ಸಾಯದಾದೆ....ನನಗೆ ಸಾಯಲು ಭಯವಾಗುತ್ತಿದೆ....ನಜಮಾ....ನಜಮಾ (ಉರಿಯುವ ನಂದಾದೀಪಗಳನ್ನು ನೋಡಿ) ಅಂ ನೆತ್ತರಿಲ್ಲದ ಕಣ್ಣಿನಲ್ಲಿ ನೀರು ಬರುವದೇ ಒಂದು ವರುಷದಿಂದ ತಲೆಬಡಕನಾಗಿ ಜೀವಿಸಿದ ನನ್ನ ಅಂತಃಕರಣದಲ್ಲಿ ಇಂದು ಇದೇಥ ಹುಚ್ಚು ಉಂಟಾಗಿದೆ....ಇದು....ನನ್ನ ಹೆಂಡತಿ ಮಕ್ಕಳ ಸಮಾಧಿಯಲ್ಲ....ಇದು ಯಾವುದೋ ಪರಜಾತೀಯರದಾಗಿದೆ; ಅದೋ ಅಲ್ಲಿ ನಂದಾದೀಪ ಉರಿಯುತ್ತಿದೆ....(ನಗುತ್ತಾ) ಮನುಷ್ಯ ಸತ್ತರೇನಾಯಿತು ಜಾತಿ ಸಾಯುವುದಿಲ್ಲಾ, ಅದಕ್ಕಾಗಿಯೇ ಮನುಷ್ಯನು ಸಾಯುತ್ತಾನೆ....

(ಯಾರೊ ದೂರದಲ್ಲಿ ಬರುವಂತೆ ಭಾಸವಾಗುವದು, ನಾಯಿ ಕೂಗುವದು) ಅದೇನು....ಶಬ್ದ....ಕತ್ತಲೆಯಲ್ಲಿ ಯಾರು ಬರುತ್ತಿರುವವರು....ಪಿಶಾಚಿಯೋ.... (ದಿಟ್ಟಿಸಿ ನೋಡಿ) ಯಾವುದೊ ಸ್ತ್ರೀವ್ಯಕ್ತಿ....ಕತ್ತಲೆಯಲ್ಲಿ ಅದೂ ಮಧ್ಯರಾತ್ರಿಯಲ್ಲಿ ಇಲ್ಲಿಗೇಕೆ ಬರುತ್ತಿರುವದು....ಬೇಟೆ ಸಿಕ್ಕಿತು. (ಕೈಯಲ್ಲಿದ್ದ ದೊಣ್ಣೆಯನ್ನು ಸವರುತ್ತಾ) ರಹೀಮ್ ಹೊಶಿಯಾರ್ (ಎಂದು ಅಲ್ಲಿಯೇ ದೂರದಲ್ಲಿ ಅಡಗುವನು) ಬರುತ್ತಿರುವ ವ್ಯಕ್ತಿ ದೀರ್ಘವಾದ ನೆರಳು ಮೊದಲು ಸಮಾಧಿಗಳ ಮೇಲೆ ಬೀಳುವದು ಹಾಗೂ ಆ ವ್ಯಕ್ತಿಯು ಹಾಡುವ ಹಾಡಿದ ಸೊಲ್ಲು ನಿಧಾನವಾಗಿ ಕೇಳಬರುವದು.)

ನಜಮಾ: ವಿಷತುಂಬಿದೆ । ಈ ।
ಜಗದೊಳಗೆಲ್ಲ ।
ಸರ್ಪಗಳೆಂದು । ಬೇರಿಲ್ಲಾ । ಕಚ್ಚುವ ।
ಮನುಜಗೆ ।
ಹುಟ್ಟಿನ । ವಿಷದಾ । ಕೋರೆಹಲ್ಲುಗಳು
ಬೇಕಿಲ್ಲಾ ।
ಕೋರೆಹಲ್ಲುಗಳು । ಬೇಕಿಲ್ಲಾ ।

ಸಮಾಧಿಯ ಸಮೀಪಕ್ಕೆ ಬಂದು ಕೈಯಲ್ಲಿದ್ದ ಹೂಗಳನ್ನು ಸಮಾಧಿಯ ಮೇಲೆ ಹಾಕಿ ಸಮಾಧಿಗಳನ್ನೇ ನೋಡಿ (ಪದದ ಮುಂದಿನ ನುಡಿ)

ಮಾಯೆಯಾತ್ತಾ । ನೋಡು ಜಗದಾ ।
ಜಾತಿಗಿಂದು ದಿನವೆಲ್ಲಾ ।
ನೀತಿಗೆಂದು ಸ್ಥಳವಿಲ್ಲಾ ॥

ತಾಯಿ....ಲಕ್ಷ್ಮೀದೇವಿ....ನಾನು ಬಂದಿರುವೆನು....ನಜಮಾ....ಯಾರನ್ನು ರಕ್ಷಿಸಲು ನೀನು ಜೀವವಿತ್ತೆಯೊ ಅವಳೇ ನಿನ್ನ ಪ್ರೀತಿಯ ಭಗಿನಿ, ನಜಮಾ....ಒಂದು ವರುಷದ ಶೋಕ ಜೀವನದ ಮನದ ಭಾರವನ್ನು ತಂದಿರುವೆನು....ನ್ಯಾಯ, ನೀತಿ, ಪ್ರೀತಿ, ಇಲ್ಲದ ಜಗತ್ತೆಲ್ಲವೂ ನಿದ್ದೆಹೋದಾಗ, ನೀತಿ ತಾಯಿಯೊಡನೆ ಮಲಗಿರುವ ನನ್ನ ಮಗುವನ್ನು ನೋಡಲು ಬಂದಿರುವೆನು....(ಮಗುವಿನ ಸಮಾಧಿಯ ಸಮೀಪ ಹೋಗಿ) ಮಗು....ಸುರಮಾ....ನನಗೇನೂ ದುಃಖವಿಲ್ಲಾ. ನಾನು ನಿನಗಾಗಿ ಅಳುವದಿಲ್ಲಾ....ನೀನು ಈ ರಾಕ್ಷಸೀ ಜಗತ್ತಿನಲ್ಲಿ ಬದುಕಿರುವದಕ್ಕಿಂತ ಮಣ್ಣಿನಲ್ಲಿ ಮಲಗಿದ್ದರೂ ನನಗೆ ಸುಖಿಯಾಗಿ ಕಾಣುತ್ತಿರುವೆ (ಅಳುತ್ತಾ) ಮಲಗು ಮಗು ಮಣ್ಣಿನಲ್ಲಿ ಕರಗಿ ಮಣ್ಣಿನ ಹೊಟ್ಟೆಯಾಗಿ ಮಲಗು ಬಲ್ಲೆಯಾ ನೀನು ಮೂರು ವರುಷದವಳಿದ್ದೆ, ನಮ್ಮ ನೆರೆಮನೆಯ ಹಿಂದುಗಳಲ್ಲಿ ಗೌರಿಯ ವಿನಾಯಕನನ್ನು ತಂದಿದ್ದರು. ನೀನು ಆ ಪ್ರತಿಮೆ ಕಂಡು ನನ್ನ ಕೈಕೊಸರಿ ಅವರ ಮನೆಬದಿಯಲ್ಲಿ ನಿಂತು ಎಲ್ಲರು ಕೈಮುಗಿಯುವಾಗ, ನೀನು ಕೈಮುಗಿದೆ. ನಿನ್ನ ನಿಷ್ಕಲ್ಮಷ ಅಂತಃಕರಣ ಕಂಡು ಆಗ ನಾನು ಆನಂದದಿಂದ ಕಣ್ಣೀರು ಹಾಕಿದ್ದೆ. (ಕಣ್ಣೊರಸಿಕೊಂಡು) ಅಮ್ಮಾ ಆ ಮನೆಯಲ್ಲಿ ಬಾಬು ತಂದಿದ್ದಾರೆ....ಬಣ್ಣಬಣ್ಣದ ಬಾಬು ತಂದಿದ್ದಾರೆ. ಉದ್ದ ಮೂಗಿನ ಬಾಬು ತಂದಿದ್ದಾರೆ (ಗಂಟಲು ಬಿಗಿದು ಒಂದು ಮಾತಾಡಲಾರದೆ ಒರೆ ಅಳುತ್ತಾ ಮುಂದೆ ಸ್ವಲ್ಪ ಸಮಯದ ನಂತರ) ಕೊನೆಗೆ ಆ ವಿನಾಯಕ ಪ್ರತಿಮೆಯನ್ನು ಬಾವಿಗೆ ಹಾಕಿದ್ದನ್ನು ನೋಡಿ, ಅಮ್ಮಾ ಬಾಬು ನಮ್ಮ ಬಾಬುವನ್ನು ಗುಮ್ಮನ ಮನೆಗೆ ಒಗೆದರು ಅಮ್ಮಾ; ನಮ್ಮ ಬಾಬುವನ್ನು ಕರೆಹೇಳು ಅಮ್ಮಾ ನನಗೆ ಉದ್ದ ಮೂಗಿನ ಬಾಬು, ನನ್ನ ಬಾಬು ಎಂದು ಅತ್ತು, ಅತ್ತು, ಸೋತು ಹೋದೆ....ಕೊನೆಗೆ ದೀಪಾವಳಿ ಬಂತು....ಎಲ್ಲರೂ ಜಾಗಟೆ ಬಡಿದು ನೀರು ತುಂಬುವದನ್ನು ಕಂಡು ನೀನು, ನಾನು ಕುಡಿಯುವ ನೀರು ತರುವಾಗಾ ನನ್ನ ಹಿಂದೆ ಬಂದು ಒಂದು ಬಟ್ಟಲು ಬಾರಿಸುತ್ತಾ, ಪುಟ್ಟ ಪುಟ್ಟ ಹೆಜ್ಜೆಹಾಕಿ ಓಡಿ ಓಡಿ ಬರುತ್ತಿದ್ದೆಯಲ್ಲಾ ಮಗೂ. ಇದೆಲ್ಲವನ್ನು ನಾನು ಹೇಗೆ ಮರೆಯಲೀ ಹೇಗ ಮರೆಯಲಿ....ಮರೆಯಲೇ ಬೇಕು....ಮಗೂ....ಇದು ನಿಷ್ಠುರ ಪ್ರಪಂಚ. ಇಲ್ಲಿ ಪ್ರೀತಿ ಇಲ್ಲಾ. ನೀತಿ ಇಲ್ಲಾ....ಬರೇ ಜಾತಿ, ಜಾತಿ ಇದೆ. (ಭ್ರಮಿಷ್ಠಳಂತೆ) ಆಗಿ ಇದೇನು ತುಂಬಾ ರಾತ್ರಿಯಾಯಿತು ಅಯ್ಯೊ ನನ್ನ ಮಗು....ಇನ್ನೂ ಎಚ್ಚರವಾಗಿಯೆ ಇದೆ....(ನಿಸ್ತೇಜದಿಂದ ನಗುತ್ತಾ) ನಾನು ಮಗುವನ್ನು ಮಲಗಿಸಲೇ ಇಲ್ಲಾ. ಮಗು ಮಲಗು ನಾನು ನಿನ್ನ ಜೋಗುಳ ಹೇಳುತ್ತೇನೆ, ಜೋಗುಳ ಗಿಳಿಯು ಪಂಜರದೊಳಿಲ್ಲಾ....

(ಗ್ರಾಮ್ಯ ಪದ್ಧತಿಯಂತೆ)

ತಾಯ ಪಂಜರವನ । ಬರಿದಾಯಿತಲ್ಲಾ ।
ಗಿಳಿಯು । ಪಂಜರದೊಳಿಲ್ಲಾ ॥ ಪ ॥
ಬೇನೆಹೊತ್ತೆ।ಮಗಳೆ । ಬಾನು ಸಿಕ್ಕಿತೆಂದು ।
ಏನು ಸಂತಸ ಪಡೆದೆ । ಕಾಮಧೇನು
ನೀನೆಂದು ।
ಹೋದೆ । ಯಾ ಕಂದಾ ॥ ಸಾವಿಗಾದೆಯಾ ।
ಒಯ್ದನೇ ದೇವ । ಹೂವಿಂದಿ ಕೊಯ್ದನೆ ॥
॥ ಗಿಳಿಯು ॥

(ಪದಮುಗಿಯುತ್ತಲೇ ರಹೀಮನು ಮೆಲ್ಲನೆ ಹಿಂದಿನಿಂದ ಬಂದು ದೊಣ್ಣೆಯಿಂದ ನಜಮಾಳ ತಲೆ ಒಡೆಯಲು ಮುಂದಾಗುವನು. ಅಷ್ಟರಲ್ಲಿ ಅಡಗಿದ್ದ ಹಾವು ಎಡೆಎತ್ತಿ ಮಧ್ಯ ಬರುವದು.)

ರಹೀಮ: ಹಾಂ....ಹಾವು....

ನಜಮಾ: ಹಾವು (ಜಗ್ಗನೆ ಎದ್ದು) ಹಾವು ಹಾವು (ಎಂದು ರಹೀಮನನ್ನೇ ನೋಡುವಳು,)

ರಾಘಪ್ಪ: ಏನು....ಏನದು (ಎಂದು ಗುಡಿಸಲಿನಿಂದ ಲಾಂದ್ರ ತೆಗೆದುಕೊಂಡು ವೇಗದಿಂದ ಬರುವನು.)

ನಜಮಾ: ಮಹನೀಯಾ ನಿಲ್ಲು ಹಾವಿದೆ ಮುಂದೆ ಬರಬೇಡಾ.

ರಾಘಪ್ಪ: ಆ ಹಾವು ಏನೂ ಮಾಡಲಾರದು. ನಾಗಾ ನಡೆ ನಿನ್ನ ಸ್ಥಳಕ್ಕೆ ನಡೆ (ಹಾವು ಹೋಗಿ ಸಮಾಧಿಗಳ ಮಧ್ಯ ಕೂಡ್ರುವದು.)

(ಲಾಂದ್ರವೆತ್ತಿಹಿಡಿದು ರಹೀಮನನ್ನೂ ನಜಮಾಳನ್ನೂ ನೋಡುತ್ತಾ) ತಾಯಿ ನೀನಾರು....

ನಜಮಾ: ಕ್ಷಮಿಸಿ....ಪ್ರತಿದಿನ ಮಧ್ಯರಾತ್ರಿ ಈ ಸಮಾಧಿಗೆ ನಮಿಸಲು ಬರುತ್ತಿದ್ದೆ.

ರಾಘಪ್ಪ: ಮಧ್ಯರಾತ್ರಿಗೆ.... ಕಾರಣವೇನು?

ನಜಮಾ: ಇಂದು ಹಿಂದೂ ಮಹಿಳೆಯ ಪುಣ್ಯಗೋರಿ. ನಾನು ಮುಸಲ್‌ಮಾನಳು.

ರಾಘಪ್ಪ: ತಾಯಿ .... ಮನುಷ್ಯನಿಗೆ ಸತ್ತ ಮೇಲೂ ಮಣ್ಣಾದ ಮೇಲೂ ಜಾತಿಯನ್ನೆಣಿಸುವಿರಾ. ಇರಲಿ.... ಮುಂದೆ.

ನಜಮಾ: ನಿತ್ಯದಂತೆ ಇಂದು ಸಹಾ ಬಂದು ನಮಿಸಿಹೋಗುವಷ್ಟರಲ್ಲಿ ಹಿಂದಿನಿಂದ ಯಾವನೊ ಬಂದು ನನ್ನನ್ನು ಘಾತಿಸುತ್ತಿದ್ದನು.... ಅಷ್ಟರಲ್ಲಿ ಹಾವು ಮಧ್ಯ ಬಂತು.

ರಾಘಪ್ಪ: ಶಹಬಾಸ್....ನಾಗಾ....ಶಹಬಾಸ್! (ರಹೀಮನನ್ನು ನೋಡಿ) ಮಹನೀಯಾ ನೀನು ಯಾರು? ಏತಕ್ಕೆ ಇಂಥ ಹೀನ ಕೆಲಸಗಳನ್ನು ಮಾಡುತ್ತಿರುವೆ. ಇದು ನಿನ್ನ ಧರ್ಮವೊ? ವ್ಯವಸಾಯವೊ? ....ಇದಕ್ಕೆ ಮಾನವನೀತಿಯಲ್ಲಿ ಯಾವ ಹೆಸರಿದೆ?....

ರಹೀಮ: (ವಿಹ್ವಲನಾಗಿ) ನಾನು.... ನಾನು....(ಓಡಲು ಪ್ರಯತ್ನಿಸುವನು.)

ರಾಘಪ್ಪ: ನಿಲ್ಲು....ಓಡಲು ಪ್ರಯತ್ನಿಸಿಯಾದರೆ ಹಾವು ನಿನ್ನನ್ನು ಬೆನ್ನಟ್ಟೀತು.... (ಸಮೀಪಕ್ಕೆ ಹೋಗಿ ಬೆನ್ನು ಸವರುತ್ತಾ) ಸಹನೆಯಿಂದ ಶಾಂತಿ ಲಭಿಸುತ್ತದಲ್ಲದೆ ಇತರ ಯಾವ ಪ್ರಯತ್ನದಿಂದಲೂ ಮನುಷ್ಯನಿಗೆ ಶಾಂತಿ ಲಭಿಸುವದಿಲ್ಲಾ....ಹೇಳು ನಿನ್ನ ಮನದಲ್ಲಿ ಏನೂ ಕಪಟವಿದ್ದರೂ ಸತ್ಯವನ್ನು ಪ್ರೀತಿಸಿ ಅದನ್ನು ಮರೆ. ಸತ್ಯಕ್ಕೆ ಎಲ್ಲೆಲ್ಲಿಯೂ ಕ್ಷಮೆ ಇದೆ.

ರಹೀಮ: ಕ್ಷಮೆ ನನಗೆ ಕ್ಷಮೆ....ಬೇಕಾದರೆ ಆ ಅಲ್ಲಾಹ್ ನನ್ನನ್ನು ಕ್ಷಮಿಸದಿರಲಿ ....ಇವಳು ನನ್ನನ್ನು ಕ್ಷಮಿಸುವಳೇ! ನಜಮಾ ಕ್ಷಮೆ....ನನಗೆ....ಕ್ಷಮೆ....

ನಜಮಾ: (ಬೆಚ್ಚಿಬಿದ್ದು) ನನ್ನ ಹೆಸರು ನಿನಗೆ ಹೇಗೆ ತಿಳಿಯಿತು?

ರಾಘಪ್ಪ: ನೀನು ಇವಳನ್ನು ಬಲ್ಲೆಯಾ,..

ರಹೀಮ: ಬಂಧೂ, ಇವಳು ನನ್ನ ಹೆಂಡತಿ....ನಜಮಾ! ಪಾಪಿಯಾದ ನಾನು ಪರಕೀಯಳೆಂದು ತಿಳಿದು ಇಂದು ಇವಳನ್ನೇ ಘಾತಿಸುತ್ತಿದ್ದೆ....ನಜಮಾ ದೊಣ್ಣೆ ಬಿಸುಟಿ ಕೈನೀಡಿ ನಿಂತಿದ್ದೇನೆ ಕ್ಷಮೆ. ಮಾಫೀ ಅಲ್ಲಾಹನಿಗಾಗಿ....

ನಜಮಾ: ನಿಮ್ಮ ಪಾಪಿ ಬಾಯಿಯಿಂದ ಅಲ್ಲಾಹನ ಹೆಸರನ್ನು ತೆಗಿಯಬೇಡಿ....ಹೆಂಡತಿ ಮಕ್ಕಳನ್ನು ಬಲಿಗೊಟ್ಟು ಓಡಿದ ಹೇಡಿಗಂಡಸು ನೀವು; ಜೀವದಾನವಿತ್ತವರ ಕೊಲೆಯನ್ನು ಕಣ್ಣಾರೆ ಕಂಡೂ ಸ್ವಾರ್ಥಕ್ಕೆ ಬಿದ್ದ ಕರ್ಮಚಾಂಡಾಲರು ನೀವು....ಹೋಗಿ ಈ ಜಗಕ್ಕೆ....ಈ ಪಂಚಭೂತಗಳಿಗೆ ಸಂಬಂಧ ಬಿಟ್ಟು ಬದುಕಬೇಡಿ ಹೋಗಿ ಎಲ್ಲಿಯಾದರೂ ಸಾಯಿರಿ...ಸಾಯಿರಿ (ಕೂಗುವಳು) ಸಾಯಿರಿ.

ರಾಘಪ್ಪ: ನಿನ್ನ ಹೆಸರು ರಹೀಮನೇ? ನೀನು ಇವಳ ಪತಿಯೇ? .... (ರಹೀಮನು ತಲೆಹಾಕುವನು) ನೀನು ಹೆಂಡತಿಮಕ್ಕಳನ್ನು ಬಿಟ್ಟು....ಈ ಸ್ಥಿತಿಯಿಂದ ಇರಲು ಕಾರಣವೇನು?

ರಹೀಮ: ಕಾರಣ, ಕಾರಣ, ರಾಘಪ್ಪ ... ಅದನ್ನು ಕೇಳಬೇಡಿ, ಕೇಳಿದಿಯಾದರೆ ನೀನೇ ನನ್ನ ಗಂಟಲನ್ನು ಹಿಚುಕಲು ಮುಂದಾಗುವಿ. ನಾನು, ನಾನು....ದ್ರೋಹಿ....ದ್ರೋಹಿ....

ರಾಘಪ್ಪ: ರಹೀಮ... ಏನನ್ನುತ್ತಿರುವೆ?

ನಜಮಾ: ಅಂದಿನ ರಾತ್ರಿ ಈ ಹಳ್ಳಿಯನ್ನು ರಜಾಕಾರರು ನುಗ್ಗಿದರು, ಆಗ ನಾವು ಗಾಬರಿಗೊಂಡು ಆಶ್ರಯಕ್ಕಾಗಿ ಹಾವಳಿಯಿಂದ ತಪ್ಪಿಸಿಕೊಂಡು ಹೊರಟೆವು. ದೂರದೂರದ ಮನೆಗಳು ಸುಡುತ್ತಿದ್ದವು. ನಾಲ್ಕು ದಿಶೆಯಲ್ಲಿ ಚೀತ್ಕಾರ ಕೇಳಬರುತ್ತಿತ್ತು. ನಾವು ಕಂಗೆಟ್ಟು ದಾರಿ ಕಾಣದೆ ನಿಮ್ಮ ಮನೆಯ ಹೆಬ್ಬಾಗಲು ತಟ್ಟಿ, "ಆಶ್ರಯ" "ಆಶ್ರಯಕೊಡಿ" ಎಂದು ಕೂಗಿದೆವು.. ಆಗ ಲಕ್ಷ್ಮೀದೇವಿಯು ಕೈಯಲ್ಲಿ ಲಾಂದ್ರಹಿಡಿದು ಗರ್ರನೆ ಬಾಗಿಲು ತೆಗೆದು ನಮ್ಮನ್ನು ಒಳಗೆ ಕರಕೊಂಡು ಬಾಗಿಲು ಮುಚ್ಚಿಕೊಂಡಳು

ರಹೀಮ: ನನ್ನ ಹೆಂಡತಿಮಕ್ಕಳನ್ನು ಒಳಮನೆಯಲ್ಲಿ ಕೂಡ್ರಿಸಿ ನನಗೆ ಮೇಲುಪ್ಪರಿಗೆಯಲ್ಲಿ ಅಡಗುವುದಕ್ಕಾಗಿ ಹೇಳಿದರು.

ನಜಮಾ: (ಅದೇ ಭಾವಾವೇಶದಿಂದ) ಅಷ್ಟರಲ್ಲಿ ರಜಾಕಾರರ ಕೊಳ್ಳಿಗಳ ಬೆಳಕು ಸಮೀಪಿಸಿತು. ಅವರ ಉನ್ಮತ್ತತನದ ಕೂಗಾಟ ತೀರ ಸಮೀಪಿಸುತ್ತಾ ಮನೆಯ ಹೆಬ್ಬಾಗಿಲ ಬಳಿಗೆ ಬಂದರು. "ಏ, ಕಾಫರ್ ದರವಾಜ್ ಖೋಲೊ" ಕಾಫರ್ ದರವಾಜಾ ಖೋಲೆ ಎನ್ನುವ ಅವರ ಕೂಗು ಪ್ರತ್ಯಕ್ಷ ಸಾವಿನ ರೂಪವನ್ನೇ ನಮ್ಮ ಹೃದಯದಲ್ಲಿ ಚಿತ್ರಿಸತೊಡಗಿತು. ಆಗ ನಾನು ನನ್ನ ಮಗುವನ್ನು ಎದೆಗವಚಿಕೊಂಡು ಅಳಲಾರಂಭಿಸಿದೆ. ಲಕ್ಷ್ಮೀತಾಯಿಯು ನನಗೆ ಧೈರ್ಯ ಹೇಳಿ ಒಳಗಿರುವ ಕತ್ತಿಯನ್ನು ತಂದು ಬಾಗಿಲಿಗೆ ಎದುರಾಗಿ ನಿಂತಳು.

ರಹೀಮ: ಆಗ ನಾನು ಮೇಲುಪ್ಪರಿಗೆಯ ಮೇಲಿರುವ ಖಜಾನೆಯನ್ನು ಎತ್ತಿಕೊಂಡು ಹೋಗುವ ವಿಚಾರದಿಂದ ಮೂರ್ಖನಾಗಿದ್ದೆ.

ನಜಮಾ: ಅಂತೂ ಕೊನೆಗೆ ರಜಾಕಾರರು ಬಾಗಿಲು ಮುರಿದೇಬಿಟ್ಟರು. ಕೊಲೆಗಡುಕರು ಒಳನುಗ್ಗಿದರು. ಲಕ್ಷ್ಮೀತಾಯಿಯು ಒಬ್ಬಳೇ ಅವರೆಲ್ಲರೊಡನೆ ಹೋರಾಡುತ್ತಿದ್ದಳು.

ರಹೀಮ; ಅಷ್ಟರಲ್ಲಿ ನಾನು ನನ್ನ ಹೆಂಡತಿ

ಮಕ್ಕಳನ್ನು ಹಿಂಬಾಗಿಲಿನಿಂದ ಪಾರುಮಾಡಿ ಮೇಲಿರುವ ಖಜಾನೆಯು ಹಣದೋಚಿಕೊಂಡು ಹೋಗುವಷ್ಟರಲ್ಲಿ ರಜಾಕಾರರು ನನ್ನಲ್ಲಿರುವ ಖಜಾನೆ ಕಸಿದುಕೊಂಡು ನನ್ನನ್ನು ಹೊಡೆದೋಡಿಸಿದರು....ಕತ್ತಲೆಯಲ್ಲಿ ಹೋಗಿ ಹುಡುಕಿದರೆ ಹೆಂಡತಿ ಮಕ್ಕಳು ಸಿಗಲಿಲ್ಲಾ.

ನಜಮಾ: ಹೆಂಡತಿಮಕ್ಕಳು; ನಿಮಗೆ ಮಕ್ಕಳು. ನಿಮ್ಮ ಅಪರಾಧದ ಪ್ರಾಯಶ್ಚಿತ್ತವೆಂದೇ ನಿಮ್ಮ ಮಗು ಸುರಮಾ ಅಂದೇ ಹೋಯಿತು.

ರಾಘಪ್ಪ: ಮಗು ಹೋಯಿತೆ? ಏನಾಯಿತು....ತಾಯಿ ಮಗುವನ್ನೂ ಕೊಂದರೆ? ಮಗುವನ್ನೂ ಕೊಂದರೆ?

ನಜಮಾ: ಇವರಿಂದ ನಾನು ತಪ್ಪಿಸಿಕೊಂಡು ಗಾಬರಿಯಾಗಿ ಅದೊ ಅಲ್ಲಿ ಕಾಣುವ ಆ ಹಾಳು ಶಿವಾಲಯದಲ್ಲಿ ಮಗುವನ್ನು ಮಲಗಿಸಿ ಪುನಃ ಇವರನ್ನು ಹುಡುಕಲು ಬಂದೆ. ರಾತ್ರಿ ಇಡೀ ಹುಡುಕಿದರೂ ಇವರು ಸಿಗಲಿಲ್ಲಾ. ಬೆಳಗಾಗುವಷ್ಟರಲ್ಲಿ ಅಲ್ಲಿಗೆ ಹೋಗಿ ನೋಡಲು ಮಗು ಇರಲಿಲ್ಲಾ. ಅಲ್ಲಲ್ಲಿ ರಕ್ತದ ಬೊಟ್ಟುಗಳು ಬಿದ್ದಿದ್ದವು. ಆ ಮೇಲೆ ಬೆಳಗಾದ ಮೇಲೆ ಲಕ್ಷ್ಮಿತಾಯಿಯ ಈ ಸಮಾಧಿಯ ಬಳಿ ಒಂದು ಚಿಕ್ಕ ಮಗುವನ್ನೂ ಹೊಂಡದಲ್ಲಿ ಮಲಗಿಸಿದರು. ಅದೇ ನನ್ನ ಮಗು ಮಹನೀಯಾ, ಅದು ನನ್ನ ಮಗು....

ರಾಘಪ್ಪ: ಇದು ನಿನ್ನ ಮಗುವಿನ ಸಮಾಧಿಯಲ್ಲಾ ತಾಯಿ ...ನನಗೂ ಒಂದು ಮಗುವಿತ್ತು. ಅದರ ಹೆಸರು ಗಿಳಿ, ಗಿಳಿ.... ಲಕ್ಷ್ಮಿಯನ್ನು ಕೊಲ್ಲುವವರು ಒಳಗೆ ಮಲಗಿದ್ದ ಅವಳ ಮಗುವನ್ನೂ ಬಿಟ್ಟಿರಲಿಲ್ಲಾ, ನನಗೀಸಮಾಚಾರ ಠಾಣೆಯಲ್ಲಿ ತಿಳಿದಾಕ್ಷಣ ಭ್ರಮಿಷ್ಠನಂತೆ ಓಡಿಬಂದೆ. ನೋಡುವದೇನು ಮನೆ ಉರಿಯುತ್ತಿದೆ. ಹಟ್ಟಿಯಲ್ಲಿ ದನಕರುಗಳು ಅರ್ಧ ಬೆಂದು ಅರ್ಧ ಸುಟ್ಟು ಸತ್ತುಹೋಗಿವೆ. ಅಂಗಳದಲ್ಲಿ ಲಕ್ಷ್ಮಿ, ನನ್ನ ಧರ್ಮಪತ್ನಿಯು ಕೈಯಲ್ಲಿ ಕತ್ತಿ ಹಿಡಿದು ಸತ್ತುಬಿದ್ದಿದ್ದಳು. ಮನೆಯ ಹೊಸ್ತಿಲಲ್ಲಿ ನನ್ನ ಮಗು ...ಗಿಳಿ ...ಗಿಳಿಯನ್ನು ತಿವಿದುಹಾಕಿದ್ದರು. ಆ ಮೂರು ವರುಷದ ಎಳೆ ಮಗೂ ಅವರಿಗೆ ಏನು ಅಪರಾಧಮಾಡಿತ್ತೋ? ಮಗುವಿನ ಎದೆಯನ್ನು ಭರ್ಚಿಯಿಂದ ತಿವಿದರೊ, ಕತ್ತಿಯಿಂದ ಚುಚ್ಚಿದರೊ ಕುಢಾರಿಯಿಂದ ಕೊಚ್ಚಿದರೊ ಯಾರು ಬಲ್ಲರು? ನನ್ನ ಗಿಳಿಯು ಅರ್ಧ ಬಾಯಿತೆರೆದು ಅಮ್ಮಾ ಎನ್ನುವಾಗಲೇ ಪ್ರಾಣಬಿಟ್ಟಿದ್ದಳು. ನನ್ನ ಗಿಳಿಯು ಅಪ್ಪ ಬಂದನೇ ಎಂದು ಅರ್ಧ ನೋಟ ನೋಡುವಾಗಲೇ ಸತ್ತಿದ್ದಳು. ಇದೆಲ್ಲವನ್ನು ನೋಡಿ ನಾನು ಅತೀ ಕಠೋರ ದುಸ್ವಪ್ನ ಕಂಡ ಹುಚ್ಚನಂತಾಗಿ ಸ್ತಬ್ದನಾದೆ. ಅಳಲಿಲ್ಲಾ,ಕೂಗಲಿಲ್ಲಾ,ನಿಂತಲ್ಲೇ ಕಲ್ಲಾದೆ. ಅಷ್ಟರಲ್ಲಿ ಆರ್ಯಸಮಾಜದ ಸ್ವಯಂಸೇವಕರು ನನ್ನನ್ನು ದೂರಮಾಡಿ ತಮ್ಮ ಕೆಲಸದಲ್ಲಿ ತೊಡಗಿದರೂ ನಾನು ಸಾವಿನ ನಿರ್ಧಾರ ಮಾಡಿಕೊಂಡು ಆತ್ಮಹತ್ಯಮಾಡಿಕೊಳ್ಳಬೇಕೆಂದು ಅದೊ ಆ ಶಿವಾಲಯದ ಹಾಳು ಬಾವಿಯ ಸಮೀಪಕ್ಕೆ ಹೋಗುವಷ್ಟರಲ್ಲಿ ಯಾವುದೊ ಒಂದು ಮಗು ಕತ್ತಲೆಯಲ್ಲಿ ಅಳುತ್ತಾ ಬಂದು ನನ್ನ ಕಾಲುಗಳಿಗೆ ಅಪ್ಪಿಕೊಂಡು "ಅಬ್ಬಾಜಾನ್" "ಅಬ್ಬಾಜಾನ್" ಎಂದು ಅಳಲಾರಂಭಿಸಿತು.......ತಾಯಿ, ಅದೊಂದು ಮಾಯೆಯ ಅಳು, ಮಮತೆಯ ಮಗುವಿನ ಧ್ವನಿಯು ನನ್ನ ಸಾವಿನ ನಿರ್ಧಾರವನ್ನು ಮರೆಸಿ ಮುಂದಿನ ಬಾಳಿಗಾಗಿ ಆಶೆ ಹುಟ್ಟಿಸಿತು. ಆ ಆಶೆಯಿಂದಲೇ ನಾನು ಇದುವರೆಗೂ ಬದುಕಿದೆ....

ನಜಮಾ: ನಿನಗೆ ಸಿಕ್ಕ ಆ ಮಗು.... ಹೇಗಿದೆ, ಎಲ್ಲಿದೆ?

ರಾಘಪ್ಪ: ತಾಯಿ ನೀನು ಯತಃ ಕಿಂಚಿತವೂ ಶಂಕಿಸಬೇಡವು. ಅದು ನಿಸ್ಸಂದೇಹವಾಗಿ ನಿನ್ನ ಮಗುವೆ! ಇಲ್ಲಿಯೇ ಇದೆ. ನಿನ್ನ ಮಾಯೆಯ ನಿಧಿ ಇಲ್ಲಿಯೇ ಇದೆ. (ಮಗುವನ್ನು ಕರತರುವನು.) ಬಾಬೂ. (ನಿದ್ದೆಯಲ್ಲಿದ್ದ ಮಗು ಕಣ್ಣುತೆರೆದು ತಿಕ್ಕಿಕೊಳ್ಳುತ್ತ ನಿಲ್ಲುವದು) ಮಗೂ, ಇದೊ ನೋಡು ಇವಳು ನಿನ್ನ ಅಮ್ಮ, ನಿನ್ನ ತಾಯಿ. ಹೋಗು, ಹಾಲುಂಡ ಅಂತಃಕರಣವನ್ನು ಕೂಡಿಕೊ.

ನಜಮಾ: (ಮಗುವನ್ನು ಮುದ್ದಿಸುತ್ತಾ) ಸುರಮಾ ..ನನ್ನ ಕರುಳೇ, ನನ್ನ ಬಾಳಿನ ಬೆಳಕೆ, ನಗ್ನ ...ನನ್ನ ಸರ್ವಸ್ವವೇ! (ಎಂದು ಅಳುನಗು ಎರಡರಿಂದಲೂ ಗಂಟಲು ಬಿಗಿದಂತಾಗಿ ಮಗುವನ್ನು ಎದೆಗವಚಿಕೊಳ್ಳುವಳು.)

ರಾಘಪ್ಪ: (ರಹಿಮನಿಗೆ ತೋರಿಸುತ್ತಾ) 'ರಹೀಮ್, ನೋಡಿದೆಯಾ ಈ ಮಾಯೆಯನ್ನು....ಹೇಳು. ಇದು ಯಾವ ಧರ್ಮದಲ್ಲಿ, ಯಾವ ಹೆಸರಿನಿಂದ, ಯಾವ ಜಾತಿಯ ಪಂಗಡಕ್ಕೆ ದೇವರು ಕೊಟ್ಟಿರುವ ಮಾಯೆ. ಇದು ಹಿಂದೂ ಧರ್ಮದ ಮಾಯೆಯೊ? ಮುಸಲ್ಮಾನ ಧರ್ಮದ ಮಾಯೆಯೊ? ಅಲ್ಲ....ಈ ಮಾಯೆಗೆ ಯಾವುದಾದರೂ ಹೆಸರಿದ್ದರೆ ಅದು ಕೇವಲ ನಿಸರ್ಗದತ್ತವಾದ, ಪಶುಪಕ್ಷಿ ಕೀಟಾಣುಗಳಲ್ಲಿ ಸಹಾ ತುಂಬಿರುವ ದೈವಿಕ ಮಾಯೆ. ಈ ಮಾಯೆಯಿಂದ ದೂರವಾದ ಮಾನವರು ಮಾತ್ರ ಧರ್ಮದ ಹೆಸರಿನಿಂದ ಮನುಷ್ಯತ್ವಕ್ಕೆ ದ್ರೋಹಮಾಡುತ್ತಾರೆ. ಇತರರನ್ನು ಹಾಳುಮಾಡುತ್ತಾರೆ. ತಾವೂ ಹಾಳಾಗುತ್ತಾರೆ. ಕೊನೆಗೆ ಹಾಳಾದವರೆಲ್ಲರೂ ಕೂಡಿಕೊಂಡು ಮತ್ತೊಂದು ಧರ್ಮಸಂಸ್ಥಾಪನೆಗಾಗಿ, ಉಳಿದ ಧರ್ಮವನ್ನೂ ಲಯಿಸುತ್ತಾರೆ.

ರಹೀಮ: ರಾಘಪ್ಪ, ಇಂದು ನಾನು ಏನೆಲ್ಲಾ ನೋಡಿದೆ ಏಕೆ ನೋಡಿದೆ? ಏನಿದ್ದವನು ಏನಾದೆ. ನನ್ನದು ನನಗೆ ತಿಳಿಯದಂತಾಗಿ, ದೇವರಿರುವನೆಂಬ ಮಾತು ಸುಳ್ಳೆಂದು ತಿಳಿದು ನನಗೆ ಒಬ್ಬ ಮನುಷ್ಯನೇ ದೇವರಾಗಿ ಕಂಡನು ರಾಘಪ್ಪ. (ಕೈಹಿಡಿದು) ನೀನು ನನಗೆ ಹೊಸಧರ್ಮವನ್ನು ಬೋಧಿಸಿದೆ ಹೊಸ ದೇವರನ್ನು ತೋರಿಸಿದೆ ಹೊಸ ಕರ್ತವ್ಯವನ್ನು ಕಲಿಸಿದೆ. ಅದು. ಮಾನವ ಪ್ರೇಮ... ಮಾನವ ಪ್ರೇಮ (ತಲೆಬಾಗುವನು.)

ನಜಮಾ—ಅಣ್ಣಾ, ಸತ್ತ ಜೀವವನ್ನು

ಶ್ರೀ ಧರ್ಮಸ್ಥಳ ಮತ್ತು ಅಣ್ಣಪ್ಪದೈವ

(ಸಂಗ್ರಾಹಕ: ದಿ| ಎಂ. ನಾರಾಯಣ, ಮಂಗಳೂರು)

ದಿ| ಎಂ. ನಾರಾಯಣನವರು, ನಮ್ಮ ಜಿಲ್ಲೆಯ ತುಳುವರಲ್ಲಿ ಪಾರಂಪರ್ಯವಾಗಿ ಪದ್ಯರೂಪದಲ್ಲಿ ಹಾಡಿಬಂದಿರುವ, ಈ ಜಿಲ್ಲೆಯ ತುಳುಪ್ರದೇಶದಲ್ಲಿ ಪ್ರಚಾರದಲ್ಲಿರುವ ಕತೆಗಳನ್ನು "ಪಾಡ್ದನ"ಗಳೆಂದ, ವಯೋವೃದ್ಧ ತುಳುವ ಸ್ತ್ರೀಯರಿಂದ ಅವನ್ನು ಹಾಡಿಸಿ ಬರೆದುಕೊಂಡು, ಗದ್ಯರೂಪಕ್ಕೆ ಇಳಿಸಿದರು. ಅವರದು ಸುಮಾರು ಆರು ವರ್ಷಗಳ ಶ್ರಮ. "ಪ್ರಭಾತ"ದಲ್ಲಿ ಅವರು ಬರೆದ 90ಕ್ಕಿಂತಲೂ ಹೆಚ್ಚು ಇಂಥ ಕತೆಗಳು ಪ್ರಕಟವಾಗಿವೆ. ಅವರು ಇನ್ನೂ ಸಂಗ್ರಹಕಾರ್ಯದಲ್ಲಿರುವಾಗಲೇ ವಿಧಾತನು ಅವರನ್ನು ನಡುವಿನಲ್ಲೇ ತನ್ನಲ್ಲಿಗೆ ಬರಮಾಡಿಸಿಕೊಂಡನು. ಅವರು, ಧರ್ಮಸ್ಥಳ ದೀಪೋತ್ಸವದ ವೇಳೆ ಸಾಮಯಿಕವಾಗಿ ಪ್ರಕಟವಾಗಬೇಕೆಂದು ಬರೆದುಕೊಟ್ಟಿದ್ದ ಒಂದು ಕತೆ "ಶ್ರೀ ಧರ್ಮಸ್ಥಳ ಮತ್ತು ಅಣ್ಣಪ್ಪದೈವ"— ನಮ್ಮ ಸಂಗ್ರಹದಲ್ಲಿದ್ದುದನ್ನು ಇಲ್ಲೀಗ ಪ್ರಕಟಿಸುತ್ತಿದ್ದೇವೆ.

ಸಂಪಾದಕ: ಪ್ರಭಾತ.

ಸತ್ತಿಕಲ್ಲ ಬೀಡಿನಲ್ಲಿ (ಈಗಿನ ಧರ್ಮಸ್ಥಳದಲ್ಲಿ) ಇದ್ದವರು ಅಜ್ಜನವರು—ಸತ್ತಿಕಲ್ಲ ಬಲ್ಲಾಳ! ("ಸತ್ತಿಕಲ್ಲ ಬಲ್ಲಾಳ್") ಅವರ ಹೊಮ್ಮಗಳು-ಪೂವಲಕ್ಕ ದೈಯೊರೆ. ಅವರು ಮದುವೆಯಾಗಿಲ್ಲ.

ಒಂದು ದಿನ ಪೂವಲಕ್ಕ ದೈಯೊರೆ ವಿಹಾರಾರ್ಥವಾಗಿ ಹೊಳೆ ಬದಿಗೆ ಹೋದಳು. ಅಲ್ಲಿ ತೀಮುಳ್ಳು (ಗಣಜಿಲು) ಇದರ ಪೊದೆಯೆಡೆಗೆ ಸರಿದು ಜಲಬಾಧೆ ನಿವಾರಿಸಲಿಕ್ಕೆ ಕೂತಳು. ಆಗ "ಬೀಜಾನ ಗಾಳಿ ಬೀಜಿಂಡ್, ದರ್ಪಾನ ಬರ್ಸ ದರ್ತ್ಂಡ್!" (ಬಿರುಗಾಳಿ ಬೀಸಿತು, ಬಿರುಮಳೆ ಬಡಿಯಿತು!) ಆಕೆಯ ಮೈಯ ಬಟ್ಟೆ ಹಾರಿಕೊಂಡಿತು. ಆಕೆಗೆ ಮಾಯದ ಗರ್ಭ ಧಾರಣವಾಯಿತು!

ದೈಯೊರೆ ಬೀಡಿಗೆ ಮರಳಿದಳು.

ದಿನದಿಂದ ದಿನಕ್ಕೆ ಗರ್ಭ ಬಲಿಯಿತು. ನಾಲ್ಕು ತಿಂಗಳು ದಾಟಿತು. ಅವಳ ಗರ್ಭಕ್ಕೆ ನವಮಾಸ ತುಂಬಿತು.

ಆಗ ದೈಯೊರೆಯ "ಶೆಲಿಯುಳ್ಳ ಮೋನೆಟ್ ಪುಲಿಯುಳ್ಳ ಬೇನೆ ತೋಜುಂಡು." (ಶಿಲಿಯುಳ್ಳ ಮೊಗದಲ್ಲಿ ಮ್ಲಾನತೆಯ ಸುಖ ಬೇನೆ ಗೋಚರಿಸಿತು.) ಹೊಟ್ಟೆಯೊಳಗಿನಿಂದ ಗರ್ಭಶಿಶು ನುಡಿಯಿತು.

"ಅಮ್ಮಾ, ನಾನು ಎಲ್ಲಿಂದ ಬರಬೇಕು? ಜನನಕ್ಕೆ ಹೊತ್ತಾಯಿತು."

"ದೇವರು ನಿರ್ಮಿಸಿದ ಮಾರ್ಗವಿದೆ; ಅದರ ದ್ವಾರಾ ಬಾ, ಮಗನೇ"—ಹೇಳಿದಳು ದೈಯೊರೆ!

"ನಾನು ಹೊಲಸಿಗೆ ಕಾಲಿಕ್ಕಲಾರೆ. ನರಕಕ್ಕೆ ತಲೆಯೊಡ್ಡಲಿಕ್ಕಿಲ್ಲ, ಅಮ್ಮಾ ಬೆನ್ನು ಒಡೆದು ಬರಲೆಯಾ?"

"ಅಯ್ಯೋ! ಹಾಗೆ ಬಂದರೆ ಕನ್ನಡಿ ಹಾವು ಮರಿ ಇಕ್ಕಿದೆಯೆಂದು ಜನರಾಡಬಹುದು."

"ನೆತ್ತಿ ಭೇದಿಸಿ ಬರಲಿಯಾ?"

"ಹಾ! ನೆತ್ತಿ ಭೇದಿಸಿ ಬಂದರೆ ನಿನ್ನನ್ನು ಬ್ರಹ್ಮರಾಕ್ಷಸನೆಂದು ಕರೆಯಬಹುದು."

"ಹೊಟ್ಟೆ ಸೀಳಿ ಬರಲಿಯಾ, ಅಮ್ಮಾ?"

"ಅಹುದಾ! ಹೊಟ್ಟೆ ಸೀಳಿ ಬಂದರೆ ತಾಯಿಯನ್ನು ಕೊಂದ "ಕೆಂಗುಡೆ" (ಕೆಂಗಣ್ಣ) ಎಂದು ನಿನ್ನನ್ನು ಕರೆಯಬಹುದು."

"ಮತ್ತೆಲ್ಲಿಂದ ನಾನು ಬರಬೇಕು. ಅಮ್ಮಾ? ಜನನಕ್ಕೆ ವೇಳೆಯಾಯಿತು."

"ದೇವರು ಕೊಟ್ಟ ಮಾರ್ಗದಿಂದಲೇ ಬಾ, ನನ್ನ ಮುದ್ದೂ."

"ದೇವರು ಕೊಟ್ಟ ಮಾರ್ಗದಿಂದ ನಾನು ಹೊರಟು ಬರಲಾರೆ, ಅಮ್ಮಾ. ನಿಮ್ಮ ಎಡಪಕ್ಕದ ಸ್ತನವನ್ನು ಪರಿಸಿರಿ. ಬಲಪಕ್ಕದ ಸ್ತನವನ್ನು ಬಗ್ಗಿಸಿರಿ. ಬಲಪಕ್ಕದ ಸಿರಿಸ್ತನವನ್ನು ಸೀಳಿ ಹೊರಬರುವೆನು. ಎರಡರದ ಪರದೆ ಬೀಳಿಸಿರಿ. ಚಿನ್ನದ ಹರಿವಾಣ ಮುಂದೆ ಹಾಕಿರಿ."

ಪರಿಚಾರಿಕೆಯರು ಪರದೆಯನ್ನು ಬೀಳಿಸಿದರು. ಚಿನ್ನದ ಹರಿವಾಣ ಒಡ್ಡಿದರು. ಎಡದ ಸ್ತನವನ್ನು ಎತ್ತರಿಸಿದರು. ಬಲದ ಸಿರಿಸ್ತನ ಭೇದಿಸಿ ಶಾಶಿವಯ ಹರಳಾಗಿ ಚಿನ್ನದ ಹರಿವಾಣಕ್ಕೆ ಬಿದ್ದುಕೊಂಡಿತು! ಗರ್ಭಸ್ಥ ಜೀವಾಣುವೊಂದು! ದುಂಡನ್ನ ಹರಿವಾಣದಲ್ಲಿ ಒಂದಾವರ್ತಿ ತಿರುಗಿದಾಗ ಶಿಶುರೂಪದ ಗಾತ್ರವಾಯಿತು! ಎರಡಾವರ್ತಿ ಸುತ್ತ ತಿರುಗಿದಾಗ ದೊಡ್ಡ ದಿವ್ಯದಾಕಾರವಾಯಿತು. "ಸ್ಥಾನ" (ಪ್ರಸವದ ನೆತ್ತರು—ನೀರು ಚೆಲ್ಲ ಸ್ಥಳದಲ್ಲಿ) ಮಗು ಅರಳಿಕೊಂಡಿತು! ಚಿನ್ನ ಹಾಕ್ಕಿಯಂತಹ ಮಗು! ಆಗ ಅಜ್ಜರು—ಸತ್ತಿಕಲ್ಲ ಬಲ್ಲಾಳರು ಹೊರಗಿನಿಂದ ಅತ್ಯಾತುರಭರಿತರಾಗಿ ಸೂಲಗಿತ್ತಿಯನ್ನು ಉದ್ದೇಶಿಸಿ ವಿಚಾರಿಸಿದರು:

. "ಬಂಬೆ ಬಲ್ಲಾಳ್ತಿ! ತಂಬೆ ಮದುರೇ! ಎಂತಹ ಮಗು?"

"ಗಂಡು ಮಗು! ಅಜ್ಜನವರೇ.—ಒಳಗಿನಿಂದ ಸೂಲಗಿತ್ತಿಯರು ಉತ್ತರಿಸಿದರು.

"ಸಂತೋಷ! "ಫುಲಟ್" ರೂಪಿತವಾದ ಮಗುವಿಗೆ ಅಲ್ಲೇ "ಫುಲಟ್" ಹೆಸರಾಕುತ್ತೇನೆ. ಪಾಲಿ ಬುಗ್ಗೆಯನ್ನು ಸೀಳಿ ಹೊರಬಂದ ಕುಮಾರ ದಾಮೋರಿ ಧರ್ಮರಸ ಉಲ್ಲಾಯ!"

* * *

ಮಗು ದಿನದಿಂದ ದಿನಕ್ಕೆ ಚಂದ್ರನಂತೆ ತೇಜೋ ಪ್ರಜ್ವಲತೆಯಿಂದ ಬೆಳಗಿ ಗೂಡು ಪ್ರವರ್ಧಿಸಿತು.

ಮಗನಾದ ದಾಮೋರಿ ಧರ್ಮರಸನಿಗೆ ಹದಿನಾರು ವರುಷ ಪ್ರಾಯವಾಯಿತು!

ತಾಯಿ ಪೂವಲಕ್ಕ ದೈಯೊರೆಗೆ ದಾಮೋರಿ ಧರ್ಮರಸನು ಒಂದು ದಿನ ಹೇಳಿದನು:

"ಅಮ್ಮಾ! ನಾನು ನಿಮಗೆ ಸಿಗುವ ಮಗನಲ್ಲ. ನಾನು ಹೋಗುತ್ತೇನೆ."

ದೈಯೊರೆ ಕಣ್ಣೀರು ಸುರಿಸುತ್ತ ಗದ್ಗದಿತ ಕಂಠದಿಂದ ನುಡಿದಳು:

"ಮಗನೇ, ದೇವರು ಕೊಟ್ಟರು, ದೇವರು ಕೊಂಡೊಯ್ಯುವರೆಂದು ನೀನು ಹೇಳುವೆಯಾ?"

"ಇಲ್ಲಾ, ಅಮ್ಮಾ! ನಾನು ಹೋಗುತ್ತೇನೆ. ನನ್ನ ಜನ್ಮದ ಕಾರ್ಯೋದ್ದೇಶವು ಅತೀ ಮಹತ್ವದ್ದಿರುತ್ತದೆ. ಅದನ್ನು ನಾನು ನೆರವೇರಿಸುವುದಕ್ಕೆ ಹೋಗುತ್ತಿದ್ದೇನೆ."—

ಬದುಕಿಸಿದೆ, ಹರಿದ ಚೆಲ್ಲಿಹೋದ ಮಾಂಗಲ್ಯದ ಮಣಿಗಳನ್ನು ಪೋಣಿಸಿಕೊಟ್ಟೆ, ಒಡೆದ ಸಂಸಾರದ ಕನ್ನಡಿಯನ್ನು ಕೂಡಿಸಿ ಕೊಟ್ಟೆ ಇದಕ್ಕಾಗಿ ಈ ಮಹಾದುಪಕಾರಕ್ಕಾಗಿ ನಾವು....

ರಾಘಪ್ಪ—ನನಗೊಂದೇ ಮದುಪ್ರತ್ಯುಪಕಾರವನ್ನು ಮಾಡಿ ರಹೀಮ ಇದು ನಿನ್ನ ಮಗು ಆದರೆ ಇದರ ಮನಸ್ಸು ನಿನ್ನಂತಿಲ್ಲ. ಮೊನ್ನೆಯ ದಿನ ಅದೊ ಆ ಮರದ ಪೊಟರೆಯಿಂದ ಒಂದು ಗಿಳಿಯ ಮರಿಯು ಕೆಳಗೆ ನೆಲಕ್ಕೆ ಬಿತ್ತು. ಕೂಡಲೆ ಅದನ್ನು ನೋಡಿ ಬಾಬು ಬಿತ್ತು ಬಾಬು ಬಿತ್ತು ಎಂದು ಓಡಿಬಂದು ತನ್ನ ಅಂಗಿಯನ್ನು ನೀರಿನಲ್ಲಿ ಮುಳುಗಿಸಿ ಅದರ ಮೇಲೆ ಹಿಂಡಿ ಬಾಯಿಯಿಂದ ಗಾಳಿ ಊದ ತೊಡಗಿತು. ಮುಂದೆ ಆ ಗಿಳಿ ಮರಿಯು ಸತ್ತದನ್ನು ಕಂಡು ದಿನಾ ಆ ಸ್ಥಳದಲ್ಲಿ ಕುಳಿತು ಅಯ್ಯೊ ಚಿಣ್ಣ ಬಾಬು ಬುಡುಕನ್ ಬಿತ್ತು ಚತ್ತು ಹೊಯ್ತು ಎಂದು ತೊದಲು ನುಡಿಯನ್ನಾಗಿ ದೇವರು ತನಗೆ ಜನ್ಮದಿಂದ ಕೊಟ್ಟ ಕರುಣೆಯನ್ನು ತೋರಿಸಿತು. ತಾಯೀ ಈ ಪ್ರೇಮ ಭಂಡಾರವನ್ನು ಒಡೆದು ಬೇರಾದ ಧರ್ಮದಚ್ಚಿಗಿಳಿಸಬೇಡಿ. ಇಷ್ಟೆ ನನ್ನ ಬೇಡಿಕೆ—ಹೋಗಿ, ಹೋಗಿಬನ್ನಿ(ಮಗುವನ್ನೆತ್ತಿಕೊಂಡು) ಹೋಗು ಮಗು ನನ್ನ ಗಿಳಿಯ ಸ್ಥಳವನ್ನು ತುಂಬಿಕೊಟ್ಟು ನನ್ನ ದುಃಖ ಮರೆಸಿದ ಮುದ್ದಿನ ಹೂವೆ. ಜಗತ್ತನ್ನುದ್ಧರಿಸುವ ರಾಷ್ಟ್ರೀಯ ಪುರುಷರು ನಿನ್ನ ಗರ್ಭದಲ್ಲಿ ಜನ್ಮತಾಳಲಿ.

ನಜಮಾ—ತಾಯಿ(ಗೋರಿಗೆ) ಲಕ್ಷ್ಮೀದೇವಿ (ನಮಸ್ಕರಿಸುವಳು)

ರಹಿಮಾ—ದೇವಿ ನಾನು ನಿನಗೆ ನಮಿಸುವಷ್ಟು ಯೋಗ್ಯತೆ ಪಡೆದವನಲ್ಲಾ.... ಆದರೂ .. (ದೂರದಿಂದ ನಮಿಸುವಾಗ ಮರೆಯಲ್ಲಿ ಹಾವು ಬಂದು ರಹೀಮನಿಗೆ ಕಚ್ಚುವದು) ಅಯ್ಯೊ ಹಾವು ಹಾವು.

ರಾಘಪ್ಪ—ಏನು....ಏನಾಯಿತು?

ನಜಮಾ—ಏನಾಯಿತು....ಏನಾಯಿತು

ರಹೀಮ—ಹಾವು ಕಚ್ಚಿತು. ಇಲ್ಲಿ ಕಚ್ಚಿತು. ಉರಿ ಉರಿ (ಎಂದು ತನ್ನ ಬಲಗೈಯ ಗಂಟಿನ ಸ್ವಲ್ಪ ಕೆಳಗೆ ತೋರಿಸುವನು)

ರಾಘಪ್ಪ—(ತನ್ನ ಸೊಂಟದ ಬಟ್ಟೆ ಹರಿದು ಕೈಗೆ ಬಿಗಿದು) ನಾಗಾ ಕೊನೆಗೂ ನೀನು ನಿನ್ನ ಸ್ವಭಾವ ಬಿಡಲಿಲ್ಲಾ.

ನಜಮಾ—ಅಣ್ಣಾ ಅದು ವಿಷ ಪ್ರಾಣಿ. ಕೊನೆಗೂ ನನ್ನ ಹಣೆಯಲ್ಲಿ ಸುಖದ ದಿನಗಳಿಲ್ಲವೆ?

ರಾಘಪ್ಪ—ಚಿಂತಿಸದಿರು ತಾಯಿ ಅಮೃತ ಉಣಿಸಿದ ಮನುಷ್ಯನು ವಿಷವನ್ನು ಹೀರಿಕೊಳ್ಳಲು ಎಂದೂ ಅಂಜುವದಿಲ್ಲಾ(ಎಂದು ಸರ್ಪ ಕಚ್ಚಿದ ಸ್ಥಳ ಬಾಯಿ ಹಚ್ಚಿ ಹೀರಲು ಹೋಗುವನು)

ರಹೀಮ—ಬೇಡ, ಬೇಡ, ಬಾಂಧವಾ, ನಾನು ಸಾಯುವದೇ ಒಳಿತು: ನಾನು ಬದುಕಬಾರದು....ನನ್ನನ್ನು ಸಾಯಲು ಬಿಡು.

ರಾಘಪ್ಪ—ನಿನ್ನಂಥವರು ಬದುಕಲೇ ಬೇಕು. ಬದುಕಿ... ನಿಮ್ಮಂಥ ನಿಮ್ಮಂಥವರು ಬುದ್ಧಿಗಲಿಯಬೇಕು... (ಹೀರಿಕೊಳ್ಳಲು ಪ್ರಾರಂಭಿಸುವನು ಆಗ ಹಿಂದಿನಿಂದ ದೂರದಲ್ಲಿ ಕಾರುಣ್ಯ ಸರಭಾವದ ತಂತುವಾದನ ಧ್ವನಿ ಕೇಳುತ್ತಿರಬೇಕು)

ರಹಿಮ— ಬಾಂಧವಾ.... ಅಲ್ಲಲ್ಲಾ, ನೀನು ನನ್ನ ಪುನರ್ಜನ್ಮದ ಪಿತನು... ನನಗಾಗಿ ಎಲ್ಲವನ್ನೂ ಮಾಡಿದೆ ಕೊನೆಗೆ ಸಾವಿನೊಡನೆ ಸಹಾ ಹೋರಾಡಿದೆ.

ರಾಘಪ್ಪ—ರಹೀಮ "ಸಾವು" ನಿನ್ನ ಕಲ್ಪನೆಯಲ್ಲಿರುವಷ್ಟು ಭಯಾನಕವಾದ ವಸ್ತುವಲ್ಲಾ. ಯಾವನಿಗೆ ತನ್ನ ಕರ್ತವ್ಯಕ್ಕಾಗಿ ಸಾಯಲು ತಿಳಿಯುವದೋ ಅದೇ ಆತ್ಮಕ್ಕೆ ಕರ್ತವ್ಯಕ್ಕಾಗಿ ಮತ್ತೊಮ್ಮೆ ಹುಟ್ಟಿಬರಲು ಸಹಾ ತಿಳಿಯುವದು, ಆತ್ಮವಿಶ್ವಾಸವಿಲ್ಲದ ಹೇಡಿಗಳು ಮಾತ್ರ ಸಾವಿಗಾಗಿ ಅಂಜುತ್ತಾರೆ. ಹುಟ್ಟಿದ ಈ ಜನ್ಮದಲ್ಲಿಯೇ ನಮ್ಮ ಎಲ್ಲಾ ಅಶುಭಗಳುರುಕುತನಗಳನ್ನು ತೀರಿಸಿಕೊಳ್ಳಬೇಕೆಂದು ಹಂಬಾಯುತ್ತಾರೆ. ಅವರಿಗೆ ತಮ್ಮ ಆತ್ಮದ ಮೇಲೆ ವಿಶ್ವಾಸವಿಲ್ಲ, ದೇವರಲ್ಲಿ ವಿಶ್ವಾಸವಿಲ್ಲಾ. ಧರ್ಮದಲ್ಲಿ ವಿಶ್ವಾಸವಿಲ್ಲ, ಇಂಥವರಿಂದಲೇ ಹಿಂದೂಸ್ಥಾನವನ್ನು ತುಂಡರಿಸಲು ಪಾಪಿಗಳ ಬಂಡಾಯವೆದ್ದಿತು. ಹುಚಿದ ಮಾಲಿನ ಅಕ್ಷಣಹಾನ ಎರಡು ಕಣ್ಣುಗಳು ತಮ್ಮ ತಮ್ಮಲ್ಲಿಯೇ ಹೋರಾಡಿ, ಭರತ ಭೂಮಿಯ ಜನಸಾಮ್ರಾಜ್ಯದ ಸೌಂದರ್ಯವನ್ನೇ ಕುರೂಪಗೊಳಿಸಿದವು ...

ರಹೀಮ—ಕ್ಷಮಿಸು... ಕ್ಷಮಿಸು ತಂದೇ ಕ್ಷಮಿಸು.

ನಜಮಾ—ರಕ್ಷಿಸು....ತಂದೇ ರಕ್ಷಿಸು.

(ಇಬ್ಬರೂ ರಾಘಪ್ಪನ ಕಾಲಡಿ ಕೂಡುವರು)

ರಾಘಪ್ಪ—ಕ್ಷಮಿಸಲು ಮತ್ತು ರಕ್ಷಿಸಲು ನಾನು ಯಾರು? ಸರ್ವರನ್ನು ರಕ್ಷಿಸುವ ಮತ್ತು ಕ್ಷಮಿಸುವ ಆ ದೇವನನ್ನು ಸ್ಮರಿಸಿ, ರಾಮರಹೀಮರೊಂದೇ ಎಂದು ಹಾಡಿದ, ಸರ್ವಜಾತಿ ಜನಾಂಗಗಳನ್ನು ಸಮಾನತೆಯಿಂದ ನೋಡಿದ, ಬ್ರಹ್ಮಾಂಡ ಚಿತ್ರರೇಖೆಯಲ್ಲಿ ಭಾರತ ಶಾಂತಿ ಜ್ಯೋತಿಯನ್ನು ಕೂಡಿಸಿದ ಆ ಪತಿತಪಾವನನ್ನು ಸ್ಮರಿಸಿ

ಈಶ್ವರಅಲ್ಲಾ। ತೇರೇನಾಮ್।
ಸಬಕೋ। ಸನ್ಮತಿ। ದೇಭಗವಾನ್।
ಹಮುಸಾರೆ। ಭಾರತಕೆ। ಪ್ರಾಣ್।
ಹಮುಸಬಕೊ।ಏಕಹೀ ಭಗವಾನ್।
ಏಕಧರ್ಮ। ಏಕಹಿ ಭಗವಾನ್।
ಬಾಪೂಜೀಕಾ। ಜೈ। ಹಿಂದುಸ್ತಾನ್॥

(ಪರದೆ ಬೀಳುವದು)

॥ ಮಂಗಲಂ ॥

*****

ಹೀಗೆಂದವನೇ ಸತ್ತಿಕಲ್ಲ ಬೀಡಿನಿಂದ ತನ್ನ ತಾಯಿಯನ್ನೂ, ಅಜ್ಜನವರನ್ನೂ ತೊರೆದು ಹೋಗಿಬಿಟ್ಟನು.

*　*　*

ದಾಪೂರಿ ಧರ್ಮರಸ ಉಲ್ಲಾಯನು ಕದ್ರಿಯ ಕಾಡಿಗೆ ಬಂದನು. ಅಲ್ಲಿ "ಗಂಡಗನಕಾಲು" (ಗಣದೂತರು) ಅವರಿಗೆ ಹೊಡ ಕುಡಿಸಿದನು. ಅವರಿಗೆ ಒಂದು ಸಾವಿರ ಹಾರೆ, ಒಂದು ಸಾವಿರ ಬುಟ್ಟಿಗಳನ್ನು ಕೊಟ್ಟು ಅವರಿಂದ ನೆಲದೊಳಗೆ ನೆಲಮಾಳಿಗೆಯೊಂದನ್ನು ರಚಿಸಿದನು. ಆ ರಾತ್ರಿ ನೆಲಮಾಳಿಗೆಯಲ್ಲಿ ತಂಗಿದನು.

ಮರುದಿನ ರಾತ್ರಿ ಕದ್ರಿ ದೇವಸ್ಥಾನದಲ್ಲಿ ಮಂಜುನಾಥ ದೇವರ ಬಲಿ ಪ್ರದಕ್ಷಿಣೆ ನಡೆಯುತ್ತಿತ್ತು. ಧರ್ಮರಸನು ಮಂಜುನಾಥದೇವರ ಭೇಟಿಯಾದನು. ದೇವರು ಗುಡಿಯೊಳಗೆ ಹೊಗ್ಗುವಾಗ ದೇವರೊಂದಿಗೆ ತಾನು ಕೂಡ ಪ್ರವೇಶಿಸಿದನು.

ದೇವರ ಲಿಂಗಕ್ಕೆ ಕಣ್ಣಿಕ್ಕಿದನು. ಲಿಂಗವನ್ನು ಕಿತ್ತು ತೆಗೆಯಲು ಅದನ್ನು ಎರಡು ಕೈಗಳಿಂದ ಅಲುಗಾಡಿಸಿದನು. ಅವನು ಶತಪ್ರಯತ್ನ ಮಾಡಿ ಅಲುಗಾಡಿಸಿದಾಗ್ಯೂ ಲಿಂಗಪೀಠದಿಂದ ಕದಲಲಿಲ್ಲ. ಅಷ್ಟರಲ್ಲಿ ದೇವರು ಶುದ್ಧ ಬಿಳಿ ವರ್ಣದ ಕೋಳಿಯಾಗಿ ಕೆಲೆದರು.

"ಹಾ ಕೆಟ್ಟಿತು! ಇಡೀ ಲಿಂಗವನ್ನು ಕಿತ್ತು ಕೊಂಡ್ಯೊಯ್ಯಬೇಕೆಂದು ಗ್ರಹಿಸಿದೆನು; ಬೆಳಗಾಯಿತು. ಜನರು ನೋಡಬಹುದು. ಲಿಂಗದ ಒಂದು ತುಂಡನ್ನು ಕಿತ್ತುಕೊಂಡು ಹೋಗುವೆನು."—ಹೀಗೆಂದು ದಡದಡಿಸಿ ಅತ್ಯವಸರಪಟ್ಟನು. ಒಡನೇ ಲಿಂಗದ ಒಂದು ತುಂಡನ್ನು ಕಿತ್ತು ತಲೆಯ ಮೇಲೆ ಹೊತ್ತುಕೊಂಡನು. ಅಲ್ಲಿಂದ ಮತ್ತೆ ಓಟಕಿತ್ತನು.

ಮೂಡು ದಿಕ್ಕಿಗೆ ಸಾಗಿದನು. ಬರುತ್ತ ಬರುತ್ತ ಈಗಿನ ಧರ್ಮಸ್ಥಳ ಕ್ಷೇತ್ರದ ಉತ್ತರದಲ್ಲಿ ಹರಿಯುವ ನೇತ್ರಾವತಿ ನದಿ ದಡಕ್ಕೆ ಬಂದನು.

ಇಂಥ ಮಂಜುನಾಥ ದೇವರು, ಲಿಂಗದ ಒಂದು ಭಾಗವನ್ನು ಕಿತ್ತು ಕದ್ದೋಡಿದ ತುಡುಗನನ್ನು ಬೆನ್ನಟ್ಟಿಕೊಂಡು ಹೋಗಿ ಅವನ ಕೈಯಿಂದ ಲಿಂಗದ ಭಾಗವನ್ನು ಕಸಿದುಕೊಂಡು ಬನ್ನಿರೆಂದು ತನ್ನ ಗಣದೂತರನ್ನು ಅಟ್ಟಿದರು.

ನದಿದಡಕ್ಕೆ ತಲಪಿದ ದಾಪೂರಿ ಧರ್ಮರಸನು ಗಣದೂತರು ಹಿಂದಿನಿಂದ ಬೆನ್ನಟ್ಟಿ ಬರುವುದನ್ನು ನೋಡಿಬಿಟ್ಟನು. ತಕ್ಷಣ ತನ್ನ ತಲೆಯ ಮೇಲಿದ್ದ ಲಿಂಗವನ್ನು ನೇತ್ರಾವತಿ ನದಿಗೆ ಬಿಸುಟಿದನು. ತಾನು ನದಿ ದಾಟಿ ಆಚೆ ದಡವನ್ನು ಸೇರಿಕೊಂಡನು.

ನೇತ್ರಾವತಿ ನದಿಯು ಆ ಕಡೆ ಪ್ರದೇಶಗಳಿಗೆ ಸೀಮಾರೇಖೆಯಾಗಿತ್ತು. ಗಣದೂತರಿಗೆ ನದಿ ದಾಟುವುದಕ್ಕೆ ನಿರ್ಬಂಧವಿದ್ದ ಕಾರಣ ಅವರು ವಿಫಲ ಮನಸ್ಕರಾಗಿ ನದಿಯ ಈಚೆ ದಡದಿಂದಲೇ ಮತ್ತೆ ಒಂದಕ್ಕೆ ಹೊರಳಿ ಹೋಗಿಬಿಟ್ಟರು.

*　*　*

ದಾಪೂರಿ ಧರ್ಮರಸ ಗಣದೂತರು ಕಣ್ಮರೆಯಾದ ಕೂಡಲೇ ನದಿಗೆ ಮುಳುಗಿ ಲಿಂಗವನ್ನು ಎತ್ತಿ ಮೇಲೆ ತಂದನು. ನೇತ್ರಾವತಿ ನದಿಯ ಆಚೆ ಮೂರು ಮೈಲು ದೂರದಲ್ಲಿ ಲಿಂಗವನ್ನು ಪ್ರತಿಷ್ಠಿಸಿ ಮಂಜುನಾಥ ದೇವರಿಗೆ ದೇವಸ್ಥಾನವನ್ನು ನಿರ್ಮಿಸಿದನು.

ಅಷ್ಟರಲ್ಲಿ ಅವನ ಅಜ್ಜ ಸತ್ತಿಕಲ್ಲ ಬ್ರಹ್ಮ ಅವರು ಇದ್ದಕ್ಕಿದ್ದ ಹಾಗೇ ದೇವಸ್ಥಾನದ ತಳದಲ್ಲಿ ಮಾಯವಾಗಿ ಬಿಟ್ಟರು!

ದೇವಸ್ಥಾನದ ಅರ್ಧಮೈಲು ದೂರ ಬೆಟ್ಟದ ಮೇಲೆ ಅಜ್ಜನವರಿಗೆ ಧರ್ಮರಸನು ಸ್ಥಾನ ಕಟ್ಟಿಸಿದನು.

"ಅಜ್ಜನವರೇ, ನೀವು ಇಂದಿನಿಂದ ಅಣ್ಣಪ್ಪ ಪಂಜುರ್ಲಿ ಇಲ್ಲವೇ ಅಣ್ಣಪ್ಪ ದೈವ ಎಂದು ಕರೆಯಿಸಿಕೊಂಡು "ಈ ತಳತ ಕಟ್‌ಕಾವಲ್ ಕುಲೊಂದು ಉಪ್ಪುಲೇ!" (ಈ ಕ್ಷೇತ್ರದ ಪಾಲಕರಾಗಿ ಭದ್ರಕಾವಲು ಮಾಡಿ ಇದ್ದುಕೊಳ್ಳಿರಿ!)

ದಾಪೂರಿ ಧರ್ಮರಸನು ಆಯಾಯ ಕಾಲದಲ್ಲಿ ದೈವದೇವರುಗಳಿಗೆ ಉತ್ಸವ, ಪರ್ವ. "ನಡೋರಿ" (ನಡಾವಳಿ), ಧಾನ ಧರ್ಮ. ಸಂತರ್ಪಣೆಗಳನ್ನು ಜರಗಿಸಿದನು. ಅವನು ಧರ್ಮಸ್ಥಳದ ಧರ್ಮ ಸಾಮ್ರಾಟನಾದ ಹಗ್ಗಡೆ ಎಂಬ ಖ್ಯಾತ ಹೆಸರನ್ನು ಗಳಿಸಿದನು. ಅವನು ತಾಮ್ರ ಶಾಸನದಲ್ಲಿ ಬರೆದು ಹಾಕಿದನು:

"ನನ್ನ ಧರ್ಮದ ಬೀಡು ಧರ್ಮಸ್ಥಳ. ದಾನಧರ್ಮಗಳ ನಲೆಯೇ ಧರ್ಮಸ್ಥಳ. ಈ ತಳ ಶ್ರೀ ಧರ್ಮಸ್ಥಳ ಕ್ಷೇತ್ರವೆಂದು ಕರೆಯಲ್ಪಡಬೇಕು, "ಧರ್ಮತಳತ ನಂದಲ ತೆಕ್ಕ್‌ನಗ ಕದ್ರದ ನಂದಲ ಪೊತ್ತೊಡು." (ವರ್ಷಂಪ್ರತಿ ಕಾರ್ತಿಕ ಬಹುಳ ದಶಮಿಯಿಂದ ಅಮಾವಾಸ್ಯೆಯ ವರೆಗೆ ೫ ದಿವಸಗಳ ಧರ್ಮಸ್ಥಳದ ಲಕ್ಷದೀಪೋತ್ಸವವು ದಾನ—ಪಡಿ—ಭೋಜನ, ವಿವಿಧ ದೇವತೆಗಳ ಪೂಜಾರಾಧನೆ ಮತ್ತು ಧರ್ಮ ಕಾರ್ಯಗಳೊಂದೊಡಗೂಡಿ ಜರಗಿ, ಮಂಜುನಾಥ ಸ್ವಾಮಿಯ ಸವಾರಿ ಕಂಚಿಮಾರು ಕಟ್ಟೆಯಿಂದ ಹಿಂತಿರುಗಿದ ಬಳಿಕ ತಾನೇ ಕದ್ರಿ ಮಂಜುನಾಥ ದೇವರ ಒಂದು ದಿನದ ಲಕ್ಷದೀಪದ ಬಲಿ ಉತ್ಸವ ಪ್ರಾರಂಭವಾಗತಕ್ಕದು ಎಂಬ ಅರ್ಥ) ಅಣ್ಣಪ್ಪ ದೈವಕ್ಕೆ ಹನ್ನೆರಡು ವರ್ಷಕ್ಕೊಮ್ಮೆ ನಡಾವಳಿ ನಡೆಯತಕ್ಕದು."

[ಈ ಪ್ರಕಾರ ಈಗಲೂ ನಡೆದುಕೊಂಡು ಬರುತ್ತದೆ.

• ಧರ್ಮಸ್ಥಳದ ಲಕ್ಷದೀಪೋತ್ಸವದಲ್ಲಿ ಒಂದು ಲಕ್ಷ ದೀಪಗಳನ್ನು ಬೆಳಗಿಸಿದರೆ ಕದ್ರಿಯಲ್ಲಿ ಅಂದು ಲಕ್ಷಕ್ಕೆ ಒಂದು ಕಡಿಮೆ ದೀಪಗಳನ್ನು ಬೆಳಗಿಸಲಾಗುವುದು.

ಜನರು ಧರ್ಮಸ್ಥಳದ ಕಡೇ ದಿನದ ದೀಪೋತ್ಸವ ನೋಡಿ ರಾತ್ರಿಗೇ ಹಿಂತಿರುಗಿ ಕದ್ರಿಗೆ ಬಂದು, ಕದ್ರಿಯ ದೀಪೋತ್ಸವ ನೋಡಿ ದೇವರಿಗೆ ಹಣ್ಣುಕಾಯಿ ಮಾಡಿ ಗಂಧಪ್ರಸಾದ ಸ್ವೀಕರಿಸಿ ಹೋಗುವುದುಂಟು.]

ಪೆಂಜಿಕೆಂಟಿನ ನೀಲಿ "ನಟರಾಜ"

ಮಧ್ಯ ಏಶಿಯಕ್ಕೆ ಭೇಟಿ ಕೊಡುವ ಸಂದರ್ಶಕರು ಪ್ರಾಯಶಃ ಅದರ ವಿಶಾಲ ಹರಹಿನಲ್ಲಿ ಚದರಿಬಿದ್ದಿರುವ ಮಣೆಗಳಂತೆ ತೋರುವ ಗುಡ್ಡ ದಿಣ್ಣೆಗಳನ್ನು ಗಮನಿಸಿರಲು ಸಾಕು. ಇವುಗಳಲ್ಲಿ ಕೆಲವು ಚಿಕ್ಕವು, ಇನ್ನು ಕೆಲವು ಸಾಕಷ್ಟು ದೊಡ್ಡವು. ಆದರೆ ಇವೆಲ್ಲವೂ ಮಾನವ ನಿರ್ಮಿತವೆ. ಈ ದಿಬ್ಬದ ರಾಶಿಗಳ ಕೆಳಗೆ ಮೊಗಸಾಲೆಗಳೂ ಪ್ರಾಸಾದಗಳೂ, ಗೋಪುರಗಳೂ—ಒಟ್ಟಾರೆ ಪುರಾತನ ನಿವಾಸಿಗಳ ವಾಸದ ಅವಶೇಷಗಳೂ ಅಡಗಿಕೊಂಡಿವೆ.

ಸ್ಥಳೀಯ ಜನರು "ತೇಪಾ" ಎಂದು ಕರೆಯುವ ಈ ಸಣ್ಣ ಸಣ್ಣ ಗುಡ್ಡಗಳು ಭಿನ್ನ ಭಿನ್ನ ಕಾಲಕ್ಕೆ ಸೇರಿದಂಥವಾಗಿವೆ. ಕೆಲವು ಮಹಾ ಅಲೆಕ್ಸಾಂಡರನ ಕಾಲಕ್ಕೆ ಸೇರಿದ್ದರೆ ಇನ್ನು ಕೆಲವು ಪ್ರಥಮ ಸಹಸ್ರಮಾನದ ಆರಂಭದ ಕಾಲದೊಂದಿಗೆ ಇನ ಶತಮಾನದಲ್ಲಿ ಕಾಣಿಸಿಕೊಂಡಂಥವಾಗಿವೆ. ಇನ್ನು ಕೆಲವುಗಳ ಅಡಿಯಲ್ಲಿ ೧೦–೧೧ನೆ ಶತಮಾನದ ಭವ್ಯವಾದ ಅವಶೇಷಗಳು ಹೂಳಿಹೋಗಿದ್ದು ಇದು ಪ್ರಚಂಡ ಪ್ರಭುಗಳಾಗಿದ್ದ ಸಮಾನ್ನೈದರ ಮತ್ತು ಕಾರಾಖಾನೈದರ ಕಾಲಕ್ಕೆ ಸೇರಿದವಾಗಿವೆ. ಇನ್ನು ಕೆಲವಂತೂ ಕೇವಲ ನೂರು ವರ್ಷಗಳ ಹಿಂದೆ ನಿರ್ಮಿಸಿದಂತೆ ಮತ್ತು ಜೂಜಾದ ಗೋಡೆಗಳಿಂದ ತುಂಬಿದ ಹಲ್ಲುಗಳಂತೆ ಕಾಣಿಸುತ್ತವೆ. ಇವುಗಳ ಕೆಳಗೆ ಇನ್ನೂ ಬಹಳ ಹಳೆಯ ಕಾಲದ ಅವಶೇಷಗಳು ಇದ್ದಿರಬೇಕು. ಇಲ್ಲಿಯ ಒಂದೊಂದು ಪತ್ತೆಯಾದ ಅವಶೇಷವೂ ತುಂಬಾ ಕುತೂಹಲಕಾರಿ.

ಅಲೆಕ್ಸಾಂಡರನ ಕಾಲದ ಒಂದು ಸಹಸ್ರ ವರ್ಷದ ಬಳಿಕದ ಅವಧಿಗೆ ಸೇರಿರುವ ಮತ್ತು ಈಗ ಪತ್ತೆ ಮಾಡಲಾಗಿರುವ ಕೆಲವು ಅವಶೇಷಗಳ ಕುರಿತು ನಾನಿಲ್ಲಿ ಬರೆಯುತ್ತಿದ್ದೇನೆ.

ಇಂದಿನ ತಾಜಿಕಿಸ್ತಾನ್ ಪ್ರದೇಶವನ್ನು ವಶಪಡಿಸಿಕೊಂಡ ಬಳಿಕ ಮಹಾ ಅಲೆಕ್ಸಾಂಡರನು ವಾಯುವ್ಯ ಭಾರತದ ಮೇಲೆ ಧಾಳಿ ನಡೆಸಿದನು. ಇವರ ರಾಜಕೀಯ ಪರಿಣಾಮಗಳು ಅಷ್ಟೊಂದು ಮಹತ್ವದವಲ್ಲವಾದರೂ (ಅಲೆಕ್ಸಾಂಡರನ ಮರಣಾನಂತರ ಅವನ ಸಾಮ್ರಾಜ್ಯವೂ ಛಿದ್ರಛಿದ್ರವಾಯಿತೆಂದು ನಮಗೆ ತಿಳಿಯುತ್ತದೆ), ಈ ದಾಳಿಯ ಸಾಂಸ್ಕೃತಿಕ ಪರಿಣಾಮದ ಬಗ್ಗೆ ಮಾತ್ರ ಇದೇ ಮಾತನ್ನು ಹೇಳಲಿಕ್ಕಾಗುವುದಿಲ್ಲ. ಮಧ್ಯ ಏಶಿಯ ಹಾಗೂ ಭಾರತದ ಕಲೆ ಹಾಗೂ ಆಧ್ಯಾತ್ಮಿಕ ಜೀವನದ ಹೊಕ್ಕು ಬಳಕೆ ಆರಂಭವಾದುದು ಈ ಕಾಲದಿಂದಲೆ. ಈ ದೇಶಗಳ ಮೇಲೆ ಬಿದ್ದ ಜೀವನದ ಬದಲಾವಣೆಗಳು ಒಂದೇ ನಮೂನೆಯವಾಗಿದ್ದುದರಿಂದ ಹೊಕ್ಕು ಬಳಕೆ ಇನ್ನಷ್ಟು ತೀವ್ರಗೊಂಡಿತು. ಹೀಗೆ ಮೊದಲ ಶತಮಾನದ ಆರಂಭದೊಂದಿಗೆ ಬೃಹತ್ ಕುಶಾನ್ ರಾಜ್ಯವು ಕಾಣಿಸಿಕೊಂಡಿತು.

ಈ ಕಾಲದಲ್ಲೇ ಮಧ್ಯ ಏಶಿಯಕ್ಕೆ ಬೌದ್ಧಧರ್ಮ ಮತ್ತು ಬುದ್ಧನ ಉಪದೇಶಗಳ ಪರಿಚಯವಾಗತೊಡಗಿತು. ಬೌದ್ಧ ಧರ್ಮವು ಅಲ್ಲಲ್ಲ ಕೇವಲ ಧರ್ಮವಾಗಿ ಮಾತ್ರವೆ ಹರಡಿಕೊಳ್ಳಲಿಲ್ಲ, ಕಲೆ ಸಂಸ್ಕೃತಿಗಳ ರೂಪದಲ್ಲೂ ಹರಡಿಕೊಳ್ಳತೊಡಗಿತು. ಇಂದಿನ ತುರ್ಕ್‌ಮೇನಿಯ, ಕಿರ್ಘೀಜಿಯ ಮತ್ತು ಉಜ್ಬೆಕಿಸ್ತಾನದ ಪ್ರದೇಶಗಳಲ್ಲಿ ಅದು ತುಂಬಾ ವ್ಯಾಪಕವಾಗಿ ಹರಡಿಕೊಂಡಿತು. ಕೇವಲ ತಾಜಿಕಿಸ್ತಾನದ ಬಗ್ಗೆ ಮಾತ್ರವೆ ಈ ವಿಷಯದಲ್ಲಿ ಒಂದಿಷ್ಟು ಅನುಮಾನವು ಉಂಟಾಯಿತು. ಆದರೆ, ೭ನೆ ಶತಮಾನದಲ್ಲಿ ಈ ಪ್ರದೇಶಗಳಿಗೆ ಭೇಟಿ ನೀಡಿದ ಹ್ಸೀಯಾನ್-ಚೀಯಾನ್ ಎಂಬ ಚೀಣೀ ಪ್ರವಾಸಿಯು ಮಾತ್ರ ತಾನು ಇಲ್ಲೆಲ್ಲ ನೂರಾರು ಬೌದ್ಧ ವಿಹಾರಗಳನ್ನೂ, ದಿವ್ಯವಾದ ದೇಗುಲಗಳನ್ನೂ ಕಂಡಿರುವುದಾಗಿ ಬರೆದಿಟ್ಟಿದ್ದಾನೆ. ಆದರೆ, ಇದಕ್ಕೆ ಪುರಾತತ್ವದ ಯಾವ ಸಾಕ್ಷ್ಯಗಳೂ ಸಿಕ್ಕದಿರುವುದರಿಂದ, ಚೀಣೀ ಪ್ರವಾಸಿಯ ಹೇಳಿಕೆಯನ್ನು ಅನುಮಾನದಿಂದ ಕಾಣಲಾಗುತ್ತಿದೆ.

ಇತ್ತೀಚಿಗೆ ವಖ್ಷ್ ಕಣಿವೆ ಪ್ರದೇಶದಲ್ಲಿರುವ ಅಜಿನ್-ತೇಪಾ ಎಂಬ ಗುಡ್ಡದಲ್ಲಿ ಭೂ-ಅಗೆತಗಳನ್ನು ನಡೆಸಲಾಗಿದೆ. ಇದು ಕೇವಲ ಬೌದ್ಧ ಸನ್ಯಾಸಿ ಮಠ ಮಾತ್ರವೆ ಆಗಿಲ್ಲ, ಜಗತ್ತಿನಲ್ಲಿ ಇಂಥ ಸನ್ಯಾಸಿ ಮಠಗಳಲ್ಲೇ ಅತ್ಯಂತ ದೊಡ್ಡದಾಗಿದೆಯೆಂದೂ ಕಂಡುಬಂದಿತು. ಈ ಸನ್ಯಾಸಿ ಮಠವು ೧೦೦ ಮೀಟರು ಉದ್ದ ಮತ್ತು ೫೦ ಮೀಟರು ಅಗಲವಾಗಿದೆ. ಇದರಲ್ಲಿ ಭಿನ್ನ ಭಿನ್ನ ಗಾತ್ರದ ಕೊಠಡಿಗಳು ಇವೆ—ಸನ್ಯಾಸಿಗಳು ವಾಸಿಸುತ್ತಿದ್ದ ಸಣ್ಣ ಸಣ್ಣ ಕೋಣೆಗಳಿಂದ ಹಿಡಿದು ವಿಶಾಲವಾದ ಪ್ರಾಂಗಣಗಳವರೆಗೆ. ಈ ಎಲ್ಲಾ ಕೋಣೆ ಕೊಠಡಿಗಳನ್ನು ಒಂದು ಪರ್ಣಾಲಂಕಾರದ ದಾರಿಯು ಜೋಡಿಸುತ್ತದೆ ಮತ್ತು ಅಲ್ಲಲ್ಲಿ ಬುದ್ಧನ ಸುಂದರ ಪ್ರತಿಮೆಗಳು ಕಂಡುಬರುತ್ತವೆ. ಒಂದರಲ್ಲಂತೂ ನಿರ್ವಾಣ ಭಂಗಿಯಲ್ಲಿರುವ ಬುದ್ಧನ ಪ್ರತಿಮೆ ಇದ್ದು, ಅದು ಬಹಳ ಸುಂದರವಾಗಿದೆ. ಇದು ಸುಮಾರು ೧೨ ಮೀಟರುಗಳಷ್ಟು ಎತ್ತರವಾಗಿದ್ದು ಮಧ್ಯ ಏಶಿಯದಲ್ಲಿ ಮಾತ್ರವೆ ಅಲ್ಲ, ಇಡೀ ಸೋವಿಯೆತ್ ಒಕ್ಕೂಟದಲ್ಲೇ ಅತ್ಯಂತ ದೊಡ್ಡದೆನಿಸಿದೆ. ಸದ್ಯಕ್ಕೆ ಅದರ ಜೀರ್ಣೋದ್ಧಾರ ನಡೆದಿದ್ದು, ಬಹುಬೇಗನೆ ಅದು ತಾಜಿಕ್ ವಸ್ತುಸಂಗ್ರಹಾಲಯವೊಂದರಲ್ಲಿ ಪ್ರದರ್ಶಿಸಲ್ಪಡುತ್ತದೆ.

ಸಾವಿರಾರು ವರ್ಷಗಳ ಹಿಂದೆ ಭಾರತೀಯ ಧರ್ಮ ಮತ್ತು ಕಲೆ ಮಧ್ಯಏಶ್ಯಕ್ಕೂ ಹರಡಿದ್ದುವು.

ಆದರೆ, ಈ ಹಿಂದಿನ ಕಾಲದಲ್ಲಿ ಮಧ್ಯ ಏಶಿಯ ಮತ್ತು ಭಾರತದ ಸಂಸ್ಕೃತಿಗಳ ಹೊಕ್ಕು ಬಳಕೆ "ಭರತಮಾತೆಯ" ಸ್ಕೆ... ಮಾತ್ರವೆ ಸೀಮಿತಗೊಂಡಿರಲಿಲ್ಲ. ಇಂದಿನ ತಾಜಿಕಿಸ್ತಾನ ಪ್ರದೇಶದ ಮೇಲೆ ಇತ್ತೀಚಿಗೆ ಕಂಡುಹಿಡಿಯಲಾಗಿರುವ ಪೆಂಜಿಕೆಂಟ್ ಎಂಬ ಪಟ್ಟಣದಲ್ಲಿ ನಿವಾಸಿಗಳು ಬೇರೆ ದೇವರುಗಳನ್ನೂ ಪೂಜಿಸುತ್ತಿದ್ದರು. ಭಾರತದ ಸಂಸ್ಕೃತಿಗೆ ಸಂಬಂಧಪಟ್ಟಂಥ ಅನೇಕ ಕಲಾಕೃತಿಗಳು ಇಲ್ಲಿ ಕೂಡ ಕಂಡುಬರುತ್ತವೆ. ಉದಾಹರಣೆಗೆ ಗೋಡೆಗಳ ಮೇಲಿರುವ ಅನೇಕ ಪ್ರತಿಮೆಗಳನ್ನೇ ತೆಗೆದುಕೊಳ್ಳಬಹುದು. ದಂಡಯಾತ್ರೆಗೆ ಹೊರಟ ಅಶ್ವಾರೋಹಿಗಳ ಕೆಲವು ಚಿತ್ರಗಳನ್ನೂ ನಾವಿಲ್ಲಿ ಕಾಣಬಹುದು. ಆದರೆ ಇವೆಲ್ಲ ಇಲ್ಲಿ ಹೇಗೆ ಕಾಣಿಸಿಕೊಂಡವು? ಪುರಾತನ ಚಿತ್ರಕಾರನು ಜೀವನದಿಂದಲೇ ಇವುಗಳನ್ನು ಚಿತ್ರಿಸಿರಲಿಕ್ಕಿಲ್ಲ.

ಇಲ್ಲೊಂದು ಚಿತ್ರವಿದ್ದು ಭಕ್ತಾದಿಗಳು ದೇವರ ಪೂಜೆಯಲ್ಲಿ ತೊಡಗಿದ್ದಾರೆ. ಈ ಮೂರ್ತಿಯು ಅಷ್ಟೊಂದು ಸುಸ್ಥಿತಿಯಲ್ಲಿ ಉಳಿದಿಲ್ಲ. ಆದರೆ, ಅದರ ನೀಲಿಯ ಬಣ್ಣವನ್ನೂ ನಾಟ್ಯ ಭಂಗಿಯನ್ನೂ ಯಾರೂ ಸ್ಪಷ್ಟವಾಗಿ ಕಾಣಬಹುದಾಗಿದೆ. ಮೂರ್ತಿಯ ಎಡಗೈ ನಡುವಿನ ಮೇಲೆ ಇಡಲ್ಪಟ್ಟಿದ್ದು ಬಲಗೈ ಎದೆಯ ಮುಂದೆ ಭಾವಪೂರ್ಣವಾಗಿ ಚಾಚಲ್ಪಟ್ಟಿದೆ. ಇನ್ನಿಷ್ಟು ಕೆಳಗಡೆ ಸಣ್ಣದಾದರೂ ಅತ್ಯಂತ ಸ್ಫುಟವಾಗಿರುವ ವಾನರನ ಪ್ರತಿಮೆಯೊಂದನ್ನೂ ಕಾಣಬಹುದು.

ಪೆಂಜಿಕೆಂಟಿನಲ್ಲಿ ಸಂಶೋಧಿಸಲಾದ ಅದ್ಭುತಗಳು ಇನ್ನೊಂದಿಷ್ಟು ಇಲ್ಲವೆ. ಇವೆಲ್ಲವೂ ಮರದಲ್ಲಿ ಕೆತ್ತಿದ ನರ್ತಿಸುತ್ತಿರುವ ಕನ್ಯೆಯ ಮೂರ್ತಿಗಳಾಗಿವೆ. ಮಧ್ಯ ಏಶಿಯದಲ್ಲಿ ಈವರೆಗೂ ತಿಳಿದಿರುವ ಮರದ ಮೂರ್ತಿಗಳು ಎಂದರೆ ಇವೇ ಆಗಿವೆ. ಈ ಬೊಂಬೆಗಳ ವೇಷಭೂಷಣ, ಭಾವ ಭಂಗಿ, ಪ್ರಮಾಣಬದ್ಧ ಅಂಗಸೌಷ್ಠವ ಮೊದಲಾದವೆಲ್ಲವೂ ಹಿಮಾಲಯದಾಚೆ ವಾಸಿಸುವ ಜನರ—ಭಾರತೀಯರ ಕಲೆಯನ್ನೇ ನೆನಪಿಸುತ್ತವೆ. ಕಲಾ ಪ್ರತಿಮೆಗಳಲ್ಲಿಯ ಹೋಲಿಕೆಯೆಂದರೆ, ಪುರಾತನ ಜೀವನ ರೀತಿ, ಜಾನಪದ ರೂಢಿ ಸಂಪ್ರದಾಯವಲ್ಲಿಯ ಏಕ ನಮೂನೆಯೆ ಆಗಿದೆ, ಜಗತ್ತಿನಲ್ಲಿ ಅತ್ಯಂತ ಎತ್ತರವಾದ ಪರ್ವತವು ಎಂದೆಂದೂ ಅಡ್ಡಬಾರದ ಸಾಂಸ್ಕೃತಿಕ ಐಕ್ಯತೆಯ ನಮೂನೆಯಾಗಿದೆ.

ನಾವು ಋಷಿಕುಲದವರು

ಅನ್ಯದೇಶಗಳ ಪ್ರಖ್ಯಾತ ಪುರುಷರು, ತಮ್ಮ ಪೂರ್ವಿಕರು ಗುಡ್ಡಕಾಡುಗಳಲ್ಲಿ ಇದ್ದು ಪ್ರಯಾಣಿಕರನ್ನು ಸುಲಿಯುತಿದ್ದ ದರೋಡೆಮಾಡುವ ಪಾಳೆಯಗಾರ ವಂಶಕ್ಕೆ ತಾವು ಸೇರಿದವರೆಂದು ಹೇಳಿಕೊಳ್ಳಲು ಹೆಮ್ಮೆತಾಳುವರು. ಆದರೆ, ಹಿಂದೂಗಳು, ತಮ್ಮ ಪೂರ್ವಿಕರು ಗಿರಿಗುಹೆಗಳಲ್ಲಿ ವಾಸಿಸುತ್ತ ಗೆಡ್ಡೆಗೆಣಸುಗಳನ್ನು ತಿಂದು ಬ್ರಹ್ಮಚಿಂತನೆಯಲ್ಲಿ ಕಾಲಕಳೆಯುತಿದ್ದ ಋಷಿಕುಲಕ್ಕೆ ಸೇರಿದವರು ತಾವೆಂದು ಹೆಮ್ಮೆತಾಳುವರು.

ಸ್ವಾಮಿ ವಿವೇಕಾನಂದ.

...ಗಳು

...ಗೆ ।
... ।
ಕರೆವೆವು ।
...ನೆಯುವೆವು ॥ ೧ ॥
...ಸುದ ಮಕ್ಕಳಿಗೆ ।
...ಡಿಯಲು ಕಲಿಸಿದಿರಿ ॥
ಅಂಕೆಸಂಖ್ಯೆಯ ತಿಳಿಸಿದಿರಿ ।
...ದೈಬಂಧ್ವಿಯ ಕಲಿಸಿದಿರಿ ॥ ೨ ॥
...ಮಾದರಿಯು ।
...ಡೆಯಿಸಲು ॥
...ಕಾಣುವೆವು ।
...ಕೆ ನೀಡುವೆವು ॥ ೩ ॥

* * *

...ಉದಯಕಾಲ

...ಯೊತ್ತೀಳಿರೋ ।
...ಳಿರೋ ॥ ಪ ॥
...ಬೆಳಕು ಹರಿಯುವಾಗ ।
... ಬಲು । ಗೆಲವಿಂದಲೀ ।
...ಲು । ಭಕ್ತಿಯಿಂದೆಲ್ಲ ।
...ದೇವನನ್ನು ಸ್ಮರಿಸಿರೋ ॥ ೧ ॥
...ಯನು ತೊಳೆಯಿರೋ ।
...ಯವೆ ಓದಿರೋ ॥
...ಜ್ಞಾನವನು ।
...ನಾಡ ಸೇವೆಯನು ॥ ೨ ॥

* * *

...ಮೂಡುವ ಸೂರ್ಯ

...ಶಿಂಡಣ್ಣ ।
... ।
...ಗಿ ಬೆಳಗುವನು।
...ಗುವನು ॥ ೧ ॥

* *

೭.

ಬೆಳಗಿದ ಜಾವದ ಸಮಯದ...
ಗುಲಾಬಿ ಹೂ ತೋಟದಿ ...
ಎಲೆಗಳ ಮಧ್ಯದಿ ಶೋಭಿಸ...
ಕಿಲಕಿಲ ಗಿಡದಲಿ ನಗುತಿತ್ತು...

ಗಮಗಮ ಪರಿಮ...
ತಮ್ಮಾ ಸನಿಯಕೆ...
ಭ್ರಮರವೊಂದು ...
ಸುಮಧುರರೂಪ...

ಜನಮನವೊಲಿಸುವ ಹಿರಿಯ...
ಹೆಣ್ಣಿನ ಮುಡಿ ಸೇರುವ ಕ...
ಮುಸ್ಸಿನ ಹೂವದು ಅರಳು...
ಬೆನ್ನಿನ ಮುಳ್ಳನು ಮರೆಸುತ...

* *

೮.

ಜೀವನಾ ಜೀವನಾ ಬಂಧನ
ರಾಮನಾಮ ದುಃಖನಿವಾರಕ
ಭವ । ರೋಗವು ದೇಹದಿ ಆ...
ದೇವ । ದೇವನ ಬಿಡದೆ ನೀನ...

ಸಂಸಾರ ಕಾಡು
ನಿಸ್ಸಾರವೀಯೆಲ್ಲ
ಕಾಮಿತ ಫಲವೀ...
ಸರ್ವ । ಲೋಕ...

ಭಕ್ತಿಯ ಸತ್ಯದಾ ಜೀವನಾ ।
ಮುಕ್ತಿ । ಗೊಯ್ಯುವ ಸಾಧನ...
ಪ್ರಕೃತಿ । ದೇವಿಯ ಆರಾಧನ...
ಶಕ್ತಿಯ ಕಾಂಬುದು ಪರಮಾತ್ಮ...

ನಾಟಕಕಲೆ—ಉತ್ಪತ್ತಿ ಮತ್ತು ಉತ್ಕರ್ಷ

ಯಾವುದಾದರೂ ಗುಣ ಅಥವಾ ಕೌಶಲ್ಯದ ಕಾರಣ, ಒಂದು ವಸ್ತುವಿನಲ್ಲಿ ವಿಶೇಷ ಉಪಯೋಗಿತೆ ಮತ್ತು ಸುಂದರತೆಗಳು ಇರುವಾಗ, ಆ ವಸ್ತುವು ಕಲಾತ್ಮಕವೆಂದು ಹೇಳಬೇಕಾಗಿದೆ. ಕಲೆಯು ಭೇದಗಳೆರಡು-ಒಂದು ಉಪಯೋಗೀ ಕಲೆ; ಇನ್ನೊಂದು ಲಲಿತಕಲೆ. ಉಪಯೋಗೀ ಕಲೆಯಲ್ಲಿ ಕುಮ್ಮಾರ, ಅಕ್ಕಸಾಲಿಗ, ನೇಕಾರ ಆದಿಯವರ ವ್ಯವಹಾರವು ಸಮ್ಮಿಲಿತವಾಗುತ್ತದೆ. ಲಲಿತಕಲೆಯಲ್ಲಿ ಐದು ಭೇದಗಳಿವೆ-ವಾಸ್ತುಕಲೆ, ಮೂರ್ತಿ ಕಲೆ, ಚಿತ್ರಕಲೆ, ಸಂಗೀತ ಕಲೆ ಮತ್ತು ಕಾವ್ಯಕಲೆ. ಮೇಲೆ ಹೇಳಿದ ಉಪಯೋಗೀ ಕಲೆ ಮತ್ತು ಲಲಿತಕಲೆಗಳಲ್ಲಿ, ಲಲಿತ ಕಲೆಯು ಹಾಗೂ ಲಲಿತಕಲೆಗಳಲ್ಲಿ ಕಾವ್ಯ ಕಲೆಯು ಶ್ರೇಷ್ಠವಾದುದು. ಹಾಗೆಯೇ ಕಾವ್ಯ ಕಲೆಯಲ್ಲಿಸಹಾ 'ಕಾವ್ಯೇಷು ನಾಟಕಂ ರಮ್ಯಮ್' 'ನಾಟಕಾಂತಂ ಕವಿತ್ವಮ್' ಎಂಬುದರ ಆಧಾರದ ಮೇಲೆ,ನಾಟಕಕಲೆಯೇ ಸರ್ವಶ್ರೇಷ್ಠವಾಗಿರುತ್ತದೆ.

ಸಂಸಾರವು ಪರಿವರ್ತನಶೀಲವಾಗಿದೆ; ಇದು ಪರಿವರ್ತನಶೀಲವಾದ ಕಾರಣದೊಡನೆ ತದಾಧಾರಭೂತ ಕಾವ್ಯ ಅಥವಾ ಸಾಹಿತ್ಯದಲ್ಲಿ ಸಹಾ ಪರಿವರ್ತನವಾಗುವುದು ಸ್ವಾಭಾವಿಕ, ಮಾತ್ರವಲ್ಲ ಅನಿವಾರ್ಯವೂ ಇರುವುದು. ನಾವು ಆಧುನಿಕ ಸಮಾಜದ ವಿಕಸಿತ ರೂಪವನ್ನು ನೋಡಿ, ಪ್ರಾಚೀನ ಗೌರವ ಸ್ಮೃತಿಗಳನ್ನು ದಂತಕಥೆಗಳೆಂದು ತಿರಸ್ಕರಿಸಲು ಉದ್ಯುಕ್ತರಾಗುವಂತೆ, ನಮಗೆ ನಮ್ಮ ಪೌರಾಣಿಕ ನಾಟ್ಯಸಾಹಿತ್ಯದ ಮೇಲೆಯೂ ಅವಿಶ್ವಾಸವೇ ಇದೆ. ಆದರೂ ಈ ಕೆಳಗಿನ ವಾಕ್ಯಗಳಿಂದ, ಈ ವಿಷಯದ ವಿದ್ವಾಂಸರ ದೃಷ್ಟಿಪ್ರಧಾನವಾದ ವಿಚಾರಗಳನ್ನು ಸಂಗ್ರಹಿಸಿ ಬರೆದುದಾಗಿದೆ.

1. ಡಾಕ್ಟರ ರಿಜವೆಯವರು ನಾಟಕದ ಉತ್ಪತ್ತಿಯು ವೀರಪೂಜೆಯೊಡನೆ ಸಂಬಂಧಿತವಾಗಿದೆಯೆಂದು ಹೇಳುತ್ತಾರೆ. ಅವರ ಹೇಳಿಕೆಯು ಹೀಗಿದೆ: "ನಾಟಕ-ಪ್ರಣಯ ಪ್ರವೃತ್ತಿಯು ಬಹುಶಃ ಆ ಗತವೀರರ ಪ್ರತಿ ಆದರದ ಭಾವವನ್ನು ಪ್ರದರ್ಶಿಸುವುದಕ್ಕೇನೇ ಆಗಿದೆ." ನಮ್ಮ ಭಾರತೀಯ ನಾಟಕಗಳಲ್ಲಿ ಸಹಾ ಶ್ರೀರಾಮ ಅಥವಾ ಶ್ರೀಕೃಷ್ಣ ಆದಿ ವೀರಪುರುಷರೊಡನೆ ಸಂಬಂಧಪಟ್ಟಿರುವ ನಾಟಕಗಳು ಈ ತರಗತಿಯಲ್ಲಿಡಲ್ಪಡಬೇಕಾದವುಗಳು.

2. ಜರ್ಮನ್ ವಿದ್ವಾನ್ ಡಾಕ್ಟರ್ ಪಿಶೆಲ್‌ರು ನಾಟಕದ ಉತ್ಪತ್ತಿಯು ಪುತ್ತಲಿಕಾ ನೃತ್ಯದಿಂದ ಆದುದು ಎಂದು ಭಾವಿಸುತ್ತಾರೆ. ಹಾಗೆಯೇ ಈ ಪುತ್ತಲಿಕಾ ನೃತ್ಯವು ಮೊತ್ತಮೊದಲು ಭಾರತದಲ್ಲಿಯೇ ಪ್ರಾರಂಭವಾದುದು. ಇದರ ನಂತರ ವಿದೇಶಗಳಲ್ಲಿಯೂ ಇದರ ಪ್ರಚಾರವು ಪೂರ್ಣರೂಪದಿಂದ ಆಯಿತು. ಸೂತ್ರಧಾರ, ಸ್ಥಾಪಕ ಆದಿ ಶಬ್ದಗಳ ಅರ್ಥವು ಈ ಮತವನ್ನು ಒಳ್ಳೇ ರೀತಿಯಿಂದ ಪುಷ್ಟೀಕರಿಸುತ್ತವೆ. ಪುತ್ತಲಿಕಾ (ಬೊಂಬೆ) ನೃತ್ಯದಲ್ಲಿ ಅವುಗಳ ಸೂತ್ರವು ಒಬ್ಬ ಸಂಚಾಲಕನ ಕೈಯಲ್ಲಿ ಇರುವಂತೆ ಹಾಗೂ ಒಂದು ವ್ಯಕ್ತಿಯು ಪುತ್ತಲಿಕೆಗಳನ್ನು ಸ್ಥಾಪಿತವನ್ನಾಗಿ ಮಾಡುತ್ತಿರುವಂತೆ, ನಾಟಕದ ಸೂತ್ರಧಾರನು ಮತ್ತು ಸ್ಥಾಪಕನು ಸಹಾ ನಾಟಕೀಯ ಪಾತ್ರಗಳನ್ನು ಬೇಕಾದಂತೆ ಸಂಚಾಲಿಸುತ್ತಿರುತ್ತಾರೆ.

3. ಕೆಲವು ವಿದ್ವಾಂಸರು ನಾಟಕದ ಉತ್ಪತ್ತಿಯು ಛಾಯಾ ನಾಟಕಗಳಿಂದ ಪರಿಣಮಿಸಿದುದು ಎಂದು ಹೇಳುತ್ತಾರೆ. ಆಧುನಿಕ ಸಿನೇಮಾದಂತೆ, ಛಾಯಾನಾಟಕವು ಪೂರ್ವಕಾಲದಲ್ಲಿ ಪ್ರದರ್ಶಿತವಾಗಿರುತ್ತಿತ್ತು; ಹಾಗೂ ಈ ಮತವನ್ನು ಪುಷ್ಟೀಕರಿಸುವುದಕ್ಕೆ, ಅವರು ಪ್ರಾಚೀನ ಉಲ್ಲೇಖಗಳನ್ನು ಸಹಾ ಶೋಧಿಸಿರುತ್ತಾರೆ; ಆದರೆ, ಈ ಮತವು ಯೋಗ್ಯವೆಂದು ವಿದಿತವಾಗುವುದಿಲ್ಲ; ಯಾಕೆಂದರೆ, ನಮ್ಮ ನಾಟಕ ಸಾಹಿತ್ಯವು ಬಹು ಪ್ರಾಚೀನವಾಗಿದೆ. ಹಾಗೂ ಸಂಸ್ಕೃತದಲ್ಲಿ 'ದೂತಾಂಗದ' ನಾಮಕ ನಾಟಕವು ಛಾಯಾ ನಾಟಕದ ಸಿದ್ಧಾಂತದ ಮೇಲೆ ಆಧರಿಸಿಯದೆಯೆಂದು ಅವಶ್ಯ ಕಂಡುಬರುತ್ತದೆ; ಆದರೆ, ಈ ನಾಟಕದಲ್ಲಿ ಅಷ್ಟು ಪ್ರಾಚೀನತೆಯಿಲ್ಲ; ಆದರಿಂದಲೇ ನಾವು ಈ ನಾಟಕವನ್ನು ನಮ್ಮ ಭಾರತೀಯ ನಾಟಕಗಳ ಆಧಾರಶಿಲೆಯೆಂದು ಪರಿಗಣಿಸುವುದಿಲ್ಲ.

4. ಅನೇಕ ಭಾರತೀಯ ಹಾಗೂ ಪಶ್ಚಿಮೀ ವಿದ್ವಾಂಸರು ನಾಟಕವು ವೇದಮೂಲಕವೆಂದು ಪರಿಗಣಿಸುತ್ತಾರೆ. ಋಗ್ವೇದದಲ್ಲಿ ಹಲವು ಸಂವಾದ ಸೂಕ್ತಗಳು ಇವೆ; ಅವುಗಳಲ್ಲಿ ಪುರೂರವ ಮತ್ತು ಊರ್ವಶಿಗಳ ಸಂವಾದವು ವಿಶೇಷ ಪ್ರಸಿದ್ಧವೆಂದು ಪರಿಗಣಿತವಾಗಿದೆ. ಈ ಸಂವಾದ ಸೂಕ್ತಗಳ ಕಥೋಪಕಥನವು ಪೂರ್ಣವಾಗಿ ನಾಟಕದ ಆಧಾರಸ್ತಂಭವೆಂದು ಹೇಳಬಹುದು.

5. ಮಹಾಮುನಿ ಭರತನು ಭಾರತೀಯ ನಾಟ್ಯಸಾಹಿತ್ಯದ ಪ್ರಥಮ ಪ್ರವರ್ತಕನೆಂದು ಒಪ್ಪುತ್ತಾರೆ; ಅಂಥವರ ಮತವು ಹೀಗಿದೆ: "ಸಾಂಸಾರಿಕ ಮನುಷ್ಯರು ಆಪತ್ತಿಗಳಿಂದ ದಣಿದರೆಂದು ಕಂಡು, ಇಂದ್ರಾದಿ ದೇವತೆಗಳು ಬ್ರಹ್ಮನನ್ನು ವೇದದ ರಚನೆಗೋಸ್ಕರ ಪ್ರಾರ್ಥಿಸಿದರು; ಆ ವೇದದ ಅಲೌಕಿಕ ಆನಂದವನ್ನು ಸರ್ವಸಾಧಾರಣ ಜನರು ಸಮಾನ ರೂಪದಿಂದ ಹೊಂದಬೇಕು; ಯಾಕಂದರೆ, ಚತುರ್ವೇದಗಳ ಅಧಿಕಾರಿಯು ಶೂದ್ರಾದಿ ನಿಮ್ನ ಜಾತೀಯ ಪುರುಷನು ಎಂದು ಮನ್ನಿಸಲ್ಪಡುವುದಿಲ್ಲ". ಈ ಪ್ರಾರ್ಥನೆಯನ್ನು ಮನ್ನಿಸಿ, ಶ್ರೀ ಲೋಕಪಿತಾಮಹ ಬ್ರಹ್ಮನು ಚತುರ್ವರ್ಣಗಳಿಗೋಸ್ಕರ —ವಿಶೇಷವಾಗಿ ಶೂದ್ರರಿಗೋಸ್ಕರ ಪಂಚಮ ವೇದವನ್ನು ನಿರ್ಮಿಸಿದನು. ಇದರಲ್ಲಿ ಋಗ್ವೇದದಿಂದ ಪಾಠ್ಯವಸ್ತು, ಸಾಮವೇದದಿಂದ ಗಾನ, ಯಜುರ್ವೇದದಿಂದ ಅಭಿನಯ, ಅಥರ್ವವೇದದಿಂದ ರಸ—ಇವುಗಳನ್ನು ತಕ್ಕೊಂಡು, ನಾಟ್ಯಸಾಹಿತ್ಯದ ವೇದಮೂಲವನ್ನು ಪಂಚಮ ವೇದವಾಗಿ ಸೃಜಿಸಿದನು.

ಜಗ್ರಾಹ ಪಾಠ್ಯಂ ಋಗ್ವೇದಾತ್
ಸಾಮಭ್ಯೋ ಗೀತಮೇವ ಚ ॥
ಯಜುರ್ವೇದಾದಭಿನಯಾನ್
ರಸಾನಾಥರ್ವಣಾದಪಿ ॥

(ನಾಟ್ಯಶಾಸ್ತ್ರ ಅಧ್ಯಾಯ ೧ ಶ್ಲೋಕ ೧೭)

ಇದರಿಂದ ಮೇಲೆ ಹೇಳಿದ ವಿಷಯವು ಸಿದ್ಧವಾಗುತ್ತದೆ. ನಮ್ಮ ನಾಟ್ಯಶಾಸ್ತ್ರವು ವೇದಮೂಲಕವಾದುದರಿಂದ ಭರತಮುನಿಯು ನಾಟ್ಯಶಾಸ್ತ್ರವನ್ನು ಹೀಗೆ ಪ್ರಶಂಸಿದ್ದಾನೆ:—

ನ ತಜ್ಞಾನಂ ನ ತಚ್ಛಿಲ್ಪಂ
ನ ಸಾವಿದ್ಯಾ ನ ಸಾ ಕಲಾ ॥
ನ ಸ ಯೋಗೋ ನ ತತ್ಕರ್ಮ
ನಾಟ್ಯೇಽಸ್ಮಿನ್ ಯನ್ನ ದೃಶ್ಯತೇ ॥

ನಾಟ್ಯ ಸಾಹಿತ್ಯದಲ್ಲಿ ಪ್ರದರ್ಶಿತವಾಗದೆ ಯಾವ ವಸ್ತುವಾದರೂ ಸಂಸಾರದಲ್ಲಿ ಇರುವದಿಲ್ಲ. ನಮ್ಮ ಆದಿಕಾವ್ಯ 'ವಾಲ್ಮೀಕೀಯ ರಾಮಾಯಣ'ದಲ್ಲಿಯೂ ನಾಟ್ಯ ವಿಷಯಕ ಕೆಲವು ಶ್ಲೋಕಗಳಿವೆ:

ನಾರಾಜಕೇ ಜನಪದೇ ಪ್ರಹೃಷ್ಟ
ನಟನರ್ತಕಾಃ ॥

ರಾಜನಿಲ್ಲದ ಜನಪದದಲ್ಲಿ ನಟ ಮತ್ತು ನರ್ತಕರು ಪ್ರಸನ್ನರಲ್ಲ—ಇದರಿಂದ ಹೀಗೆ ಸಿದ್ಧವಾಗುವುದು: "ರಾಜರು ನಟರನ್ನು ತಮ್ಮ ಆಶ್ರಯದಲ್ಲಿಟ್ಟು ನಾಟಕವನ್ನು ಅಭಿನಯಿಸುವುದಕ್ಕೋಸ್ಕರ ಅವರನ್ನು ಪ್ರೋತ್ಸಾಹಿಸುತ್ತಿದ್ದರು". ಇದೇ ಪ್ರಕಾರ ಮಹಾಭಾರತದಲ್ಲಿಯೂ 'ನಟ' ಶಬ್ದದ ಉಲ್ಲೇಖವು ಅನೇಕ ಸ್ಥಳಗಳಲ್ಲಿ ಕಂಡುಬರುತ್ತದೆ. ಮಹಾಭಾರತದ ಅಂತರ್ಗತ ಹರಿವಂಶ ಪುರಾಣದಲ್ಲಿಯೂ ರಾಮಾಯಣದ ಕಥೆಯನ್ನು ತಕ್ಕೊಂಡು ನಾಟಕವನ್ನಾಡುವ ಸ್ಪಷ್ಟ ಉಲ್ಲೇಖವು ಕಂಡುಬರುತ್ತದೆ. ಹಾಗೆಯೇ ಅಗ್ನಿಪುರಾಣದ 336ರಿಂದ 346 ಪರ್ಯಂತ ಸರ್ಗಗಳಲ್ಲಿ ಶ್ರವ್ಯ ಮತ್ತು ದೃಶ್ಯ ಕಾವ್ಯಗಳ ವಿವೇಚನೆಯು ಸಹ ಮಾಡಲ್ಪಟ್ಟಿದೆ.

ಆದರೆ, ಮೇಲೆ ಹೇಳಿದ ಗ್ರಂಥಗಳ ರಚನಾಕಾಲವು ಸಹಾ ಸಂದಿಗ್ಧಪೂರ್ಣವಾದ ಕಾರಣ, ಇಂತಹ ಸಮಯದಲ್ಲಿಯೇ ನಾಟ್ಯಸಾಹಿತ್ಯವು ಒಳ್ಳೇ ರೀತಿಯಿಂದ ಪ್ರಾರಂಭವಾಯಿತೆಂದು ನಾವು ನಿರ್ಣಯಿಸಲಾರೆವು. ಆದರೆ, ಭಾರತೀಯ ನಾಟ್ಯ ಶಾಸ್ತ್ರವು ಪ್ರಾಚೀನತಮವಾಗಿದೆಯೆಂದು ಅವಶ್ಯ ಹೇಳಬಲ್ಲೆವು. ಇದಲ್ಲದೆ ನಾಟಕಕಲೆಯು ಜಗತ್ತಿಗೆ ಭಾರತದ ದಾನವಾಗಿದೆ—ಅನ್ಯ ಯಾವುದಾದರೂ ದೇಶದ ದಾನವಲ್ಲ.

ಕ್ರಿಸ್ತಶಕ ಮೂರು ಶತಮಾನಗಳ ಪೂರ್ವದ ನಾಟ್ಯಸಾಹಿತ್ಯವು ಅಜ್ಞಾತಕಾಲೀನವಾಗಿದೆ. ಇದರ ನಂತರ ಪಾಣಿನಿಯ ವ್ಯಾಕರಣ ಶಾಸ್ತ್ರದಲ್ಲಿ ಶಿಲಾಲಿನ್, ಕೃಶಾಶ್ವ ಮತ್ತು ನಾಟ್ಯಶಾಸ್ತ್ರದ ಆಚಾರ್ಯರುಗಳ ಉಲ್ಲೇಖವು ಕಂಡುಬರುತ್ತದೆ. ತದನಂತರ ಪತಂಜಲಿಯ ಮಹಾಭಾಷ್ಯದಲ್ಲಿಯೂ 'ಕಂಸವಧ', 'ಬಲಿಬಂಧನ'ಗಳಲ್ಲಿ ಉಲ್ಲೇಖವು ಕಾಣಸಿಗುತ್ತದೆ. ಸಂಸ್ಕೃತ ಸಾಹಿತ್ಯದ ಪ್ರಮುಖ ನಾಟಕಕಾರ 'ಕಾಲಿದಾಸ'ನ ಸಮಯವು ಸಹಾ ಕ್ರಿಸ್ತಶಕ ಒಂದು ಶತಮಾನಪೂರ್ವವೆಂದು ಪರಿಗಣಿತವಾಗಿದೆ. ಕಾಲಿದಾಸನ "ಶಕುಂತಲಾ", "ಮಾಲವಿಕಾಗ್ನಿಮಿತ್ರ", ಆದಿ ನಾಟಕಗಳು ಸಂಸ್ಕೃತ ಸಾಹಿತ್ಯದ ಅಮೂಲ್ಯ ನಿಧಿಯೆಂದು ಮನ್ನಣೆಹೊಂದಿವೆ. ಇದರ ನಂತರ 'ಭವಭೂತಿ', 'ವಿಶಾಖದತ್ತ', 'ಶೂದ್ರಕ' ಮತ್ತು 'ರಾಜಶೇಖರ' ಆದಿ ನಾಟಕಕಾರರು ಬಹು ಮನೋರಂಜಕ ಹಾಗೂ ವ್ಯವಸ್ಥಾಪೂರ್ಣ ನಾಟಕಗಳ ರಚನೆಯನ್ನು ಮಾಡಿದರು. ಮೇಲೆ ಹೇಳಿದ ನಾಟಕಕಾರರ ನಾಟಕಗಳು ಪೂರ್ಣ ವಿಕಸಿತವಾಗಿವೆ. ಈ ನಾಟಕಗಳ ಹಲವು ಶತಮಾನಗಳ ಪೂರ್ವದಲ್ಲಿಯೇ ನಾಟಕರಚನೆಯು ಸಫಲತೆಯಿಂದ ಆಗಿತ್ತು, ಎಂಬುದರಲ್ಲಿ ಏನೊಂದೂ ಸಂದೇಹವಿಲ್ಲ.

ಇದೇ ಪ್ರಕಾರ ಹತ್ತನೇ ಶತಮಾನದ ವರೆಗೆ ಸಂಸ್ಕೃತ ನಾಟಕಗಳು ಅತ್ಯಧಿಕವಾಗಿ ಮೆರೆದುವು; ಅನಂತರ 19ನೇ ಶತಮಾನದ ವರೆಗೆ ಬಹುದೀರ್ಘಕಾಲವು ಸಂಸ್ಕೃತ ಸಾಹಿತ್ಯದ ರಚನೆಯಿಂದ ವಂಚಿತವಾಗಿದೆ. ಹೀಗಿದ್ದರೂ 'ಹನುಮನ್ನಾಟಕ', ಪ್ರಬೋಧ ಚಂದ್ರೋದಯ', 'ರತ್ನಾವಲೀ' ಆದಿ ನಾಟಕಗಳು ಇದೇ ಅಂಧಕಾಲದಲ್ಲಿ ಜನ್ಮಹೊಂದಿದವು. ಆದರೂ ಅವುಗಳಲ್ಲಿ ನಾಟಕತ್ವದ ನಿಯಮಗಳನ್ನು ಕ್ರಮವಾಗಿ ಪಾಲಿಸದ ಕಾರಣ ಅವುಗಳು ಒಳ್ಳೇ ನಾಟ್ಯಸಾಹಿತ್ಯದ ಗುಂಪಿನಲ್ಲಿ ಇಡಲ್ಪಡಲಿಲ್ಲ. ಆದರೂ ಕೆಲವು ವರ್ಷಗಳಿಂದ ನಾಟಕಜಗತ್ತಿನಲ್ಲಿ ಪುನಃ ಚಳವಳಿಯು ಪ್ರಾರಂಭವಾಯಿತು. ಭಾರತೇಂದು ಪ್ರಸಾದ, ಶ್ರೀ. ಲಕ್ಷ್ಮೀನಾರಾಯಣ ಮಿಶ ಮತ್ತು ಸೇಠ' ಗೋವಿಂದ ದಾಸ ಆದಿ ಸ್ವನಾಮಧನ್ಯ ನಾಟಕಕಾರರು ಕೆಲವು ಮೌಲಿಕ ನಾಟಕಗಳನ್ನು ಬರೆದವರಾದರು; ಹಾಗೂ ಸಂಸ್ಕೃತ ಬಂಗಾಲಿಗಳಿಂದ ಅನುವಾದಿಸಿದರು. ಈಗ ಹಿಂದೀ ಸಾಹಿತ್ಯದ ಮೌಲಿಕ ನಾಟಕಗಳ ಪ್ರಾರಂಭಿಕ ಯುಗ ಅಥವಾ ಮಧ್ಯಯುಗವೆಂದು ಹೇಳಬಹುದು. ನಮ್ಮ ಹಿಂದೀ ನಾಟಕಗಳ ಸುಶಿಕ್ಷಿತ ಕರ್ಣಧಾರರೆಯು ಭವಿಷ್ಯತ್ಕಾಲೀನ ಹಿಂದೀ ಸಾಹಿತ್ಯವನ್ನು ಉತ್ತಮ—ಉತ್ತಮ ಮೌಲಿಕ ನಾಟಕಗಳಿಂದ ಸುಸಮೃದ್ಧ ಹಾಗೂ ಮಹತ್ವಪೂರ್ಣವನ್ನಾಗಿ ಮಾಡಲಿ ಎಂದು ಆಶಿಸುವಾ.

———

★ ಮಕ್ಕಳಿಗೆ ಕೆಲವು ಕವನಗಳು ★

೧. ಭಾರತಮಾತೆ

ಭಾರತ ಜನನಿ ವರವೀಯೆ ಸುಗುಣಿ ।
ಚರಣಕೆ ಮಣಿವೆವು ಪೊರೆಯೌ ಕರುಣಿ ॥ ಪ ॥

ಕರ್ಮಭೂಮಿನಿ ಧರ್ಮಸ್ವರೂಪಿಣಿ ।
ಮರ್ಮಜ್ಞಾನದ ಪೆರ್ಮೆಯ ಕರುಣಿಸು ॥ ೧ ॥

ಎಳೆಯರು ನಾವು ತಿಳಿಯುವ ವಿದ್ಯೆಯ ।
ಬಲವನು ನೀಡಿ ಸಲಹೌ ತಾಯಿಯೆ ॥ ೨ ॥

ತಾತ ಗಾಂಧಿಯ ನೀತಿಯ ನಡೆಯ ।
ಚೇತನವೀಯುತ ಮಾತೆ ಕರುಣಿಸು ॥ ೩ ॥

ಇಂದು ಸ್ವಾತಂತ್ರ್ಯದಾ ನಂದಾದೀಪವು ।
ಅಂದದಿ ಬೆಳಗಲು ಚಂದದಿ ಬಲಕೊಡು ॥ ೪ ॥

* * * * *

೨ ಸ್ವಾಗತ ಗೀತೆ

ಸ್ವಾಗತವು ಸ್ವಾಗತವು ಸ್ವಾಗತವು ನಿಮಗೆ ।
ರಾಗದಿಂ ಕರೆಯುವೆವು ಮಕ್ಕಳಾವ್ ನಿಮಗೆ ॥ ಪ ॥

ಪ್ರೇಮದಿಂದೆಲ್ಲರು ಒಂದುಗೂಡುವ ಶಾಲೆ ।
ಪಾವನವು ಅಭ್ಯಾಸಮಾಡುವ ಲೀಲೆ ॥
ನೋವು ಸುಖದುಃಖಗಳ ಮರೆಯುವ ಶಾಲೆ ।
ಕಾವ ದೇವನ ತಿಳಿವ ಸತ್ಯದ ಲೀಲೆ ॥ ೧ ॥

ಪ್ರಕೃತಿ ಸಿರಿಯೆನಿಸುವಾ ಮಲೆನಾಡಿನ ಶಾಲೆ ।
ಪ್ರಕೃತಿಯಾಶ್ರಯದಿಂದ ಮೆರೆಯುವಾ ಶಾಲೆ ॥
ಬಗೆಬಗೆಯ ಕಲೆಗಳನು ಕಲಿಸುವ ಶಾಲೆ ।
ಜಗಕೆ ಬೆಳಕಾಗಿ ಮೆರೆಯಲೀಕೆ ಈ ಶಾಲೆ ॥ ೨ ॥

* * * * *

೩. ಗುರುಗಳು

ಗುರುಗಳೆ ನಿಮಗೆ ನಮಿಪೆವು ಹೀಗೆ ।
ಕರಗಳ ಜೋಡಿಸಿ ಒಲವಿಲಿ ಬಾಗಿ ।
'ಸರ್ ಸರ್'ಯೆಂದು ಸರಾಗದಿ ಕರೆವೆವು ।
ಹರುಷದಿ ನಿಮ್ಮಯ ಸದ್ಗುಣ ನೆನೆಯುವೆವು ॥ ೧ ॥

ನಡೆನುಡಿಯನು ಅರಿಯದ ಮಕ್ಕಳಿಗೆ ।
ಹಾಡಿಸಿ ಹಾಡನು ನುಡಿಯಲು ಕಲಿಸಿದಿರಿ ॥
ಎಣಿಕೆಯ ಮಾಡಿಸಿ ಅಂಕಿಸಂಖ್ಯೆಯ ತಿಳಿಸಿದಿರಿ ।
ಹೆದರಿಸಿ ಗದರಿಸಿ ವಿದ್ಯೆಬುದ್ಧಿಯ ಕಲಿಸಿದಿರಿ ॥ ೨ ॥

ಇದುವೆ ನಿಮ್ಮಯ ಸದ್ಗುಣ ಮಾದರಿಯು ।
ಕಾದಿದೆ ಸುಗಮದ ಜೀವನ ನಡೆಯಿಸಲು ॥
ಆದರ ಗೌರವದಿಂದಲಿ ನಾವು ಕಾಣುವೆವು ।
ಪಾದಕ್ಕೆರಗುವೆವು ನಾವ್ ಕಾಣಿಕೆ ನೀಡುವೆವು ॥ ೩ ॥

* * * * *

೪. ಉದಯಕಾಲ

ಏಳಿರೋ ಏಳಿರೋ ಬೆಳಗಾಯ್ತೇಳಿರೋ ।
ಎಳೆಯರೇ ಗೆಳೆಯರೇ ಎದ್ದೇಳಿರೋ ॥ ಪ ॥

ಕೋಳಿ ಕೂಗುವಾಗ । ಬೆಳಕು ಹರಿಯುವಾಗ ।
ಬಾಲರೇ ಒಲವಿಂದಲಿ । ಬಲು । ಗೆಲವಿಂದಲೀ ।
ತಿಳಿ ಮನದಿಂದೆಲ್ಲ । ಬಲು । ಭಕ್ತಿಯಿಂದೆಲ್ಲ ।
ಬೆಳಗೆದ್ದು ನೀವೆಲ್ಲ । ದೇವನನ್ನು ಸ್ಮರಿಸಿರೋ ॥ ೧ ॥

ಹಲ್ಲು ಮೋರೇ ಮೈ । ಕೈಯನು ತೊಳೆಯಿರೋ ।
ಶಾಲೆಯ ಪಾಠಗಳ । ಮರೆಯದೆ ಓದಿರೋ ॥
ಕಲಿತು ವಿದ್ಯೆಯನು । ಗಳಿಸಿ ಜ್ಞಾನವನು ।
ಬಾಲ ಬಾಲಯರೆ ಮಾಡಿ । ನಾಡ ಸೇವೆಯನು ॥ ೨ ॥

* * * * *

೫ ಮೂಡುವ ಸೂರ್ಯ

ಮೂಡುವ ಸೂರ್ಯನ ನೋಡಣ್ಣ ।
ಪೊಡವಿಗೊಡೆಯನು ಅವನಣ್ಣ ।
ಮೋಡಗಳೆಡೆಯಲಿ ಜಗವ ಬೆಳಗುವನು।
ಪಡುವಣ ಕಡಲಲಿ ಮುಳುಗುವನು ॥ ೧ ॥

ಹಗಲಿರುಳುಗಳೆರಡನು ಮಾಡುವನು ।
ಜಗದಲ ಜೀವರಾಶಿಯ ಸೃಷ್ಟಿಪನು ।
ಗಗನದಿ ಬಲು ಪ್ರಭೆಯನು ಸೂಸುವನು ।
ಧಗಧಗವೆನ್ನುತ ಉರಿಯುವನು ॥ ೨ ॥

ಇಳೆಗೆ ಮಳೆಯನು ಸುರಿಸುವನು ।
ಬೆಳೆಗಾಗಿ ಕಾವನು ಬೀರುವನು ।
ಗಾಳಿಗೆ ಚಲನೆಯ ನೀಡುವನು ।
ಕಾಳಿಕೆಯನು ಮರೆಮಾಡುವನು ॥ ೩ ॥

ಉದಯದ ಮೊದಲೇಳಿರಿ ನೀವು ।
ಅದುವೇ ವಿದ್ಯೆಯಾ ಸಾಧನವು ॥
ಮುದದಲಿ ಮೂಡಿರಿ ಕಾಯಕವ ।
ಒದಗಲು ಜೀವನ ಸಂಪದವು ॥ ೪ ॥

* * * * *

೬. ಕರೆ

ಚಿಕ್ಕಪುಟ್ಟ ಮಕ್ಕಳೆ ಬೇಗ ಬೇಗ ಬನ್ನಿರಿ ।
ಚಿಕ್ಕ ಚೊಕ್ಕ ಬಟ್ಟೆಯ ಧರಿಸಿಕೊಂಡು ಬನ್ನಿರಿ ॥ ೧ ॥

ಜಗಕೆ ನಗೆಯ ಚೆಲ್ಲುತ ತೋಷದಿಂದ ಬನ್ನಿರಿ ।
ಭಾಗ್ಯವನು ಕೋರುತ ದೇವನನ್ನು ನೆನೆಯಿರಿ ॥ ೨ ॥

ಗಂಡು ಹೆಣ್ಣು ಮಕ್ಕಳೆಲ್ಲ ಸೇರಿಕೊಂಡು ಬನ್ನಿರಿ ।
ವಂದನೆಯನು ಮಾತೆಗಾಗಿ ಸಲ್ಲಿಸುತ್ತ ಬನ್ನಿರಿ ॥ ೩ ॥

ಬಾಲಬುದ್ಧಿಯನ್ನು ತೊರೆದು ಶಾಲೆಯಲ್ಲಿ ಸೇರಿರಿ ।
ಗೆಳೆಯರೊಡನೆ ಬೆರೆತು ಚೊಕ್ಕ ನಡೆಯ ಕಲಿಯಿರಿ ॥ ೪ ॥

ಪರರ ಗುಣಗಳನ್ನು ತಿಳಿದು ಗೌರವಿಸುತಲಿ ।
ಭರತಮಾತೆಯನು ಸತತ ಸೇವಿಸುತ್ತಲಿ ॥ ೫ ॥

* * * * *

೭. ಗುಲಾಬಿ ಹೂ

ಬೆಳಗಿದ ಜಾವದ ಸಮಯದಲಿ ।
ಗುಲಾಬಿ ಹೂ ತೋಟದಿ ಕಾಣಿಸಿತು ।
ಎಲೆಗಳ ಮಧ್ಯದಿ ಶೋಭಿಸುತಿತ್ತು ।
ಕಿಲಕಿಲ ಗಿಡದಲಿ ನಗುತಿತ್ತು ॥ ೧ ॥

ಗಮಗಮ ಪರಿಮಳ ಹರಡಿತ್ತು ।
ತಮ್ಮಾ ಸನಿಯಕೆ ಬಾ ಎನುತಿತ್ತು ।
ಭ್ರಮರವೊಂದು ಮುದ್ದಿಡುತಿತ್ತು ।
ಸುಮಧುರರೂಪದಿ ಮೆರೆಯುತಲಿತ್ತು ॥ ೨ ॥

ಜನಮನವೊಲಿಸುವ ಹಿರಿಯಾಸೆಯದು ।
ಹೆಣ್ಣಿನ ಮುಡಿ ಸೇರುವ ಕಾಂಕ್ಷೆಯದು ।
ಮುನ್ನಿನ ಹೂವದು ಅರಳುತಲಿತ್ತು ।
ಬೆನ್ನಿನ ಮುಳ್ಳನು ಮರೆಸುತಲಿತ್ತು ॥ ೩ ॥

* * * * *

೮. ಜೀವನ-ಫಲ

ಜೀವನಾ ಜೀವನಾ ಬಂಧನಾ ।
ರಾಮನಾಮ ದುಃಖನಿವಾರಣಾ ।
ಭವ । ರೋಗವು ದೇಹದಿ ಅನುದಿನ ।
ದೇವ । ದೇವನ ಬಿಡದೆ ನೀನೆನೆಮನ ॥ ೧ ॥

ಸಂಸ್ಕಾರ ಕಾಡುವುದಾತ್ಮನ ।
ನಿಸ್ಸಾರವೀಯೆಲ್ಲ ಜೀವನಾ ॥
ಕಾವಿಂತ ಫಲವೀವ ರಾಮನು ।
ಸರ್ವ । ಲೋಕನಾಯಕ್ಯನವನು ॥ ೨ ॥

ಭಕ್ತಿಯು ಸತ್ಯದಾ ಜೀವನಾ ।
ಮುಕ್ತಿ । ಗೊಯ್ಯುವ ಸಾಧನಾ ।
ಪ್ರಕೃತಿ । ದೇವಿಯ-ಆರಾಧನಾ ।
ಶಕ್ತಿಯ ಕಾಂಬುದು ಪರಮಾತ್ಮನ ॥ ೩ ॥

ಮೂತ್ರಜನಕಾಂಗದಲ್ಲಿ ಕಲ್ಲುಗಳು

(ಗ. ಗ್ಲೆಜೆರ್)

ಮೂತ್ರಜನಕಾಂಗದ ರೋಗಗಳಲ್ಲಿ ಜನ್ಮತಃ ಬಂದವುಗಳೂ, ತರುವಾಯ ಉದ್ಭವಿಸಿದವುಗಳೂ ಇರುತ್ತವೆ. ಗಂಟಲ ಹುಣ್ಣು, ಇನ್‌ಫ್ಲುಯೆಂಜಾ ಜ್ವರ, ದಂತ ಕ್ಷಯ ಮುಂತಾದ ತೀವ್ರವಾದ, ಹಳೆಯ ರೋಗಗಳಿಂದಲೂ, ಸೀಸ ಅಥವಾ ಪಾದರಸದ ಸಂಯುಕ್ತಗಳಿಂದ ಉಂಟಾದ ತೀವ್ರವಾದ ಹಳೆಯ ಅಮಲಿನಿಂದಲೂ ಬಹುಮಟ್ಟಿಗೆ ಮೂತ್ರಜನಕಾಂಗದ ಅಸ್ವಸ್ಥತೆ ಉಂಟಾಗುತ್ತದೆ. ಮೂತ್ರಪಿಂಡದ ಗೊಂಚಲು ಉರಿಯೂತ, ಮೂತ್ರಪಿಂಡದ ಮತ್ತು ಅದರ ಕುದಂತದ ಉರಿಯೂತ, ಮೂತ್ರಪಿಂಡದಲ್ಲಿ ಕಲ್ಲು (ಅಶ್ಮರಿ), ಗರ್ಭಾವಸ್ಥೆಗೆ ಸಂಬಂಧಿಸಿದ ಟೊಮೋವಿಯ ಎಂಬೀ ರೋಗಗಳು ಅವುಗಳಲ್ಲಿ ಮುಖ್ಯವಾಗಿವೆ.

ಅಶ್ಮರಿ ರೋಗದಲ್ಲಿ ಮೂತ್ರನಾಳಗಳಲ್ಲಿ ಕಲ್ಲುಗಳು ರೂಪುಗೊಳ್ಳುತ್ತವೆ. ಈ ಮೂತ್ರಶಿಲೆಗಳು ಕಂದು, ಕಪ್ಪು, ಬೂದು, ಬಿಳುಪು ಬಣ್ಣಗಳನ್ನು ತಮ್ಮ ಲವಣ-ಸಂಯೋಜನೆಗೆ ತಕ್ಕಂತೆ ಪಡೆಯುತ್ತವೆ. ಈ ಶಿಲಾರೂಪವು ಸಾಮಾನ್ಯವಾಗಿರಬಹುದು. ಸ್ಥಳೀಯವಾಗಿರಬಹುದು. ನರಗಳ ನಿಯಂತ್ರಣದ ಅವ್ಯವಸ್ಥೆಗಳಿಂದಲೂ, ಹಾರ್ಮೋನ್ ಅವ್ಯವಸ್ಥೆಗಳಿಂದಲೂ, ಒಂದೇ ಬಗೆಯ ಆಹಾರಸೇವನೆಯಿಂದಲೂ ಉಂಟಾಗುವ ಅಪಥ್ಯ ಪರಿಣಾಮಗಳ ಅಸಂತುಲನಗಳು ಈ ಸಂದರ್ಭದಲ್ಲಿ ಮುಖ್ಯ ಪಾತ್ರ ವಹಿಸುತ್ತವೆ. ಮಾಂಸವನ್ನು ಅತಿಯಾಗಿ ಸೇವಿಸುವುದರಿಂದಲೂ ಸಹ ಮೂತ್ರನಾಳದಲ್ಲಿ ಕಲ್ಲು ರೂಪುಗೊಳ್ಳುತ್ತದೆ. ಪಾಲಕ್ಕನ್ನು, ಟೊಮ್ಯಾಟೊಯನ್ನು ಅತಿಯಾಗಿ ಬಳಸುವುದರಿಂದ ಫಾಸ್ಫೇಟ್ ಶಿಲೆಗಳು ರೂಪುಗೊಳ್ಳುತ್ತವೆ. ಮೂತ್ರಪಿಂಡದ ಕುಹರದ ಉರಿಯೂತದಲ್ಲಿ (ಪೈಲಿಟಿಸ್) ಶ್ಲೇಷ್ಮ ಅಥವಾ ಕೀವು ಕಲೆಗಳು ಕುಹರದಲ್ಲಿ (ಪೆಲ್ವಿಸ್) ಸಂಗ್ರಹವಾಗಿ, ಶಿಲಾರೂಪ ಪಡೆಯುತ್ತವೆ. ಈ ಕಲೆಗಳಲ್ಲಿ ಲವಣಗಳು ಸುಲಭವಾಗಿ ಬೆರೆತುಕೊಳ್ಳುತ್ತವೆ.

ಹೊಟ್ಟೆನೋವಿನ ರೂಪದಲ್ಲಿ ಉಂಟಾಗುವ ಟೊಂಕದ ನೋವು ತೀವ್ರವಾಗಿ ಇಲ್ಲದಿರಬಹುದಾದರೂ, ಅದು ಈ ರೋಗ ಲಕ್ಷಣವೇ.

ಮೂತ್ರಪಿಂಡದ ಅನೇಕ ರೋಗಗಳಿಗೆ ಸಾಂಕ್ರಾಮಿಕಗಳು ಮೂಲವಾಗಿರುವ ಕಾರಣ, ಈ ದುಷ್ಪರಿಣಾಮಗಳನ್ನು ತಪ್ಪಿಸಲು ಸಕ್ರಿಯ ಚಿಕಿತ್ಸೆ ನಡೆಯಲೇಬೇಕು. ಈ ಚಿಕಿತ್ಸೆಯು ಎರಡು ವಿಧಗಳಲ್ಲಿ ನಡೆಯಬಹುದು: ಸಾಂಕ್ರಾಮಿಕ ಕೇಂದ್ರದ ಮೇಲೆ ಪ್ರಭಾವಬೀರುವ ವಿಧಾನಗಳ ಮೂಲಕ ಮತ್ತು ಸಾಂಕ್ರಾಮಿಕವನ್ನು ಎದುರಿಸಲು ದೈಹಿಕ ಶಕ್ತಿಯನ್ನು ಹೆಚ್ಚಿಸುವುದರ ಮೂಲಕ. ಗಂಟಲುನೋವು, ಹುಳುಕು ಹಲ್ಲು, ಮೂಗಿನ ಬಳಿಯ ಟೊಳ್ಳು ಭಾಗಗಳ ಉರಿಯೂತ ಮುಂತಾದ ವ್ಯಾಧಿಗಳಿಗೆ ಅತ್ಯಂತ ಜಾಗರೂಕತೆಯಿಂದ ಚಿಕಿತ್ಸೆ ಮಾಡಬೇಕು. ಅದಕ್ಕೇನೂ ಕಷ್ಟಪಡಬೇಕಾಗಿಲ್ಲ.

ಗಂಟಲು ಗ್ರಂಥಿಯ ಉರಿಯೂತ, ಇನ್‌ಫ್ಲುಯೆಂಜಾ ಜ್ವರ ಮತ್ತು ಅವುಗಳಿಂದ ಉಂಟಾಗುವ ಮೂತ್ರಪಿಂಡಗಳ ಉರಿಯೂತಗಳು ಚಳಿಗಾಲದಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ದೇಹವು ದೃಢವಾಗಿರುವಾಗ, ಶೀತದಿಂದ ಉಂಟಾದ ರೋಗಗಳನ್ನು ಅದು ಬಲವಾಗಿ ಎದುರಿಸುತ್ತದೆ. ಅಂಗಸಾಧನೆಯಿಂದ ದೇಹದಾರ್ಢ್ಯವನ್ನು ಪಡೆಯುವ ಪ್ರಯತ್ನವು ಬಾಲ್ಯದಿಂದಲೇ ಪ್ರಾರಂಭವಾಗಬೇಕು. ಕ್ರಮಬದ್ಧವಾದ ಜೀವನ, ಸಾಕಾದಷ್ಟು ಪ್ರಮಾಣದಲ್ಲಿ ಅನ್ನಾಂಗಗಳನ್ನೊಳಗೊಂಡಯುಕ್ತಾಹಾರ; ಇವು ಮಾನವನ ಆರೋಗ್ಯಕ್ಕೆ, ಮುಖ್ಯತಃ ಮೂತ್ರರೋಗ ನಿರೋಧಕ್ಕೆ ಅತ್ಯಂತ ಮುಖ್ಯಾವಶ್ಯಕತೆಗಳು.

ಚಿಕಿತ್ಸೆ

ಇಂದು ವಿಜ್ಞಾನಿಗಳು ಈ ರೋಗವನ್ನು ಅನೇಕ ಆಧುನಿಕ ಔಷಧಗಳಿಂದ ಗುಣಪಡಿಸಬಲ್ಲರು. ಶಸ್ತ್ರಚಿಕಿತ್ಸೆಯಿಂದಲೂ ಉತ್ತಮ ಪರಿಣಾಮಗಳನ್ನು ಸಾಧಿಸಲಾಗಿದೆ. ಮೂತ್ರಪಿಂಡದ ಅನ್ಯತ್ರ ಸ್ಥಾಪನೆಯ ಶಸ್ತ್ರಚಿಕಿತ್ಸೆಯನ್ನು ಪ್ರೊ। ಬಿ. ಪೆಟ್ರೊವ್‌ಸ್ಕಿಯವರು ಮಾಡಿ ಯಶಸ್ವಿಯಾಗಿದ್ದಾರೆ. ಆದರೆ ಮೂತ್ರಪಿಂಡ ರೋಗ ಪೀಡಿತರಿಗೆ ಕ್ರಮಬದ್ಧ ಜೀವನ ಮತ್ತು ಯುಕ್ತ ಪಥ್ಯ ಅತ್ಯಗತ್ಯವೆಂಬುದು ಇಂದಿಗೂ ಮುಖ್ಯವಾದ ಗಮನಾರ್ಹ ವಿಷಯವೇ. ಈ ರೋಗದ ವಿಭಿನ್ನ ಘಟ್ಟಗಳಲ್ಲಿ ಇವುಗಳನ್ನು ಬದಲಾಯಿಸುತ್ತಿರಬೇಕಾಗುತ್ತದೆ. ಅವರು ನಿರಂತರ ವೈದ್ಯಕೀಯ ಸಮೀಕ್ಷೆಗೆ ಒಳಪಟ್ಟಿರಬೇಕು. ಎಲ್ಲ ಸಾಮಾನ್ಯ ಸಂದರ್ಭಗಳಲ್ಲಿಯೂ ಆವಶ್ಯಕ ನಿಯಮಗಳನ್ನು ಪಾಲಿಸಲೇಬೇಕು. ಅತಿಶ್ರಮದಿಂದಲೂ, ಶೈತ್ಯದಿಂದಲೂ ರೋಗವು ಮರಳಬಹುದು. ಮೂತ್ರಪಿಂಡ ರೋಗ ಪೀಡಿತರು ಸಾಂಕ್ರಾಮಿಕಗಳ ಬಗ್ಗೆ ತುಂಬ ಎಚ್ಚರಿಕೆ ವಹಿಸಬೇಕು. ಸಾಮಾನ್ಯವಾದ ಇನ್‌ಫ್ಲುಯೆಂಜಾ ಮತ್ತು ಗಂಟಲುನೋವಿನ ಸಂದರ್ಭಗಳಲ್ಲಿಯೂ ಸಹ ಅವರು ಚಿಕಿತ್ಸಕರೊಡನೆ ಪರಾಮರ್ಶೆ ನಡೆಸಿ, ಸಮಯಕ್ಕೆ ತಕ್ಕ ಚಿಕಿತ್ಸೆ ಪಡೆಯಬೇಕು.

ಮೂತ್ರಪಿಂಡ ರೋಗಿಗಳು ಮಾಂಸಾಹಾರವನ್ನು ವರ್ಜಿಸಬೇಕೆಂದೂ. ಉಪ್ಪು ಮತ್ತು ದ್ರವಪದಾರ್ಥಗಳನ್ನು ಸೀಮಿತ ಪ್ರಮಾಣದಲ್ಲಿ ಸೇವಿಸಬೇಕೆಂದೂ ಅನೇಕರಿಗೆ ಭಾವನೆಯಿದೆ. ಆದರೆ ಹಾಗೇನೂ ಇಲ್ಲ. ಪ್ರತಿ ರೋಗಿಗೂ ಪ್ರತ್ಯೇಕ ಲಕ್ಷಣಗಳಿರುತ್ತವೆ. ಚಿಕಿತ್ಸಕರು ಮಾತ್ರವೇ ಆಯಾ ವ್ಯಕ್ತಿಗೆ ಸಂಬಂಧಿಸಿದ ನಿಯಮಗಳನ್ನು ಗೊತ್ತುಪಡಿಸಬಲ್ಲರು.

ಮೂತ್ರರೋಗ ಪೀಡಿತರಿಗೆ ಅನ್ನಾಂಗಗಳು ಹೆಚ್ಚಾಗಿ ಬೇಕಾಗುತ್ತವೆಯಾದುದರಿಂದ ಅವರ ಆಹಾರದಲ್ಲಿ ಹಣ್ಣು-ತರಕಾರಿಗಳು ಸಾಕಾದಷ್ಟು ಪ್ರಮಾಣದಲ್ಲಿ ಇರಲೇಬೇಕು. ಸ್ವಲ್ಪ ಲವಣಾಂಶವಿರುವ ತರಕಾರಿಗಳು (ಗಜ್ಜರಿ, ಕೋಸು, ಆಲೂಗಡ್ಡೆ, ಕುಂಬಳಕಾಯಿ, ಇತ್ಯಾದಿ) ಒಳ್ಳೆಯವು.

ಚಿಕಿತ್ಸಾ ಶಾಸ್ತ್ರದ ಸಫಲತೆ ಎಷ್ಟಿದ್ದರೂ ಕೂಡ, ಮೂತ್ರಪಿಂಡದ ರೋಗಗಳು ಕಠಿಣ ಸಮಸ್ಯೆಯಾಗಿದ್ದು, ಅವುಗಳ ಚಿಕಿತ್ಸೆಗೆ ಬಹಳ ಸಮಯ ಬೇಕಾಗುತ್ತದೆ. ಚಿಕಿತ್ಸೆಯ ಸಫಲತೆಯು ಬಹುಮಟ್ಟಿಗೆ ರೋಗಿಯನ್ನೇ ಅವಲಂಬಿಸಿಕೊಂಡಿರುತ್ತದೆ. ಸಕಾಲದಲ್ಲಿ ಚಿಕಿತ್ಸಕರನ್ನು ಕಂಡು, ಅವರು ಗೊತ್ತುಪಡಿಸಿದ ಔಷಧ, ಚಿಕಿತ್ಸೆ ಯೋಜನೆ, ನಿಯಮಿತ ಪಥ್ಯ-ಪಾನ ಇವುಗಳನ್ನು ನಿಷ್ಠೆಯಾಗಿ ಶ್ರದ್ಧೆಯಿಂದ ಅನುಸರಿಸಬೇಕಾಗುತ್ತದೆ.

(ಜಿ. ಗ್ಲೆಜೆರ್, ಎಂ. ಎಸ್‌ಸಿ., ಅವರ "Kidney Stones" ಎಂಬ ಲೇಖನದ ಅನುವಾದ.)

ಸರಳ ಗದ್ಯಕ್ಕೆ ಇಳಿಸಿರುವ—

ಪುರಂದರದಾಸರ ವೈರಾಗ್ಯದರ್ಶನ

(ಡಾ। ವಿ. ಎ. ಶೆಣೈ, ಬಿ. ಎಸ್ ಸಿ., (ಒನರ್ಸ್), ಬಿ. ಎಸ್ ಸಿ., (ಟೆಕ್) ಪಿ. ಎಚ್ ಡಿ. (ಟೆಕ್) ಮುಂಬಯಿ)

ಪುರಂದರದಾಸರ ಕೀರ್ತನೆಗಳ ವಿವೇಚನಾಪರವಾದ ಅಭ್ಯಾಸದಿಂದ, ಅವುಗಳನ್ನು ಪರಿಶಿಸಿಕೊಂಡ ಅನೇಕ ತರದ ಭಾವಗಳನ್ನು ಸ್ಪಷ್ಟವಾಗಿ ಕಂಡುಕೊಳ್ಳಬಹುದು. ಅವರ ಹೆಚ್ಚಿನ ಕೃತಿಗಳು ಭಕ್ತಿರಸಪ್ರಧಾನವಾಗವುಗಳಾದರೂ ವೈರಾಗ್ಯಸೂಚಕ ಕೀರ್ತನೆಗಳ ಸಂಖ್ಯೆಯೇನೂ ಚಿಕ್ಕದಲ್ಲ. ಇಂಥವುಗಳನ್ನು ಒಟ್ಟುಸೇರಿಸಿ, ಬೇರೆ ಬೇರೆ ವರ್ಗಗಳಲ್ಲಿರಿಸಿ, ಪುರಂದರದಾಸರ ವೈರಾಗ್ಯದರ್ಶನವನ್ನು ಮಾಡಿಕೊಳ್ಳಬಹುದು. ಈ ಲೇಖನವು ಇಂಥ ಒಂದು ಯತ್ನವಾಗಿದೆ.

ಇದರಲ್ಲಿ ಅನುಕ್ರಮವಾಗಿ ನರಜನ್ಮದ ನಶ್ವರತೆಯನ್ನೂ, ದೇಹದ ಅಸ್ಥಿರತೆಯನ್ನೂ, ಸಂಸಾರ ವಿಷಯ ಸುಖಗಳ ಕ್ಷುದ್ರತೆಯನ್ನೂ, ಹಣದ ಅಸ್ಥಿರತೆಯನ್ನೂ, ಹೆಣ್ಣಿನ ಸ್ವರೂಪವನ್ನೂ, ವ್ಯರ್ಥವಾಗಿ ಕಾಲಹರಣ ಮಾಡಿದುದಕ್ಕೆ ಪಶ್ಚಾತ್ತಾಪಪಡುವುದನ್ನೂ, ತಪ್ಪು ಮಾಡಿದವನಿಗೆ ಸಿಗುವ ಶಿಕ್ಷೆಯ ವಿವರವನ್ನೂ, ಲೌಕಿಕ ಬಂಧುಗಳ ಪರಿಚಯವನ್ನೂ, ಪಾಪದ ಆಧಿಕ್ಯದಿಂದ ಮುಕ್ತನಾಗಲು ದೇವರೊಡನೆ ಆರ್ತನಾದದಿಂದ ಪ್ರಾರ್ಥಿಸುವ ಪರಿಯನ್ನೂ ಸಮಾಲೋಚಿಸಲಾಗಿದೆ. ಪುರಂದರದಾಸರ ಗೀತಗಳಿಂದ ಗದ್ಯಕ್ಕಿಳಿಸಿದ ಈ ಲೇಖನಮಾಲೆಯಲ್ಲಿ ಒಂದಂಶವನ್ನುದ್ಧರಿಸಿ ಇಲ್ಲಿ ಕೊಡುತ್ತಿರುವೆವು.

ಪೂರ್ವಜನ್ಮಗಳಲ್ಲಿ ಮಾಡಿದ ಸುಕೃತದ ಫಲದಿಂದ ನಿಮಗೆ ಮಾನವ ಜನ್ಮವು ಲಭಿಸಿತು. ಈ ಜನ್ಮವು ಶ್ರೇಷ್ಠವಾದುದು. ಆದುದರಿಂದ ಇದನ್ನು ಹಾನಿಮಾಡಿಕೊಳ್ಳಬೇಡಿರಿ. ಸತ್ಕಾರ್ಯಗಳಲ್ಲಿ ಬಳಸಲ್ಪಡಬೇಕಾದ ಕಣ್ಣು, ಕೈಕಾಲು, ಕಿವಿ ಮೊದಲಾದ ಇಂದ್ರಿಯಗಳು ತಮ್ಮ ತಮ್ಮ ವ್ಯಾಪಾರಗಳನ್ನು ಮಾಡಲು ಶಕ್ತರಿರುವಾಗ ಅವುಗಳನ್ನು ಸರಿಯಾಗಿ ಬಳಸದೆ ಹುಚ್ಚರೇಕಾಗುತ್ತೀರಿ? ಹೆಣ್ಣಿನ ಮೇಲಿನ ವ್ಯಾಮೋಹದಿಂದಲೂ, ಆಸ್ತಿಯ ಮೇಲಿನ ಅಭಿಲಾಷೆಯಿಂದಲೂ ಹರಿಯ ನಾಮಾಮೃತವನ್ನು ಉಣ್ಣದೆ ಏಕೆ ಉಪವಾಸ ಬೀಳುತ್ತೀರಿ? ಮರಣಕಾಲದಲ್ಲಿ ಯಮದೂತರು ಬಂದಾಗ, “ಸ್ವಲ್ಪ ತಾಳಿರಿ” ಎಂದರೆ ಅವರು ತಾಳುವರೇ? ಆ ದೂತರು ಬರುವ ಮೊದಲೇ ಧರ್ಮವನ್ನು ಗಳಿಸಬೇಕಲ್ಲದೆ, ದಾಂಪತ್ಯ ಸಂಸಾರದೊಳಗೆ ಸಿಲುಕದಿರಿ. ಸಾಯುವ ಕಾಲಕ್ಕೆ ಧನ, ಧಾನ್ಯ, ಪುತ್ರರು ನಿಮ್ಮನ್ನೇನೂ ಕಾಯಲಾರರು. ನಿಮ್ಮನ್ನು ಆಗ ರಕ್ಷಿಸುವವನು ಶ್ರೀಹರಿಯೊಬ್ಬನೇ. ಆ ಹರಿಯ ನಾಮವನ್ನೇಕೆ ನೀವು ನೆನೆಯದಿರುವಿರಿ? ಇನ್ನಾದರೂ, ವಿಶ್ವಾಸದಿಂದ ದೇವರನ್ನು ಭಜಿಸೋಣ. ಇಂದ್ರಿಯ ವ್ಯಾಪಾರಗಳು ನಿಮ್ಮ ವಶವಿರುವಾಗಲೇ ನಾವು ಮುಕ್ತರಾಗಿರದೆ, ಹರಿಧ್ಯಾನ ಮಾಡೋಣ. ಏಕೆಂದರೆ, ಯಮದೂತರು ಬಂದು ನಮ್ಮನ್ನು ಪರಲೋಕಕ್ಕೆ ಕರೆಯುವಾಗ, ಆಯುಷ್ಯ ಮುಗಿದು ಕಣ್ಣು ಬಿಡುವಾಗ ನಾಲಿಗೆ ಬಿದ್ದುಹೋಗಿ, ಸ್ಮೃತಿತಪ್ಪಿ ಧ್ಯಾನಮಾಡಲು ಸಾಧ್ಯವಾಗದು.

ಸಂಪತ್ತಿ—ಐಶ್ವರ್ಯದ ಕಾರಣ ಸಂಸಾರದಲ್ಲಿನ ಗುಣದೋಷಗಳನ್ನು ಪರೀಕ್ಷಿಸ್ಪಷ್ಟವಾಗಿದ್ದರೂ ಯಾರಾಗಲೂ ದೇವರನ್ನು ನೆನೆದರೆ ಅವನು ನಮಗೆ ಸನ್ಮಾರ್ಗ ತೋರಿ ಸದ್ಗತಿ, ಪರಮಪದವನ್ನು ಕೊಡುವನು. ಇಲ್ಲಿ ಯಾರಿಗೆ ಯಾರೂ ಇಲ್ಲ. ತನ್ನನ್ನು ತಾನೇ ನೋಡಿಕೊಳ್ಳಬೇಕಾಗುತ್ತದೆ.

ನಾವು ಬಲ್ಲಿದರೆಂದು ಬಡವರ ಬಾಯಿಯನ್ನು ಬಡಿಯಬಾರದು. ನಾವಿಲ್ಲಿ ಒಂದಿಷ್ಟು ತಪ್ಪಿದರೆ ಯಮದೂತರು ನರಕಕ್ಕೆ ಎಳೆದೊಯ್ಯುವರು. ದಾನಧರ್ಮಗಳನ್ನು, ಪರೋಪಕಾರವನ್ನೂ ಮಾಡಲು ಮರೆಯದಿರಿ. ಇತರರ ಸಂಕಷ್ಟಗಳನ್ನು ನೋಡಿ ಅವುಗಳನ್ನು ಹೋಗಲಾಡಿಸಲು ಹೆಣಗುವ ಸಿಪ್ಪುಣರನ್ನು ನೋಡಿ ಅವರಂತೆಯೆ ನಡೆಯಿರಿ. ಬರೇ ನಟನೆ ಮಾಡದಿರಿ. ಜೀವನದಲ್ಲಿ ಐಶ್ವರ್ಯ ಬರುವಾಗ ಬೆದರಿಗೆ ಮಾರುಹೋಗಬೇಡಿರಿ. ದಾಕ್ಷಿಣ್ಯದಿಂದ ಧರ್ಮ ಬರುವಾಗ ವೈರತ್ವ ಕಟ್ಟಿಕೊಳ್ಳದೆ ಇರಬೇಕು. ಅನೇಕರು ಬಯಸುವ ಹಣ್ಣು, ಹೂವು. ಮಣ್ಣುಗಳು ಬಯಸುವವರನ್ನು ಮರುಳು ಮಾಡುವುವು.

ನಾವು ನಂಬಿದ ವಸ್ತುವಿನಲ್ಲಿ ಯಾವಾಗಲೂ ಸಂಶಯ ತಾಳಬಾರದು. ಹಾಗೆ ಬೇರೆಣಿಸಿದರೆ ನಾವೇ ಕೆಡುವೆವು. ನಾವು ಚೆನ್ನಾಗಿ ಬಾಳಿದ್ದೇವೆಂಬ ಗರ್ವವನ್ನು ಇಟ್ಟುಕೊಳ್ಳಬಾರದು ಹಾಗೆ ಬಾಳುವ ಭಾಗ್ಯವು ನಾವು ಹಿಂದೆ ಮಾಡಿದ ಪುಣ್ಯದಿಂದಲೇ ಬಂದುದಾದುದರಿಂದ ದೇವರನ್ನು ಎಂದೂ ಮರೆಯದಿರಿ.

ಬೇರೆ ಬೇರೆ ಗುಣಗಳಲ್ಲಿ ಶ್ರೇಷ್ಠರಾದವರು ಅನೇಕರಿದ್ದಾರೆ. ಅವುಗಳಿಂದಾಗಿ ಗರ್ವಪಟ್ಟು ನಾಶವಾದವರೂ ಇದ್ದಾರೆ. ಗರ್ವಪಡದೆ, ವಿನಯದಿಂದಿದ್ದು ಮಹಾತ್ಮರಾದವರೂ ಇದ್ದಾರೆ. ಧನದಲ್ಲಿ ರಾವಣನೂ, ಮೂರ್ಖತನದಲ್ಲಿ ವಿಶ್ವಾಮಿತ್ರನೂ, ಪಿಟರಲ್ಲಿ ಮನ್ಮಥನೂ, ಬಾಲತನದಲ್ಲಿ ಶಕುನಿಯೂ, ದಾನದಲ್ಲಿ ಕರ್ಣನೂ, ನೇಮದಲ್ಲಿ ಭೀಷ್ಮನೂ ಪ್ರಸಿದ್ಧರಾಗಿ ಆಯಾಯ ಗುಣದೋಷಗಳಿಂದಲೇ ನಾಶವಾದರು. ಬಲದಲ್ಲಿ ಬಲರಾಮನೂ, ಕುಲದಲ್ಲಿ ವಸಿಷ್ಠನೂ ಗೌತಮನೂ, ನೆಲೆಯಲ್ಲಿ (ಸ್ಥಿರವಾಗಿರುವಿಕೆ) ಭೃಗುಮುನಿಯೂ, ಒಲುಮೆಯಲ್ಲಿ ವಾಲ್ಮೀಕಿಯೂ, ಹಠದಲ್ಲಿ ಪ್ರಹ್ಲಾದನೂ, ಸತ್ಯದಲ್ಲಿ ಧ್ರುವನೂ, ವೀರರಲ್ಲಿ ಅರ್ಜುನನೂ, ಗಾನದಲ್ಲಿ ನಾರದನೂ, ಜ್ಞಾನದಲ್ಲಿ ವ್ಯಾಸನೂ ಶುಕಮುನಿಯೂ ಪ್ರಸಿದ್ಧರಾಗಿ, ಗರ್ವಪಡದೆ ವಿನಯದಿಂದಲೇ ಇದ್ದು, ಕೀರ್ತಿವಂತರಾದರು. ಪಾಮರನಾದ ನರನು ಈ ಎಲ್ಲ ಗುಣಗಳಲ್ಲಿ ಶ್ರೇಷ್ಠನೇ ಅಲ್ಲ. ಆದುದರಿಂದ ದೀನ ರಕ್ಷಕನಾದ ದೇವರ ಧ್ಯಾನದಲ್ಲಿದ್ದರೆ ಭವಸಾಗರವನ್ನು ದಾಟಬಹುದು. ಇದನ್ನು ಬಿಟ್ಟು ಸುಮ್ಮನೆ ಗರ್ವದಿಂದೇಕೆ ಇರಬೇಕು? ಲೌಕಿಕ ವೈಭವವು ಅಶಾಶ್ವತವೂ, ಕೊನೆಗಾಲಕ್ಕೆ ಬಾರದಂಥದ್ದೂ ಆಗಿರುತ್ತ, ಹಿಗ್ಗುವುದರಲ್ಲೇನು ಅರ್ಥವಿದೆ?

ಯಮರಾಯನು ಹೆಬ್ಬುಲಿಯಂತೆ ಬೊಬ್ಬಿಡುತ್ತ ನಮಗಾಗಿ ಕಾಯುತ್ತಿದ್ದಾನೆ. ಒಂದನ್ನೊಂದು ಹಿಂಬಾಲಿಸುವ ಸಾಗರದ ತೆರೆಯಂತೆ ಹುಟ್ಟು—ಸಾವುಗಳಿರುವಾಗ, ಭೋಗಭಾಗ್ಯಗಳನ್ನು ಪಡೆಯಲು ಏತಕ್ಕಾಗಿ ಬಳಲಬೇಕು? ಸರ್ಪನ ಹೆಡೆಯ ನೆರಳಲ್ಲಿ ಆಶ್ರಯ ಪಡೆದ ಕಪ್ಪೆಯಂತೆ ಮೃತ್ಯುವಿನ ಆಶ್ರಯದಲ್ಲಿದ್ದು ಕೂಗಿ ಚೀರುವರೆ ಪ್ರಯೋಜನವೇನು?

ಒಬ್ಬನಿಗೆ ಮಾಳಿಗೆಯ ಮನೆಯೂ, ಸತಿಸುತರೂ, ಸಾಕಷ್ಟು ಹಣವೂ, ದವಸಧಾನ್ಯಗಳೂ, ಪಶುಗಳೂ, ವೇಳೆ ವೇಳೆಗೆ ಸರಿಯಾಗಿ ಊಟದ ವ್ಯವಸ್ಥೆಯೂ ಇದ್ದರೂ, ಅವನ ಜೀವನವೆಂಬುದು ಗಾಳಿಗೆ ಇಟ್ಟ ದೀಪದಂತೆ ಇದ್ದು, ಯಾವ ಕ್ಷಣಕ್ಕೆ ನಂದಿಹೋಗುತ್ತದೆಯೆಂದು ಹೇಳಲಾಗುವುದಿಲ್ಲ. ಅಸ್ಥಿರವಾದ ಈ ಸಂಸಾರದಲ್ಲಿನ ವಿಷಯಗಳಲ್ಲಿ ಅತಿಯಾದ ಮಮತೆಯನ್ನಿರಿಸದೆ, ವೈರಾಗ್ಯವನ್ನು ಬೇಡಿ ಶಾಂತಚಿತ್ತದಿಂದ ದೇವರನ್ನು ನೆನೆದರೆ ನಿಜವಾಗಿ ಮುಕ್ತಿಯು ಸಿಗುತ್ತದೆ. ಲೌಕಿಕ ವೈಭವವು ಅಸ್ಥಿರವಾದುದರಿಂದ ನಾವು ಜೀವನದಲ್ಲಿ ದುಷ್ಕಾರ್ಯಗಳನ್ನು ವರ್ಜಿಸಿ, ಸತ್ಕಾರ್ಯಗಳನ್ನು ಮಾಡಬೇಕು.

ಸಂಬಂಧಿಕರಲ್ಲಿ ಸಂಪತ್ತಿ—ಮಕ್ಕಳಲ್ಲಿ ಅತಿಯಾದ ಮಮತೆಯನ್ನಿರಿಸಬೇಕೇ? ನಮಗೆ ಜೀವವನ್ನು ಒದಗಿಸುವವರು ಇಲ್ಲಿ ಯಾರೂ ಇರುವುದಿಲ್ಲ. ಮರಣವನ್ನು ತಪ್ಪಿಸಲು ಯಾರಿಂದಲೂ ಆಗದು. ಇತರರನ್ನು ನಿಂದಿಸಬೇಡ. ಸಾಲ ತಪ್ಪದು. ಇಲ್ಲಿರುವಾಗ ಆಸೆಪಡದೆ, ಕೊಟ್ಟ ಭಾಷೆಗೆ ತಪ್ಪದೆ, ಪರಸ್ತ್ರೀಯರ ಸಂಗ ಬಯಸದೆ ಇರು. ಅನ್ನ, ನೀರು, ಅರಿವೆ, ಐಶ್ವರ್ಯ ಸಂಪತ್ತು—ಇದಾವುದೂ ಸ್ಥಿರವಲ್ಲ.

ಅಲ್ಲಲ್ಲಿ ಕೆರೆಗಳನ್ನು ಕಟ್ಟಿಸಿ, ತೋಟಗಳನ್ನು ನಿರ್ಮಿಸಿದರೆ (ಸಂಸಾರ) ಬಂಧನದಿಂದ ಮುಕ್ತನಾಗಬಹುದು. ಕರೆಯದೆ ಮನೆಗೆ ಬಂದ ಅತಿಥಿಗಳಿಗೆ ಅನ್ನವನ್ನು ನೀಡುವುದು, ಸದಾ ಸತ್ಪುರುಷರ ಸಂಗದಲ್ಲಿರುವುದು, ದೇವರ ನಾಮಸ್ಮರಣೆಯಲ್ಲಿದ್ದರೆ ಹುಟ್ಟು—ಸಾವುಗಳು ನಮ್ಮನ್ನು ಬಂಧಿಸಲಾರವು.

ಮಾಯೆಯು ಮಾನವನ ದೇಹವನ್ನು ಉಪಾಯದಿಂದ ನೋಯಿಸಿ, ಅವನನ್ನು ಬಾಯಿಮುಚ್ಚಿಸಿ ಕೊಲ್ಲುತ್ತದೆ. ಅವನು ಮಾತಾಪಿತರ ಶುಕ್ಲಶೋಣಿತಗಳಿಂದ ಹುಟ್ಟಿ, ರಕ್ತಕೀವುಗಳ ಸನಿಯಂದಲ್ಲಿದ್ದು, ಜರಾಯುವಿನಲ್ಲಿ (ಮಾಂಸದ ಚೀಲದಲ್ಲಿ) ಬೆಳೆಯುತ್ತಾನೆ. ಆ ಮೇಲೆ ಅವನು ರಕ್ತವನ್ನು ಸೂಸುತ್ತ, ತಾಯಿಯ ಹೊಟ್ಟೆಯಲ್ಲಿ ಒಂಭತ್ತು ತಿಂಗಳಿರುತ್ತಾನೆ. ಇಂಥ ಅವಸ್ಥೆಯನ್ನು ತಾಳಲಾರದೆ, ಇನ್ನು ಮುಂದೆ ಈ ಭೂಮಿಯಲ್ಲಿ ಎಂದೆಂದೂ ಜನ್ಮವು ಬೇಡವೆಂಬಂತಾಗುವುದು. ಎಲುಬಿನ ಗೂಡಿನಿಂದ ಮಾಡಲ್ಪಟ್ಟ, ನರಗಳ ಬಳ್ಳಿಯಿಂದ ಬಿಗಿಯಲ್ಪಟ್ಟ, ರಕ್ತ-ಮಾಂಸ-ಮಲ-ಮೇದಸ್ಸುಗಳಿಂದ ಕೂಡಿದ್ದು, ಮೇಲಿನ ಚರ್ಮದ ಹೊದಿಕೆಯ ಮತ್ತು ನಿತ್ಯವೂ ಬೇಯುವ ಈ ಹೊಲಸು ಗೂಡಿನಲ್ಲಿ (ದೇಹದಲ್ಲಿ) ಅವನು ಎಂದೂ ಜನಿಸಲು ಬಯಸನು. ಮುಂದೆ ಅವನನ್ನು ಹೆಂಡತಿ, ಮಕ್ಕಳು, ಬಂಧು ಬಳಗ, ಸಾಕಿ ಸಲಹೆಂದು ಹರಿದು ತಿನ್ನುವರು. ಆದರೆ, ಅವನ ಕಡೆಗಾಲದಲ್ಲಿ ಅವನ ಹಿಂದೆ ಯಾರೂ ಬರುವುದಿಲ್ಲ. ಇರುವೆಯಿಂದ ಹಿಡಿದು ಆನೆವರೆಗೆ ಅವನು ಅನೇಕ ಜನ್ಮಗಳಲ್ಲಿ ಪುನಃ ಪುನಃ ಹುಟ್ಟಿ, ಮುಂದೆ ಗಾಳಿಯಲ್ಲಿ ಬಿದ್ದ ತರಗೆಲೆಯಂತಾಗುತ್ತಾನೆ. ಆದುದರಿಂದ, ಅವನು ತನ್ನನ್ನು ಸಲಹಬೇಕೆಂದೂ ಪುನಃ ಪುನಃ ಹುಟ್ಟಲಾರೆನೆಂದೂ, ಅಸಂಖ್ಯ ವಿಧ ಜೀವಿಗಳನ್ನು ಹೊಟ್ಟೆಯೊಳಗಿಟ್ಟು ತನ್ನನ್ನು ಹೊರಗೆ ಬಿಡದೆ ಅವರಂತೆ ತನ್ನನ್ನೂ ರಕ್ಷಿಸಬೇಕೆಂದೂ ದೇವರೊಡನೆ ಪ್ರಾರ್ಥಿಸಿಕೊಳ್ಳಬೇಕು.

ಈ ದೇಹದ ಸ್ವಭಾವವು ವಿಚಿತ್ರವಾದುದು. ಇದಕ್ಕೆ ಒಂಭತ್ತು ಬಾಗಿಲು (ನವರಂಧ್ರ)ಗಳಿವೆ. ಒಂದು ದಿನ ಅವುಗಳನ್ನು ತೊಳೆಯದಿದ್ದರೆ, ವಿಕಾರವಾಗಿ ತೋರುವುದು. ಅದರ ಸಂಧಿ ಸಂಧಿಗಳಲ್ಲಿ ಘೋರ ಕ್ರಿಮಿಗಳ ರಾಶಿಗಳಿವೆ. ಎಲುಬು ನರ—ಶೋಣಿತಗಳ ಸಂಬಂಧದಿಂದ ಉಂಟಾದ ಶರೀರ. ಅದರ ಕಣ್ಣಿನಿಂದ ಪಿಚ್ಚು (ಕಸರು) ಸೋರುತ್ತದೆ. ಮೂಗು, ಕಣ್ಣುಗಳಿಂದ ಶ್ಲೇಷ್ಮವು ಹೊರಬರುತ್ತಿದೆ. ಉಣ್ಣದಿದ್ದರೆ, ಬಾಯಿಯಲ್ಲಿ ಹುಳು ಬರುತ್ತದೆ. ಒಮ್ಮೆ ಪ್ರಾಣಹೋಯಿತೆಂದರೆ, ಅದು (ಶರೀರ) ದುರ್ಗಂಧದಿಂದ ನಾರುತ್ತದೆ. ಈ ದೇಹದಲ್ಲಿರುವ ಮನಸ್ಸು ಒಳ್ಳೆಯ ವಿಷಯಗಳಲ್ಲಿ ಕಣ್ಣನ್ನು ಮುಚ್ಚಿಸಿ—ಅವುಗಳನ್ನು ನೋಡದಂತೆಯೂ, ಕೆಟ್ಟ ವಿಷಯಗಳನ್ನು ನೋಡುವಂತೆಯೂ ಕಣ್ಣು ತೆರೆಯಿಸಿ, ಬೇರೆಯವರ ತಪ್ಪುಗಳನ್ನು ಸಾರುತ್ತದೆ. ಅದು ಪರಹೆಣ್ಣಿಗಾಗಿ ಅಪೇಕ್ಷಿಸಿ, ಪುಣ್ಯವಂತರನ್ನು ನೋಡಿ ಮತ್ಸರ ಪಡುತ್ತದೆ. ಧರ್ಮದಲ್ಲಿ ಪರಿಹಾಸಿಸುತ್ತಿದ್ದು, ನೀತಿಯಲ್ಲಿ ಭ್ರಷ್ಟರಾಕ್ಷಸನಾಗಿ, ನಿರ್ಭೀತಿಯಿಂದ ಬ್ರಹ್ಮಹತ್ಯೆ ಮಾಡಿಯೂ ಸಾತ್ವಿಕನೆನಿಸುವುದು ಅದರ ಸ್ವಭಾವವಾಗಿದೆ. ವೈದಿಕ ವೃತ್ತಿಯಲ್ಲಿದ್ದು ಅನ್ನಕ್ಕಾಗಿ ದಾನದಕ್ಷಿಣೆಗಳನ್ನು ಸುತ್ತಿ, ಅನ್ಯರ ಹೆಂಡತಿಯೊಡನೆ ಸರಸವಾಡಿ, ಅವಳನ್ನು ಬಾಧಿಸುತ್ತ, ಅನ್ನವನ್ನುಣ್ಣುವಂತೆ ಆ ಮನಸ್ಸು ಮಾಡುತ್ತಿದೆ. ಪ್ರಥಮ ಪುತ್ರನಾಗಿ ಹುಟ್ಟಿ, ಅವನು ತರತರದ ವಿಧವೆಯರ ಕೂಟವನ್ನು ಕಟ್ಟಿಕೊಂಡು ಅನೇಕರ ಕಿನುಗಾಟ್ಟುವಂತೆ ಮಾಡಿ, ಹಣವೆಲ್ಲಿದೆಯೆಂದು ದೃಷ್ಟಿಯಿಡುವುದರಲ್ಲಿ ಒಯ್ಯುತ್ತದೆ.

ಮಾನವನ ದೇಹವನ್ನು ದೊಡ್ಡ ಪಟ್ಟಣಕ್ಕೆ ಹೋಲಿಸಬಹುದು. ಈ ಪಟ್ಟಣಕ್ಕೆ ಒಂಭತ್ತು ಮಹಾದ್ವಾರಗಳಿವೆ. ಇವುಗಳಲ್ಲಿ

(17ನೇ ಪುಟಕ್ಕೆ ಮುಂದುವರಿದಿದೆ)

ನಿಮ್ಮ ವ್ಯರ್ಥ ಜೀವನ

("ಭ್ರಮರ")

ಆಧುನಿಕ ಜೀವನದ ಬಹುಮುಖಗಳಿವೆ: ಹಲವೊಮ್ಮೆ ಹಲವರು ದಿನಂಪ್ರತಿ ಯಾವುದನ್ನೊ ಯಾವುದಕ್ಕೋ ಕಾಯುತ್ತ ವ್ಯರ್ಥ ಕಳೆದ ಸಮಯ ಎಷ್ಟೋ!

ವ್ಯರ್ಥಗೊಳಿಸಿದ ಅಥವಾ ಹಾಳುಗೊಳಿಸಿದ ಸಮಯ ಎಂಬ ವಿಷಯವು ತುಸು ವಿವಾದಾತ್ಮಕವಾದುದು. ಬಹುಶಃ ಇದು ವೈಯಕ್ತಿಕ ಅಭಿರುಚಿ ಮತ್ತು ಅಭಿಪ್ರಾಯಗಳ ಮೇಲೇ ಹೊಂದಿಕೊಂಡಿದೆ.

ಸಾಮಾನ್ಯ ಮನುಷ್ಯನ ಅಭಿಪ್ರಾಯದಂತೆ ಗಣಿತಶಾಸ್ತ್ರಜ್ಞನೊಬ್ಬನು ಗೂಢ, ಗಹನ ಗಣಿತಕ್ಕೆ—ಯಾರಿಗೂ ಯಾವ ಪ್ರಯೋಜನವಿಲ್ಲದಂತೆ ವ್ಯರ್ಥ ಕಾಲಹರಣ ಮಾಡುತ್ತಿದ್ದಾನೆ. ಆಟೋಟಗಳ ಪ್ರಿಯನೊಬ್ಬನು, ಆಟಗಳನ್ನೊಲ್ಲದವರು ವ್ಯರ್ಥ ಜೀವನ ನಡೆಸುವರೆಂದು ಊಹಿಸುತ್ತಾನೆ. ತತ್ತ್ವಜ್ಞಾನಿಯು, ಲೋಕವೆಲ್ಲ ವ್ಯರ್ಥ ಐಹಿಕ ಭೋಗೇಚ್ಛೆ ಸಿದ್ಧಿಗಾಗಿ ನಶಿಸುತ್ತಿರುವರೆಂದು ಚಿಂತಿಸುತ್ತಾನೆ.

ಐವತ್ತೈದು ವರ್ಷಗಳಲ್ಲಿ ಒಬ್ಬ ಮನುಷ್ಯನು ಕ್ಷೌರ ಮಾಡಿಕೊಳ್ಳಲು ೩,೩೦೦ ಘಂಟೆಗಳಷ್ಟು ಕಾಲಹರಣ ಮಾಡುವನೆಂದು ಸಂಖ್ಯಾತಜ್ಞನು ಲೆಕ್ಕ ತೋರಿಸುತ್ತಾನೆ. ಅದೇ ದೃಷ್ಟಿಯಲ್ಲಿ, ಸ್ನಾನಕ್ಕೆ ಮತ್ತು ಪೋಷಾಕು ಧರಿಸುವರೆ ಒಬ್ಬನು ತನ್ನ ೭೦ ವರ್ಷ ಆಯುಷ್ಯದಲ್ಲಿ, ದಿನಕ್ಕೆ ಅರ್ಧಗಂಟೆಯಂತೆ ಒಟ್ಟು ೫೩೨ ದಿನಗಳನ್ನು ಕಳೆಯುತ್ತಾನೆ.

ಆದರೆ, ಜನರು, ಎಲ್ಲಕ್ಕಿಂತಲೂ ಅಧಿಕವಾಗಿ, ಕೇವಲ ಕಾದು ನಿಲ್ಲಲು ವ್ಯರ್ಥಗೊಳಿಸುವ ಸಮಯವೇ ಎದ್ದು ಕಾಣುತ್ತಿದೆ. ಆಧುನಿಕ ಜೀವನವೇ ಕಾಯುವ, ತಡೆವ, ತಾಳುವ ಜೀವನವೂ ಆಗಿದೆ. ಬೆಳಿಗ್ಗೆ ಕೆಲಸಕ್ಕೆ ಹೊರಟನಂತರ ಸಾಯಂಕಾಲ ಮನೆಗೆ ಹಿಂದಿರುಗುವ ವರೆಗೆ, ಒಂದಿಲ್ಲೊಂದು ಕಾರಣಕ್ಕಾಗಿ ಕಾಯುವ ಸಮಯ ತುಂಬ ಇದೆ. ಬಸ್ಸಿಗಾಗಿ ಕಾಯಬಹುದು, ಉಪಾಹಾರಕ್ಕಾಗಿ ಕಾಯುವುದುಂಟು. ಕೆಲಸದ ವಸ್ತು ಕೈಗೆ ಬರುವವರೆಗೆ ಕಾಯುವಂಥ ಕೆಲಸಗಳಿರುತ್ತವೆ. ದಿನದಲ್ಲಿ ಐದನೇ ಎರಡಂಶದಷ್ಟು ವೇಳೆಯು ಹೀಗೆ ವ್ಯರ್ಥವಾಗುತ್ತಿದೆ.

ಮಹಾನಗರಗಳಲ್ಲಿ, ರೈಲುಬಂಡಿ ಅಥವಾ ಬಸ್ಸನ್ನು ಕಾಯುತ್ತ ವ್ಯರ್ಥಗೊಳಿಸಿದ ಗಂಟೆಗಳು ಹಲವು. ಪ್ರತಿಯೊಬ್ಬನ ಜೀವನದಲ್ಲೂ ದಾಖಲಾಗಿವೆ. ಕುಳಿತ ಬಸ್ಸು, ನಾಲ್ಕು ರಸ್ತೆಗಳು ಕೂಡುವಲ್ಲಿ ಅಲ್ಲಲ್ಲಿ ತಡೆಯಲ್ಪಟ್ಟರೆ, ಹತ್ತು ಮೈಲುಗಳ ಪ್ರಯಾಣದಲ್ಲಿ ಇಪ್ಪತ್ತು ನಿಮಿಷಗಳಷ್ಟು ಕಾಲವು ವ್ಯರ್ಥವಾಗಬಹುದು.

ಟೆಲಿಫೋನ್ ಮೂಲಕ ಮಾತಾಡುವಾಗಲೂ ದೊಡ್ಡ ವ್ಯಾಪಾರಿಗಳು ಬಹು ಸಮಯವನ್ನು ಕಾಯುತ್ತಲೇ ವ್ಯರ್ಥಗೊಳಿಸಿದ ದಾಖಲೆ ದೊಡ್ಡದಿದೆ.

ಅನೇಕ ಆಫೀಸುಗಳಲ್ಲಿ, ಹಿರಿಯ ಸ್ಥಾನದಲ್ಲಿರುವವರು ಏಳೆಂಟು ಗಂಟೆಗಳ ಕಾಲ ಮಾಡುವಂಥ ಕೆಲಸವನ್ನು, ಅನಾವಶ್ಯಕ ಮಾತುಕತೆಗಳಿಲ್ಲದಿದ್ದರೆ ಎರಡೇ ಗಂಟೆಗಳಲ್ಲಿ ಮಾಡಲು ಸಾಧ್ಯವಿದೆ. ಆದರೂ, ಈ ಹಿರಿಯ ಅಧಿಕಾರಿಗಳೆಂಬವರು ತಾವು ಇಡೀ ದಿನ ದುಡಿದೆವು ಎಂದು ಹೆಮ್ಮೆಯಿಂದ ಭಾವಿಸಿಕೊಳ್ಳುತ್ತಾರೆ.

ನಡೆದುಕೊಂಡೋ ವಾಹನಗಳಲ್ಲಿ ಪ್ರಯಾಣಿಸಿಯೋ ಹೋಗಿ ವ್ಯಾಪಾರ ಮಾಡುವವರು, ನಿಜವಾದ ವ್ಯಾಪಾರಕ್ಕಿಂತ ಆರೆಂಟು ಪಾಲು ಹೆಚ್ಚು ಕಾಲವನ್ನು ಪ್ರಯಾಣಕ್ಕೇ ವ್ಯಯಿಸುವರು. ಹಲವರು, ಅನಾವಶ್ಯಕ ಸಂಭಾಷಣೆಗಳಲ್ಲೇ ವೇಳೆ ಕಳೆವರು.

ಊಟಕ್ಕಾಗಿ, ಅವಶ್ಯವಿರುವುದಕ್ಕಿಂತ ಎರಡು_ಮೂರು ಪಾಲು ಹೆಚ್ಚು ಸಮಯವನ್ನು ವ್ಯಯಿಸುವವರಿದ್ದಾರೆ. ಅವರ ಜೀವನದಲ್ಲಿ ನಿಧಾನವಾಗಿ ಅನ್ನ ಕಬಳಿಸುವುದೇ ಮಹಾದೊಡ್ಡ ವಿಷಯವಾಗಿದೆ. ಎರಡು ಊಟಗಳೂ ಮತ್ತು ಮೂರು ಉಪಹಾರಗಳಿಗೆ ಒಟ್ಟು ಎರಡು ಗಂಟೆಗಳಿಗೂ ಹೆಚ್ಚಿನ ಸಮಯ ವ್ಯರ್ಥ ಮಾಡುವವರುಂಟು. ಹೋಟೇಲುಗಳಲ್ಲಿ, ಅನ್ನ ಬಳಸುವರೆ ಉಂಟಾಗುವ ವಿಲಂಬವಂತೂ ಅತೀ ಹೆಚ್ಚು.

ಸ್ತ್ರೀಯರು ವಸ್ತ್ರ, ಹೂ, ಇತರ ಗೃಹವಸ್ತುಗಳನ್ನು ಖರೀದಿಸಲು ಹೋದರೆ ವ್ಯರ್ಥವಾಗುವ ಸಮಯ—೪೦ ವರ್ಷಗಳ ಜೀವನದಲ್ಲಿ ಹತ್ತು ವರ್ಷಗಳಷ್ಟು ಎಂದು ಲೆಕ್ಕ ಹಾಕಿದವರುಂಟು. ನೆರೆಕರೆಯವರೊಡನೆ ಮಾತುಕತೆಗಳಿಗೆ ತೊಡಗಿದ ಹೆಂಗುಸರು ಅಡಿಗೆಯನ್ನು ಮರೆತುದೂ ಉಂಟು.

ಥಿಯೇಟರುಗಳ ಹೊರಗೆ ಟಿಕೇಟಿಗಾಗಿ ಸಾಲುಗಟ್ಟಿ ನಿಂತು, (ಪ್ರದರ್ಶನದ ಎರಡು ಗಂಟೆಗಳ ಮುಂಚಿತವಾಗಿ) ವ್ಯರ್ಥವಾದ ವೇಳೆಯನ್ನೆಣಿಸಿದರೆ, ಈ ವಿನೋದಸಾಧನಗಳನ್ನೆ ನಿಲ್ಲಿಸಿಬಿಡಬೇಕೆಂಬಷ್ಟು ಜುಗುಪ್ಸೆಯುಂಟಾಗುತ್ತದೆ. ರೇಶನ್ ಅಂಗಡಿಗಳ ಮುಂದೆ ನಿಂತ ಕ್ಯೂ, ಹಾಲಿಗಾಗಿ ಕಾದು ನಿಲ್ಲುವ ಗಂಟೆಗಳು, ಇವೆಲ್ಲವೂ ಬಲು ದೊಡ್ಡ ನಷ್ಟಗಳೆಂದು ಅಧಿಕಾರಿಗಳೂ ಸರಕಾರಗಳೂ ಕೂಡ ತಿಳಿಯುತ್ತಿಲ್ಲವೆಂದು ಆಶ್ಚರ್ಯವಾಗುತ್ತದೆ.

ಅಮೇರಿಕದಲ್ಲಿ, ನೃತ್ಯನಾಟಕ-ಸಿನೆಮ ಮುಂತಾದ ವಿನೋದ ಮಂದಿರಗಳಿಗೆ ಪ್ರವೇಶಕ್ಕಾಗಿ ಕಾಯುತ್ತ ಅಲ್ಲಿಯ ಜನತೆ ವರ್ಷಕ್ಕೆ ವ್ಯರ್ಥಗೊಳಿಸುವ ಸಮಯವು ೬೫ ಮಿಲಿಯ ಗಂಟೆಗಳಷ್ಟಾಗುತ್ತವೆ ಎಂದು ಲೆಕ್ಕವಿದೆ. ನಾಗರಿಕತೆ ಬೆಳೆದಷ್ಟಕ್ಕೆ, ಜ್ಞಾನವು ಹೆಚ್ಚುತ್ತಿರುವಂತೆ ಜೀವನವು ಗೊಂದಲಮಯವಾಗುತ್ತಿದೆ, ತೊಡಕಾಗುತ್ತಿದೆ. ಸಮಯ ವ್ಯರ್ಥವಾಗುತ್ತಿದೆ.

ಏಕಾದಶಿಯ ಪ್ರೇತ

(ದಿವಂಗತ ಎಂ. ಎಸ್. ಕಾಮತ್‌ರವರ ಸಣ್ಣ ಕತೆಗಳಲ್ಲೊಂದು)

ಇಂದು ನಿಜವಾಗಿಯೂ ಏಕಾದಶಿ. ಅದೊಂದು ಕೃಷ್ಣಪಕ್ಷದಲ್ಲಿನ ಮೊದಲ ಹತ್ತು ದಿನಗಳ ತರುವಾಯದ ಹನ್ನೊಂದನೆಯ ತಿಥಿ. ಉರಿಬಿಸಿಲು. ನೀರಿಗೆ ತತ್ವಾರ. ಎಂತೂ ಉಪವಾಸವೆ; ನೀರಡಿಕೆಗೂ ಉಪಾಯವಿಲ್ಲದರಿಂದ ಕಡು ಉಪವಾಸ. ಉಪವಾಸವಿಂತು ಕಠಿನವೇ ಆಗಿಪ್ಪ ಬಳಿಕ ಒಂದಿಷ್ಟು ಭಕ್ತಿಕಥಾಸಲ್ಲಾಪದಿಂದ ಕಾಲಕ್ಷೇಪ ಮಾಡುವುದು ಹರಿವಾಸವ್ರತದ ಪೂರ್ಣ ಫಲವನ್ನು ಕೊಡಬಲ್ಲುದು. ಆಯಾಸ ಬಹಳವಾಗಿದ್ದರೂ, ಅದರಿಂದ ಉಪವಾಸಿಗೆ ಅಲ್ಲೆ ನಿದ್ದೆ ಹಿಡಿಯುವಂತಿದ್ದರೂ, ಜಂಪು ಹಿಡಿದರೂ ವ್ರತಭಂಗ. ಏನು ಮಾಡೋಣ? ಭಕ್ತಾಧೀನ ದೇವರ ಕರುಣೆಗೆ ಎಣೆಯುಂಟೆ? ತಿಪಟೂರಿನಿಂದ ಸರೋಜಿನಿ ಎಂಬ ಏಳೇ ವರ್ಷ ವಯಸ್ಸಿನ ಬಾಲಿಕೆಯ ಹರಿಕಥಾ ಕಾಲಕ್ಷೇಪವು ರಾತ್ರಿ ಭೋಜನಾನಂತರ (ಎಂದರೆ, ಅಂದಿನ ಮಟ್ಟಿಗೆ ಅಲ್ಲದಿದ್ದರೂ ಎಂದಿನ ರೀತಿಯಂತೆ ಒಂಭತ್ತು ಘಂಟೆಗೆ) ಪ್ರಾರಂಭ. ಮೊದಲನೆ ಹರಿಕಥೆ, ದೇವರ ಸೇವೆಗಾಗಿ, ದೇವಸ್ಥಾನದಲ್ಲಿ, ಧರ್ಮಕ್ಕೆ; ಮೊದಲು ಟಿಕೇಟೂ ಇಲ್ಲ, ನಂತರ ವಂತಿಗೆಯೂ ಇಲ್ಲ. ಹೊರಟೆನು.

ದೇವಸ್ಥಾನದ ನಾಲ್ಕು ಹೊರಸುತ್ತು, ನಾಲ್ಕು ಒಳಸುತ್ತು, ಹೆಬ್ಬಾಗಿಲಿಂದ ತೀರ್ಥಮಂಟಪದವರೆಗೆ ಜನಸ್ತೋಮ, ಕುತೂಹಲದ ಗಂಡಸರು, ಲವಲವಿಕೆಯ ಹೆಂಗಸರು, ಅಳುವಿಕೆಯ ಮಕ್ಕಳು, ಊರಿನ ಊರೇ, ನೆರೆಹಳ್ಳಿಯ ಹಳ್ಳಿಯೆ, ಕೂಡಿವೆ. ಎಂತೆಂತಹ ಕೀರ್ತನಾದಿಗ್ಗಜಪಂಚಾನನರನ್ನು ಟೀಕಿಸಿದ ಗಂಡೂತನವೂ, ಪುರುಷಸಮಾನತೆಗಾಗಿ ಹಾತೊರೆದ ದೇವೀಗಣವೂ, ಪ್ರಪಂಚದಲ್ಲೆಲ್ಲ ತಮ್ಮ ಇರವನ್ನು ಸಾರಬೇಕೆಂಬ ಉದ್ದೇಶವನ್ನುಳ್ಳ ಭಾವೀಜನಾಂಗವಾಗಿರುವ ಬಾಯಿತೆರೆದ ಕೂಸಿನ ದೇಶಸಂತಾನವೂ ಈ ಬಾಲಿಕಾ ಹರಿದಾಸಿಯ ಪ್ರದರ್ಶನ ನೋಡಲು ಬಂದಿದ್ದು, ತಮ್ಮ ನಡವಳಿಕೆಯಿಂದ ಬಾಲಿಕೆಯ ಮನೋಧೈರ್ಯವನ್ನಲ್ಲದೆ ಭೂಗೋಳದ ವ್ಯತ್ಯಾಸವನ್ನೆಲ್ಲ ಒಮ್ಮೆಲೇ ಎಲ್ಲರೂ ಅನುಭವಿಸುವಂತೆ ಗದ್ದಲದಿಂದ ಸಾರುತ್ತಿದ್ದಂತೆ ತೋರಿತು. ಬಾಲೆಯ ಗಾಯನ, ಮಾತಿನ ಒಕ್ಕಣೆ, ನಾಟಕೀಯ ಕ್ರಮ, ಅಭಿನಯ ಇತ್ಯಾದಿಗಳ ಕಡೆಗೆ ಮನಸ್ಸು ಹೋಗದಂತೆ ಆ ಗದ್ದಲವೇ ಸಾಕಷ್ಟಿದ್ದರೂ, ಅವಳಲ್ಲಿನ ಕುಂದುಗಳೊಂದೂ ಕಾಣದಂತೆ, ಅವಳಿಗೆ ಕಟ್ಟಿದ್ದ ರಾಧಾಕೃಷ್ಣ ವೇಷವೂ, ಹೆಸರುಗೊಂಡ ಕಮ್ಮಣ್ಣಾಚಾರ್ಯ ಮಾರ್ಗದರ್ಶನವೂ, ಕುಪ್ಪಣ್ಣಾಚಾರ್ಯ ನಿರ್ದೇಶನವೂ ಬಹಳ ಪಿಚಕ್ಕೆನ್ನಿಸದಂತೆ ಯಂದ ಸಾಧಿಸುತ್ತಿದ್ದುವು.

ಹಸಿದು ನಿದ್ದೆಗೆಡಿಸಿಕೊಂಡುದಕ್ಕೆ ಸಂಬಳವಾಗಿ, ನಾನು ಬಾಲಿಕೆಯಾಡುತ್ತಿದ್ದ ರಂಗಸ್ಥಳದ ಬಳಿಯೇ ಇದ್ದೆನು. ನಡೆಯುತ್ತಿದ್ದ ಗದ್ದಲದಲ್ಲಿ ಮನಸೋತಿದ್ದೆನು. ನಿಶ್ಶಬ್ದದ ಅನುಭವವನ್ನೂ ಒಲ್ಲದೆ ಸಂಗೀತಕೇಳುತ್ತಿದ್ದೆನು. ಆದರೆ,—

"ನಿಮ್ಮ ಅಭಿಪ್ರಾಯವೇನು?" ಎಂದು ನಾನು ಕೇಳುವಷ್ಟು ಸ್ಪಷ್ಟವಾಗಿ ನನ್ನ ಕಿವಿಯೊಳಗೆ ಕೇಳಿತು.

ತಲೆತಿರುಗಿದಂತಾಗಿ, ನನ್ನ ಮೈಮರೆವೆಯಿಂದ ಎಚ್ಚರಗೊಂಡೆನು. ಹಿಂದೆ ನೋಡುವಾಗ, ತಂಬೂರಿಯ ಬುರುಡೆ ತಲೆಯ, ಮಾಂಸವಿಲ್ಲದ ಗಡಬುರಲೆಯ, ಉಡುಪಿಲ್ಲದ ದೃಷ್ಟಿಯವನೊಬ್ಬನು ನನ್ನ ಬೆನ್ನಬಳಿಯಲ್ಲಿದ್ದು, ನನ್ನ ಭುಜದ ಮೇಲೆ ತನ್ನ ತಲೆಯಿಟ್ಟು ಕಥೆ ಕೇಳುತ್ತಿದ್ದು, ಈ ಪ್ರಶ್ನೆ ಕೇಳಿದವನೆಂದು ತಿಳಿದೆನು. ಅದುವರೆಗೆ ಆಗಾಗ ನನ್ನ ಕಿವಿಯಲ್ಲಿ ಛೀ ಥೂ ಇತ್ಯಾದಿ ಒಂದಕ್ಷರದ ಟೀಕೆಗಳನ್ನು ಮಾಡುತ್ತಿದ್ದವನು ಇವನೇ ಎಂದು ಈಗ ತಿಳಿದೆನು.

"ಅಭಿಪ್ರಾಯವೇ? ಆಶ್ಚರ್ಯ, ವಿಚಿತ್ರ, ಕೌತುಕ, ನಭೂತೋ ನ ಭವಿಷ್ಯತಿ" ಎಂದೆನು ನಾನು.

"ಇಸ್ಸಿ. ಇಂತಹ ನಾಲ್ವರನ್ನು ನಾನು ಮನೆಯಲ್ಲಿ ಸಾಕುತ್ತಿದ್ದೆನು. ಇಂತಹ ಎಂದೇನು? ಇನ್ನೆಷ್ಟೋ ಮೇಲ್ತರಗತಿಯವರಿದ್ದರು!" ಎಂದನವನು.

ನಾನು ಬರೇ, "ಹಾಂ..." ಎಂದೆನು.

"ಅಲ್ಲ, ಸುಳ್ಳಲ್ಲ, ಉಡಾಫೆ ಮಾತಲ್ಲ. ನಿಜವಾಗಿಯೂ ನೀವು ನಂಬಲಾರಿರಾದರೆ..." ಎನ್ನುವುದರೊಳಗೆ ಒಂದು ಕೊಡೆಯ ಹಿಡಿಯು ಆತನ ಕೊರಳಸುತ್ತು ಹಾವಿನ ಬಳೆಯಂತಾಗಿ ಸುರುಳಿ ಹಿಂದಕ್ಕೆಳೆದು ಆತನನ್ನು ಮಲಗಿಸಿದಂತಾಯಿತು. ಅವನ ಪೂರ್ಣಾಭಿಪ್ರಾಯ ವಿವರಣೆಗೆ ಅವಕಾಶಸಿಗಲಿಲ್ಲ. ನಾನೂ ಅವನನ್ನು ಮರೆತೆನು; ಮರೆತುದರಿಂದ ನಾನು ನೊಂದುದಿಲ್ಲ, ಕಳವಳಿಸಿಲ್ಲ.

ಹರಿಕಥಾ ಸೇವೆ ಮುಗಿದು ಮನೆಗೆ ಹೊರಟು, ಜನಸಾಗರದಲ್ಲಿ ತೇಲುತ್ತ ಮುಳುಗುತ್ತ ನಾನು ಹೇಗೂ ದಾರಿಮಾಡಿಕೊಂಡು ಮುಂದರಿವಾಗ, ಅವನನ್ನು ನನ್ನ ಮಗ್ಗುಲಲ್ಲೆ ಕಂಡೆನು. ನಾನೇನು ಪರಿಚಯಾರಂಭಿಸಲಿಲ್ಲವಾದರೂ, ಅವನೇ ಬೆನ್ನುತಟ್ಟಿ, "ಒಂದು ಸಲ ನಾಲ್ವರು ಇಂತಹರನ್ನು ಸಾಕುತ್ತಿದ್ದೆನು, ನೀವೇನೆನ್ನುತ್ತೀರಿ? ಎಂದನು.

"ಏನೆನ್ನಬಹುದು? ಹೇಳಲೇನು ಉಳಿದಿದೆ?" —ಎಂದೆನು ನಾನು.

"ಹಾಗೆನ್ನಿ. ಸಂಗೀತಗಾರರ ಮಾತು ಬಿಡಿ; ನಾಟಕಕಂಪೆನಿಯವರ, ಅಭಿನಯಕಾರರ ಹಿಂಡುಗಳಿಗೆ ಈಗ ಕಡಿಮೆಯುಂಟೆಯೋ?" ಎಂದನವನು.

"ಹಂ! ಬದುಕಿದ್ದರೆ ಯಥೇಷ್ಟವಾಯಿತೆನ್ನುವವರೆಷ್ಟೋ ಇದ್ದಾರಲ್ಲ!" ಎಂದೆನು ನಾನು.

"ನೀವೋ?" ಎಂದೇ ಅವನ ಪ್ರಶ್ನೆ. ಪ್ರಶ್ನೆ ಕೇಳಿದುದು ಅವನ ನಾಲಿಗೆಯಲ್ಲ, ಕಣ್ಣು.

"ನಾನು ಬೇಂಕಿನಲ್ಲಿ ಗುಮಾಸ್ತ" ಎಂದೊಡನೆ ಅವನ ಅದೇ ಕಣ್ಣು ಅರಳಿಹೋಯಿತು.

"ಹಾಗಿದ್ದರೆ, ಒಳ್ಳೇ ಶ್ರೀಮಂತರಾದರೂ ಉದಾರಸ್ವಭಾವದ ದಾನಶೂರರೆಲ್ಲರ ಪರಿಚಯ ನಿಮಗಿರಬೇಕಷ್ಟೆ?'—ಎಂದೇ ಅವನ ವಿಚಾರ.

"ಹೂಂ—ಒಬ್ಬರಿಬ್ಬರನ್ನು ಬಲ್ಲೆ"—ಎಂದು ಗೌರವಕ್ಕಾಗಿ ಹೇಳಿದೆನು.

ಆಗಲೆ, ಅವನ ಸ್ವರವು ಗಂಟೆಯ ಸ್ವರದಷ್ಟು ಗಂಭೀರವೂ, ಅವನ ಮೈಯು ಒಂಟೆಯ ಬೆನ್ನಂತೆ ವಿಕಾರವೂ ಹೊಂದಿತು. "ಧನ್ಯರೆಂದರೆ ನೀವೇ ಸರಿ! ಈ ಜನ್ಮಕ್ಕೊಮ್ಮೆ ದೊರೆಯಬಹುದಾದ ಅಪೂರ್ವ ಸಂದರ್ಭವೊಂದು

ನಿಮಗೊದಗಿದೆ. ಕೇಳಿರಿ, ಒಂದಿಷ್ಟು ಅವಕಾಶ ಕೊಡಿರಿ. ನಿಮಗೆ ಕುಬೇರನ ಭಂಡಾರವನ್ನೂ ಅಶ್ವತ್ಥಾಮನ ಅಮರತ್ವವನ್ನೂ ಸಂಪಾದಿಸಿ ಕೊಡತಕ್ಕ ಒಂದು ವಿಚಾರಸೂಕ್ಷ್ಮವನ್ನು ನಾನು ಬಲ್ಲೆನು"—ಎಂದನವನು.

ನಾನು ಮರುಮಾತಾಡಲಿಲ್ಲ. ಅವನ ಮಾತು ನಾಟಿತು ಎಂದು ಭಾವಿಸಿದನು.

"ಇಷ್ಟೆ ಚುಟುಕಿನಲ್ಲಿ ಹೇಳುವೆನು. ಒಂದು ಕಾಲದಲ್ಲಿ ಇಂತಹ ಅಪ್ರತಿಮ ಪ್ರತಿಭಾವಂತರನ್ನು ಕೋಳಿತತ್ತಿಗಳಂತೆ ಬೇಕಾದವರಿಗೆ ಸಾವಿರಗಟ್ಟಲೆಯಾಗಿ ನಾನೇ ಒದಗಿಸುವ ಹಂಚಿಕೆ ಮಾಡುವುದರಲ್ಲಿದ್ದೆನು. ಈಗ ಮಾಡುವುದೇನು? ಇದೇ ಜೋಳಿಯಾಚೆಗೆ ನನ್ನ ಬಿಡಾರ. ಅಲ್ಲಿಗೆ ಬನ್ನಿರಿ, ಹೋಗೋಣ" ಎಂದನು.

ಮೂರೇ ನಿಮಿಷದ ಹಾದಿ ಎಂದವನು, ನನ್ನನ್ನು ಮೂರು ಮೈಲು ದೂರ ಹೊಳೆದಂಡೆಯಾಚೆಗೆ ನಡೆಯಿಸಿಕೊಂಡು ನಡೆದನು. ದಾರಿಯಲ್ಲಿ, ಪತ್ರಿಕೆಮಾರುವ ಹುಡುಗರು ಹಂಚುತಿದ್ದ ಚಿಕ್ಕ ನೋಟೀಸನ್ನು ಅವನ ಕಾಲಬಳಿ ಬಿದ್ದ ಎತ್ತಿಕೊಂಡು, ಅದರಲ್ಲಿ ಮೂರು ಕಾಸಿನ ನೆಲಗಡಲೆಯನ್ನು ಕ್ರಯಕ್ಕೆ ಪಡೆದು ಮಡಗಿ ಸುತ್ತಿಕೊಂಡು, ..."ದಿವ್ಯ ಫಲಾಹಾರ. ಮಹಾತ್ಮಾಜೀಯವರ ಜೀವನಕ್ರಮದಂತೆ ನಡೆದರೆ ಎಷ್ಟು ಸುಖ!" ಅಂದನು.

ಅವನ ಮನೆಯಲ್ಲಿ ಚಾಪೆಯೊಂದು, ಕಾಲು ಮಣೆಯೊಂದು. ಅವನೂರಿದ್ದ ಕಾಲುಮಣೆಯಲ್ಲಿ ನನಗಂತೂ ಸ್ಥಳವಿದ್ದಿಲ್ಲ; ಕೈಕಾಲು ಸಡಿಲುಬಿಟ್ಟು ಕೂತಿರಲು ಚಾಪೆಯುತ ನುವೆಂದು ನನಗೆ ಸೂಚನೆಯಾಯಿತು. ಕಥಾರಂಭ. "ಏನೆನ್ನುವಿರಿ? ನಮ್ಮ ತಂದೆ ಮಹಾಮೇಧಾವಿಗಳು. ಛಲವಂತರು. ನೂತನ ಧೋರಣೆ, ನೂತನ ಶೋಧಗಳಿಗೆ ಕೇವಲ ಬ್ರಹ್ಮರೆಂದರೆ ಅವರು. ಅವರು ನಮ್ಮಂತಹ ಪ್ರತಿಭಾಶಾಲಿಗಳನ್ನ ನೂರಾರು ಸೃಷ್ಟಿಸಿ ರೂಪಿಸಿ ಬೆಳೆಸಿ ತಂದರು. ಅವರ ನಂತರ ಆ ಶಾಳೆಯುವೆಲ್ಲ ಪಿತ್ರಾರ್ಜಿತವಾಗಿ ನನ್ನ ಕೈಸೇರಿತು" ಎಂದನು. ಚಕಿತನಾಗಿಯೋ ಆಯಾಸದಿಂದಲೋ, ಬೇಸರದಿಂದಲೋ, "ಭಗವಂತಾ!" ಎಂದೆನು—ನಾನು.

"ಬೇರೆ ಬೇರೆ ಜನಾಂಗಗಳಿಗೆ ಬೇರೆ ಬೇರೆ ವಿಷಯಗಳಲ್ಲಿ ನೈಪುಣ್ಯವಿದೆ. ಅಂತಹವರೊಳಗೆ ವಿವಾಹಮಾಡಿಸಿ, ಅವರ ಸಂತಾನವನ್ನು ತಿದ್ದಿ ತಂದರೆ, ವ್ಹಾ! ಜಗದೇಕ ಶಿರೋಮಣಿಗಳನ್ನೇ ಪ್ರದರ್ಶಿಸಬರುತ್ತಿದ!" ಎಂದು ಅವರು ತಿಳಿದಿದ್ದರು. ಅದಕ್ಕಾಗಿ ಎಲ್ಲೆಲ್ಲಿಂದ ನಮ್ಮ ಊರಿಗೆ ಭಿಕ್ಷಾಟನೆಗಾಗಿ ಬರುತಿದ್ದ ನಾನಾ ಬಗೆಯ ಜನಗಳಿಂದ ಗಂಡು ಹೆಣ್ಣುಗಳನ್ನು ಆರಿಸಿಕೊಂಡು, ಅವರನ್ನು ಈ ಆಸ್ತಿಯ ಹುಟ್ಟುವಳಿಯಿಂದ ಅವರ ಕುಟುಂಬಗಳಿಗೆ ಧರ್ಮಾರ್ಥ ಮನೆ, ಅನ್ನ, ವಸ್ತ್ರ, ಎಲ್ಲ ಸಲಕರಣೆಗಳನ್ನು ಕೊಟ್ಟು, ಪ್ರತಿಯಾಗಿ ಅವರಿಂದ ವಿಧೇಯತೆಯನ್ನೆ ಮಾತ್ರ ಅಪೇಕ್ಷಿಸಿ, ಅವರಲ್ಲಿ ಹುಟ್ಟಿದ ಮಕ್ಕಳಿಗೆ ತನಗೆ ಬೇಕಾದ ರೀತಿಯಲ್ಲಿ ಶಿಕ್ಷಣ ಕೊಟ್ಟು, ಈ "ಪ್ರತಿಭಾಶ್ರಮ"ವನ್ನು ಪ್ರಪಂಚದಲ್ಲೆಲ್ಲ ಹೆಸರುಗೊಳ್ಳುವಂತೆ ಮಾಡಿದರವರ!"—ಎಂದು ಉತ್ಸಾಹದಿಂದ ನುಡಿದನು.

"ಅಂತೂ ಅವರ ಸಾಧನೆಗಳೆಲ್ಲ ಕೈಗೂಡಿದುವು?" ಎಂದೆನು ನಾನು.

"ಖಂಡಿತವಾಗಿಯೂ! ಆದರೆ, ಅದೊಂದು ಬಗೆಯ ಸೋಡ್ತಿಯಂತಾಯಿತು. ಅವರು ತರಬೇತುಮಾಡಿದ ಮಕ್ಕಳೆಲ್ಲ ಅತಿ ವಿದ್ಯಾವಂತರಾಗಲೂಬಹುದು, ಅತಿ ತುಚ್ಛರೂ ಆಗಬಹುದು ಎಂಬಷ್ಟು ಪರಿಣಾಮಗಳಿದ್ದುವು. ಆದರೆ, ಅವರು ಕಾಳಿದಾಸನಂತೆ ಪ್ರತಿಯೊಬ್ಬರೂ ಸಾವಿರಾರು ಉತ್ಕೃಷ್ಟ "ಮೇಘದೂತ"ಗಳನ್ನೆ ದಿನದಿನಕ್ಕೆ ರಚಿಸುತಿದ್ದರು; ಆಗದಿದ್ದರೆ, ಆಕಾಶವನ್ನು ನೋಡುತ್ತಲೆ ಗಾಳಿಬೀಸಿದ ಕಡೆಗೆ ಸಿಳ್ಳುಹಾಕುತ್ತ ಹಸಿವು ನಿದ್ದೆಗಳಿಲ್ಲದೆ ಓಡಾಡುತಿದ್ದರು. ಸಾಧ್ಯವಿದ್ದಲ್ಲಿ, ಶಿವಾಜಿಯಂತೆ ಮಹಾ ಪರಾಕ್ರಮಿಗಳಾಗಿ ಸೇನಾನಾಯಕರಾಗುತಿದ್ದರು; ಇಲ್ಲದಿದ್ದಲ್ಲಿ, ಸಾವಿರ ನುಸಿಗಳನ್ನು ಒಂದೇಟಿಗೆ ಕೊಂದುಹಾಕುತಿದ್ದರು. ಸುಫಲನಾದಲ್ಲಿ, ರಿಕಾರ್ಡು ಸಂಗೀತವನ್ನೆ ಹಾಡುತಿದ್ದರು. ಅಲ್ಲದಿದ್ದಲ್ಲಿ, ಊರಿನ ನಾಯಿಗಳೆಲ್ಲ ಕೊಂಬುಕೂಗುವ ಹಾಗೆ ಬಗುಳುತಿದ್ದರು, ಅದೇನಿದ್ದರೂ, ಅವರ ಆಶ್ರಮಶಿಕ್ಷಣದ ತತ್ವವು ಅತಿ ಮಹತ್ವದ್ದು, ಅದ್ವಿತೀಯ ಎಂಬುದರಲ್ಲಿ ಸಂದೇಹವಿರಲಿಲ್ಲ. ಇರಲಿ, ಈಗ ಈ ಸಾಟಿಗೇನೆನ್ನುವಿರಿ?" ಎಂದು ಕೇಳಿದನು.

"ಏನದು ಕೇಳೋಣ!" ಎಂದೆ.

ಅವನು ಅದೇ ನೆಲಗಡಲೆ ಸುತ್ತಿದ ಕಾಗದದ ಮೇಲೆ ಪೆನ್ಸಿಲಿನಿಂದ ಲೆಕ್ಕಹಾಕತೊಡಗಿದನು. ಒಂದು ವರ್ಷದಲ್ಲಿ ಈ ಆಶ್ರಮದಲ್ಲಿ ತರಬೇತಾಗಬಹುದಾದ ನಾಲ್ವರು ಕಾಳಿದಾಸರು, ಇಬ್ಬರು ತೆನ್ನಾಲಿ ರಾಮಕೃಷ್ಣರು, ಹತ್ತುಮಂದಿ ಪುರಂದರದಾಸರು, ಇವರುಗಳ ಕಾವ್ಯ, ಸಂಗೀತ, ಹಾಸ್ಯ, ಹರಿಕಥಾದಿ ಪ್ರದರ್ಶನ ಪ್ರಕಟನಗಳಿಂದ 363,000 ರೂಪಾಯಿ ಸಂಪಾದನೆ ಮಾಡಬಹುದು."

"ಇದು ಸ್ವಲ್ಪ ಹೆಚ್ಚಿನ ಅಂದಾಜು!"

"ಬಲ್ಲೆ, ಬಲ್ಲೆ. ಈ ಪ್ರತಿಭಾವಂತರಿಗೆ ಕೆಲವು ಅಭ್ಯಾಸಗಳೂ ಮನಸ್ಸಿನ ಡೊಂಕೂ ಇವೆ. ಇವುಗಳ ಸಮಾಧಾನಕ್ಕಾಗಿ ಸೇಕಡಾ 25ನ್ನು ಕಳೆಯಬೇಕು. ಅವರ ಶಿಕ್ಷಣ, ತರಬೇತು, ಜಾಹೀರಾತು, ಆಹಾರ ಇತ್ಯಾದಿಗಳಿಗೆ ಸೇಕಡಾ 25ನ್ನು ಕಳೆಯಬೇಕು. ಹೋಗಲಿ; ಹೇಗೂ ವರ್ಷಕ್ಕೆ 181500, ತಿಂಗಳಿಗೆ ರೂ. 15125, ದಿನಕ್ಕೆ 500, ತಾಸಿಗೆ ಇಪ್ಪತ್ತು ಚಿಲ್ಲರೆ. ನಿವ್ವಳ ಆದಾಯವಿಷ್ಟೇ ಇದೆ. ಆದರೂ, ಇನ್ನಷ್ಟು ವಿವರವನ್ನು ತಿಳಿಸುವೆನು. ನಮ್ಮ ನಾಲ್ವರು ಕಾಳಿದಾಸರಲ್ಲಿ ಒಬ್ಬನು ಈಗ ಕಾವ್ಯ ಬರೆವನಾದರೂ, ಕ್ಷಣದಲ್ಲಿ ಎರಡನೆ ಕಾಳಿದಾಸನನ್ನು ಬೈದು ಪದ್ಯಕಟ್ಟುವನು; ಮೂರನೆಯವನು ಹಾಲಿನ ಪಾಯಸವಿಲ್ಲದೆ ಒಂದಕ್ಷರವನ್ನೂ ಬರೆಯುವುದಿಲ್ಲ. ನಾಲ್ಕನೆಯವನಿಗೆ ಸೈಕಲ್‌ಸವಾರಿಯಲ್ಲಿದ್ದಾಗ ಮಾತ್ರ ಕಾವ್ಯವು ಒಸರುತ್ತಿದೆ. ತಾನಸೇನರಲ್ಲಿ ಒಬ್ಬನು ಚಾ ಕುಡಿದೇ ಹಾಡುವನು, ಮತ್ತೊಬ್ಬನು ಮೆಣಸು ನುಂಗಿದಷ್ಟಕ್ಕೆ ಮಾತ್ರ ಹಾಡುವನು; ಇವರಿಬ್ಬರು ಹಾಡುವರೆಂದು ತಿಳಿದಾಗ, ಉಳಿದಿಬ್ಬರು ಕೂಗುವರು; ಕೊನೆಯವನು ತಾನೊಬ್ಬನೇ ಇದ್ದರೆ ಮಾತ್ರ ಹಾಡುವನು, ಅಥವಾ ಸಾಯುವ ಮುಹೂರ್ತಕ್ಕೆ ಸರಿಯಾಗಿ ಹಾಡುವವನಂತೆ. ಇಬ್ಬರು ತೆನ್ನಾಲಿಗಳಲ್ಲಿ ಒಬ್ಬನ ಹಾಸ್ಯವು ಅವನನ್ನೆ ಮಾತ್ರ ನಗಿಸುತ್ತದೆ; ಮತ್ತೊಬ್ಬನು ತಾನೂ ನಗಲಾರದೆ, ಇತರರು ನಗುತಿದ್ದರೂ ಗೋಳಾಡಲೇ ಬೇಕಾಗಿ ಬರುವ ನಮೂನೆಯ ಹಾಸ್ಯಮಾಡುವನು. ನಮ್ಮಿಬ್ಬರು ಪುರಂದರದಾಸರಲ್ಲಿ ಒಬ್ಬನು ಪದ್ಯಕಟ್ಟಲಾರ, ಹಾಡುವನು ಅಷ್ಟೆ; ಮತ್ತೊಬ್ಬನು ಹಾಡಲಾರ, ಪದ್ಯ ಕಟ್ಟುವನು. ಆದರೆ, ಇವನ ಪದ್ಯವನ್ನು ಅವನು ಹಾಡನು; ಅವನಿಗಾಗಿ ಇವನು ಪದ್ಯ ಕಟ್ಟಿಕೊಡನು. ಈ ರೀತಿಯ ರಗಳೆಗಳಿದ್ದುವು. ಈ ಕಾರಣದಿಂದ, ಅವರ ಶಿಕ್ಷಣಕ್ರಮವನ್ನು ಸರಿಯಾಗಿ ವಿಮರ್ಶಿಸಿ ಶೋಧಿಸಿ ಗೊತ್ತುಮಾಡಿದ ನವೀನ ಸೂತ್ರಗಳನ್ನು ನಮ್ಮ ತಂದೆಯವರು ಬರೆದಿಟ್ಟರು. ಅದನ್ನು ಪ್ರಯೋಗಮಾಡಿ ನೋಡುವ ಮೊದಲೇ ಅವರು ಈ ಆಶ್ರಮವನ್ನು ಬಿಟ್ಟು ತೆರಳಿದರು. ಆ ಸೂತ್ರಗಳೇ ನನ್ನ ಅಮೂಲ್ಯ ಸೊತ್ತು. ಇದನ್ನು ಪ್ರಯೋಗಿಸಿ ನೋಡಲು, ಭಾಂಡವಲ ಬೇಕು. ಒಂದು ವರ್ಷದ ಲಾಭವಾದ 181,500 ರೂಪಾಯಿಗಳನ್ನು ನನಗೆ ಯಾರಾದರೂ ಕೊಡುವವರಿದ್ದರೆ, ಈ ಸೊತ್ತಿನ ಸಂಪೂರ್ಣ ಹಕ್ಕನ್ನು ಅವರಿಗೆ ಯುಗಾಂತ್ಯಕ್ಕೂ ಮಾರಿಬಿಡುವೆನು. ನಿಮಗೆ ಯಾರೂ ಪರಿಚಿತ......"

"ನನ್ನಿಂದಾದೀತೋ ಎಂದು ನನಗೇ ಸಂದೇಹ... ...!"

ಹಣದ ತುಟ್ಟಿ, ಲೋಭಿಗಳ ಸ್ವಾರ್ಥ, ಬೇಂಕುಗಳ ಶರ್ತ ತಿಳಿದೇ ಇದೆ. ರೂಪಾಯಿಗಳ ಮಾತಿರಲಿ, ಆಣೆಗಳಾದರೂ ಸಾಕು. ಒಂದುಮೊಬಲಿಗಾಗಿ 2000 ರೂಪಾಯಿ ಕೊಟ್ಟರೂ ಒಪ್ಪಿಗೆ.'

"ಹಣವಿದ್ದವರಿಗೆ ಇದೆಲ್ಲ ಆಶ್ರಮ ವಿಚಾರ ತಿಳಿಯಲಾರದಲ್ಲ! ಪ್ರತಿಭೆ ಎಂಬ ಶಬ್ದವೇ ಅವರಿಗೆ ಹೊಸದು."

"ನೀವು ಈ ಆಶ್ರಮಶ್ರಮ ತತ್ತ್ವವನ್ನೆಲ್ಲ ಕೇಳಿಯೇ ಬಿಟ್ಟಿರಲ್ಲ! ನಿಮ್ಮ ಮನಸ್ಸಾದರೂ ಈಚೆಗೆ ಒಲಿಯದೇ? 20 ರೂಪಾಯಿ ಕೊಟ್ಟುಬಿಡಿ. ಎಲ್ಲವನ್ನು ನಿಮ್ಮ ಹೆಸರಲ್ಲಿ ವರ್ಗಾಯಿಸಿ ಕೊಡುತ್ತೇನೆ"

"ರೂಪಾಯಿ ನಾಣ್ಯವನ್ನು ನೋಡದೆ ಹಲವು ದಿನಗಳಾಗಿವೆ; ಒಂದಾಣೆಯಿದೆ. ಇದು ಸದ್ಯ ನಿಮ್ಮಲ್ಲಿರಲಿ."

"ಧರ್ಮಕ್ಕೆ ಕೊಡಬೇಡಿರಿ—ನನ್ನ ಈ ಇತಿಹಾಸವನ್ನೂ ಆಶ್ರಮದ ಕಾರ್ಯಕ್ರಮಾದಿಗಳನ್ನೂ ಇಡೀ ಪ್ರಪಂಚಕ್ಕೆ ಪ್ರಕಟಿಸುವ ಎಲ್ಲ ಹಕ್ಕುಗಳನ್ನೂ ನಿಮಗೇ ಕೊಟ್ಟೆನು"

"ಹಾಗಿದ್ದರೆ, ನಾನು ಹೋಗಲೆ?"

(21ನೇ ಪುಟಕ್ಕೆ ಮುಂದುವರಿದಿದೆ)

ನೋಟೀಸು

ಮಂಗಳೂರು ಜಿಲ್ಲಾ ಜಡ್ಜರ ಕೋರ್ಟಿನಲ್ಲಿ

ಪಿ ಎಂಡ್ ಎಸ್ ಸಿ. ನಂಬ್ರ 66/1970.

ಮೃತ ಕೆ. ಅಬ್ದುಲ್ ಸತ್ತಾರ್‌ರವರ ಸೊತ್ತಿನ ವಿಷಯದಲ್ಲಿ.

ಶ್ರೀಮತಿ ಜೈನಾಬಿ ಕತ್ರಿ... ಅರ್ಜಿದಾರಳು.

ಮಂಗಳೂರು ಶ್ಯಾಹಾರ್ ಡೋರ್ ನಂಬ್ರ 9-488A ಮನೆಯಲ್ಲಿ ವಾಸಿಸುತ್ತಿದ್ದು ತಾ. 20—1—1970ರಲ್ಲಿ ಮೃತಪಟ್ಟ ಕೆ. ಅಬ್ದುಲ್ ಸತ್ತಾರ್‌ರ ಮೇಲ್ಕಂಡ ಅರ್ಜಿಯಲ್ಲಿ ಕಾಣಿಸಿದ ಸೊತ್ತಿನ ಬಗ್ಗೆ, ತನಗೆ ವಾರೀಸ್ ಸರ್ಟಿಫಿಕೇಟ್ ಕೊಡಬೇಕೆಂದು ಸದ್ರಿಯವರ ವಿಧವೆ ಶ್ರೀಮತಿ ಜೈನಾಬಿ ಕತ್ರಿಯವರು ದಾಖಲ್ಮಾಡಿದ ಅರ್ಜಿಯು ಮೇಲ್ಕಂಡ ಕೋರ್ಟಿನಲ್ಲಿ ತಾ. 16—11—1970ಕ್ಕೆ ಮುಂದರಿಸಿಡಲ್ಪಟ್ಟಿದೆ. ಸದ್ರಿ ಅರ್ಜಿಯ ವಿಷಯ ಆಕ್ಷೇಪವಿದ್ದರೆ, ಖುದ್ದಿನಿಂದಾಗಲೀ ವ ಕ್ರಮವಾಗಿ ಅಧಿಕಾರ ಹೊಂದಿದ ಎಡ್ವಕೇಟ್‌ರ ಮೂಲಕವಾಗಿಯಾಗಲೀ ಆ ದಿನ ಹಗಲು ಗಂಟೆ 11ಕ್ಕೆ ಸದ್ರಿ ಕೋರ್ಟಿನಲ್ಲಿ ಹಾಜರಾಗಿ ಉದಹರಿಸಬಹುದು. ಅರ್ಜಿಯ ನಕಲನ್ನು ಅರ್ಜಿದಾರಳ ಎಡ್ವಕೇಟರಿಂದ ಮುಫತ್ತಾಗಿ ಪಡಕೊಳ್ಳಬಹುದು.

ಮಂಗಳೂರು
30-10-1970 } D. Mohun Rau,
ಅರ್ಜಿದಾರಳ ಪರ
ಎಡ್ವಕೇಟ್.



ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

R. R. C. ನಂಬ್ರ 799/1969.

ಮಹಾಬಲ ಐತಾಳ ... ಅರ್ಜಿದಾರ

ಮತ್ತು

ಮುತ್ತಣ್ಣ ಶೆಟ್ಟಿ ಕೂಡಾ ... ಎದ್ರಿರು

ನೋಟೀಸು

ಬೆಳ್ತಂಗಡಿ ತಾಲೂಕು ಕೂವೆಟ್ಟು ಗ್ರಾಮದ ಅಡೇಲು ಎಂಬಲ್ಲಿರುವ ಪರಮೇಶ್ವರಿ ಹೆಂಗುಸಿನ ಮಗ ನಾರಾಯಣ ಶೆಟ್ಟಿ, ಮಂಗಳೂರು ತಾಲೂಕು ಸೇಡಿಗುಡ್ಡೆಯ ಬಂದರ್ ಕೂಲೀಸ್ ಸಿ. ಪಿ. ಸಿ. ಕಂಪೌಂಡಿನಲ್ಲಿರುವ ನಾರಾಯಣ ಶೆಟ್ಟರ ಹೆಂಡ್ತಿ ವ ಎಲಿಯಪ್ಪ ಯಾನೆ ಸೂವಮ್ಮನ ಮಗಳು ಪುಟ್ಟಕ್ಕೆ ಕೂಡಾ 2 ಮತ್ತು 4ನೇ ಎದ್ರಿಯವರಿಗೆ—

ಅರ್ಜಿದಾರರು 1967—68ನೇ ವರ್ಷದ ಗೇಣಿ ಬಾಕಿಯ ವಸೂಲಿ ಬಗ್ಗೆ ದಾಖಲು ಮಾಡಿದ ಅರ್ಜಿಯು ತಾ. 17-11-1970ಕ್ಕೆ ಎದ್ರಿಯರ ಹಾಜರಾತಿ ಬಗ್ಗೆ ಇರುತ್ತದೆ. ಎದ್ರಿಯರು ತಾ. 17-11-1970ಕ್ಕೆ ಬೆಳ್ತಂಗಡಿ ಮುನ್ಸಿಫ್ ಕೋರ್ಟಿನ ಮುಂದೆ ಬೆಳಿಗ್ಗೆ 11 ಗಂಟೆಗೆ ಹಾಜರಾಗಿ ಉದಾಹರಿಸತಕ್ಕದ್ದು. ತಪ್ಪಿದಲ್ಲಿ ಕೋರ್ಟಿನವರಿಗೆ ಯುಕ್ತಕಂಡಂತೆ ಮುಂದುವರಿಸಲಾದೀತು.

(By order of Court)

ಪುಳು ನಾರಾಯಣ ಭಟ್ಟ,

ಪುತ್ತೂರು) ಅರ್ಜಿದಾರರ ಕಡೆ
25-10-1970) ಎಡ್ವಕೇಟ್.

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

R. R. C. ನಂಬ್ರ 628/1969

ಮಹಾಬಲ ಐತಾಳ ... ಅರ್ಜಿದಾರ

ಮತ್ತು

ಮುತ್ತಣ್ಣ ಶೆಟ್ಟಿ ಕೂಡಾ ... ಎದ್ರಿರು.

ನೋಟೀಸು

ಮಂಗಳೂರು ತಾಲೂಕು ಸೇಡಿಗುಡ್ಡೆಯ ಬಂದರ್ ಕೂಲೀಸ್ ಸಿ. ಪಿ. ಸಿ. ಕಂಪೌಂಡಿನಲ್ಲಿರುವ ನಾರಾಯಣ ಶೆಟ್ರ ಹೆಂಡ್ತಿ ವ ಎಲಿಯಪ್ಪ ಯಾನೆ ಸೂವಮ್ಮನ ಮಗಳು ಪುಟ್ಟಕ್ಕೆ 4ನೇ ಎದ್ರಿ ಇವರಿಗೆ—

ಅರ್ಜಿದಾರರು 1966-67ನೇ ವರುಷದ ಗೇಣಿಬಾಕಿಯ ವಸೂಲಿ ಬಗ್ಗೆ ದಾಖಲು ಮಾಡಿದ ಅರ್ಜಿಯು ತಾ. 17—11—1970ಕ್ಕೆ ಎದ್ರಿಯರ ಹಾಜರಾತಿ ಬಗ್ಗೆ ಇರುತ್ತದೆ. ಎದ್ರಿಯರು ತಾ. 17-11-1970ಕ್ಕೆ ಬೆಳ್ತಂಗಡಿ ಮುನ್ಸಿಫ್ ಕೋರ್ಟಿನ ಮುಂದೆ ಬೆಳಿಗ್ಗೆ 11 ಗಂಟೆಗೆ ಹಾಜರಾಗಿ ಉದಾಹರಿಸತಕ್ಕದ್ದು. ತಪ್ಪಿದಲ್ಲಿ ಕೋರ್ಟಿನವರಿಗೆ ಯುಕ್ತಕಂಡಂತೆ ವರ್ತಿಸಲಾದೀತು.

(By order of Court)

ಪುಳು ನಾರಾಯಣ ಭಟ್ಟ,

ಪುತ್ತೂರು) ಅರ್ಜಿದಾರರ ಕಡೆ
25-10—1970) ಎಡ್ವಕೇಟ್.

ಸಾಲ ಮತ್ತು ಸಾಲಿಗರು

(ಕುಡ್ಪಿ ವಾಸುದೇವ ಶೆಣೈ)

"ಐರಾವತ" ಎಂಬ ಅಡ್ಡ ಹೆಸರಿನ ಸುಬ್ಬಣಯ್ಯ ಎಂಬವನಿಂದ, ಆರು ತಿಂಗಳಿಂದ ನನಗೆ ಬರಬೇಕಾಗಿದ್ದ ಮೂವತ್ತು ರೂಪಾಯಿಗಳಿಗೆ ಅವನಲ್ಲಿಗೆ ಐವತ್ತೊಂಬತ್ತನೇ ಯಾತ್ರೆಮಾಡಿ ಜಗಳವಾಗಿ ಮನೆಗೆ ಬಂದು, ಮಧ್ಯಾಹ್ನದ ಊಟ ಮಾಡಿ, ಅರುವತ್ತಕ್ಕೆ ಯಾತ್ರೆಗೆ ಹೊರಟಿದ್ದೆ. ಮೂರೆ, ಕೆಲ ಕಾಲದಿಂದ,—ಮಧ್ಯಾಹ್ನ ಭೋಜನ ತೀರಿಸಿ ಹೊರಗೋಡುವ ನನ್ನನ್ನು ತಪ್ಪದೆ ಎದುರಾಗಿ ಮಾತಾಡಿಸಿ "ಚಿಲ್ಲರೆ ಖರ್ಚಿ"ಗಾಗಿ ಒಂದು ರೂಪಾಯಿಗೆ ತಗಾದೆ ಹೂಡುವ ಅಭ್ಯಾಸ ಮಾಡಿಕೊಂಡಿದ್ದಳು. ಬಾಗಿಲಲ್ಲಿ ನಿಂತ ಅವಳನ್ನು ಈ ಒಂದು ದಿನ ಮಾತಾಡಿಸದೇನೆ ಉಸಿರು ಕಟ್ಟಿ, ರುಮ್ಮನೆ ಬಾಣ ಹೊಡೆದಂತೆ ನನ್ನ ಇಡೀ ದೇಹವನ್ನು ಹೊರಗೆ ಸಿಡಿಸಿಕೊಂಡು, ಬಿದ್ದು ತಲೆಯೊಡೆದರೂ ಎದ್ದು ನಗುತ್ತ ಓಡಬೇಕೆಂದು ಆಲೋಚಿಸುತ್ತ, ಕೈ ಜೇಬಿಗೆ ತೂತು ಹತ್ತಿದಲ್ಲೆಲ್ಲ ಅಂಗಿ ಗುಂಡಿಗಳನ್ನು ತುರುಕಿ ಉದ್ರೇಕದಲ್ಲಿರುವ ನನ್ನನ್ನು ಸುಪ್ರು ತಡೆದು, "ಅಪ್ಪಾ, ದೇವರು ನಮಗೇಕೆ ಕಾಣಿಸಿ ಕೊಳ್ಳುವುದಿಲ್ಲ?"-ಎಂದು ಪ್ರಶ್ನಿಸಿದನು. (ಸುಪ್ರಸನ್ನ—ತತ್ಸಮ; ಸುಪ್ರು–ತದ್ಭವ. ಈ ಮಹಾಶಯ ನನ್ನ ಮಗ.)

ಕಟ್ಟಿಕೊಂಡ ಉಸಿರನ್ನು ಒಮ್ಮೆಗೇ ಬಿಟ್ಟುಬಿಟ್ಟೆ. ಸಾವಿರಾರು ವರ್ಷಗಳಿಂದ ಮಹಾ ತಪಸ್ವಿಗಳೂ ಜ್ಞಾನಿಗಳೂ ವಿಜ್ಞಾನಿಗಳೂ ಅಜ್ಞಾನಿಗಳೂ ಕೇಳಿ, ಆಲೋಚಿಸಿ, ತಲೆ ಕರಡಾಗಿ, "ನೇತಿ ನೇತಿ" ಎಂದು ಬಾಯ್ಮುಚ್ಚಿದ ಆ ಮಹಾ ಪ್ರಶ್ನೆಯನ್ನು ಈಗ ಈ ಜಿಜ್ಞಾಸು ಕೇಳುತ್ತಿರುವನು!

ಸುಪ್ರು ಎಂಬೀ ಚಿಕ್ಕ ಮನುಷ್ಯನು ಕೆಲವು ಮಾತುಗಳನ್ನಾಡಲಿಕ್ಕೆ ಆರಂಭಿಸುವ ಮೊದಲೂ ಮತ್ತೆಯೂ ನನ್ನ ಜೀವನದಲ್ಲಿ ಅನೇಕ ಮಹಾ ಸಂಗ್ರಾಮಗಳನ್ನು ತಂದೊಡ್ಡಿದ ಮಹಾ ಪುರುಷನು. ಅಂಬೆಗಾಲಿಡಲು ಕಲಿತ ಕೆಲವೇ ದಿನಗಳೊಳಗೆ ಈ ನರರೂಪೀ ರಾಕ್ಷಸನು, ಪುರುಷತನವ ಹೆಗ್ಗುರುತಾದ ಅತಿಮೌಲ್ಯದ ನನ್ನ ಮೀಸೆಗಳನ್ನು ಮೂರು ಬಾರಿ ಎಳೆದು, ಅವನ ಅಮ್ಮನಿಗೂ ನನಗೂ ಜಗಳ ಉಂಟುಮಾಡಲು ಕಾರಣನಾಗಿದ್ದನು. ಒಮ್ಮೆ ನನ್ನ ಸ್ವಂತ ಮಾವನ ಮೇಲ್ದುಟಿಯ ಎಡಭಾಗದ ಪುಂಜಾ ಜಮೀನಿನ ಬೆಳೆಯನ್ನು ಬೇಕಾಯಿದೆಶೀರವಾಗಿ ಕಿತ್ತು, ಆ ಮಹಾಪ್ರಾಯಂಡ ಪೂಜ್ಯಪಿತಾಮಹನಿಂದ ಧರಣಿಗೆಸೆಯಲ್ಪಟ್ಟು, ಅಂದಿನ ಗೃಹಶಾಂತಿಯನ್ನು ಕೆಡಿಸಿದ್ದನು. ದ್ವಿತೀಯ ಜಾಗತಿಕಸಂಗ್ರಾಮದಲ್ಲಿ, ಸಮುದ್ರಗಳಲ್ಲಿ ದಿನಕ್ಕೆ ಐವತ್ತೋ ಅರುವತ್ತೊ ಹಡಗುಗಳು ಮುಳುಗಿಸಲ್ಪಡುತ್ತಿದ್ದ ಕಾಲದಲ್ಲಿ, ಹಡಗುಗಳಲ್ಲಿ ಬರುವ ವಿಲಾಯಿತಿ ಬಿಸ್ಕೂಟುಗಳನ್ನೆ ಕೇಳಿ, ನನ್ನನ್ನು ಮನೆಯಿಂದ ಹೊರಡಿಸಿದ್ದನು. ನನ್ನ ಶಾಯಿಬಾಟಲಿಯನ್ನು ಕೆಲವು ನೂರು ಬಾರಿ ಮಗುಚಿ ಹಾಕಿ, ಎರಡಂಗುಲ ದಪ್ಪದ ಕೆಲವು ಪುಸ್ತಕಗಳನ್ನು ಕಾಗದ ತಯಾರಿಯ ಪೂರ್ವ ಸ್ಥಿತಿಗೇ ಮಾರ್ಪಡಿಸಿ....ಸಾರಾಂಶವಾಗಿ ಹೇಳುವುದಾದರೆ, ತನ್ನ ಗೃಹವೆಂಬ ಏಕ ಸದಸ್ಯ ಏಕ ಅಧ್ಯಕ್ಷ ನಗರ ಸಭೆಯೊಳಗೆ ಹಲವು ಸಭಾ ತ್ಯಾಗಗಳಿಗೂ ಅಸಭ್ಯ ನುಡಿಗಳಿಗೂ ಕಾರಣನಾಗಿ, ಮಾತಾಡಲು ಕಲಿತ ನಂತರ ತನಗೆ ಅವಶ್ಯವಿಲ್ಲದ ಮತ್ತು ನನ್ನಿಂದ ಉತ್ತರ ಕೊಡಲು ಶಕ್ಯವಿಲ್ಲದ ಪ್ರಶ್ನೆಗಳನ್ನು ಕೇಳಿ ನನ್ನನ್ನು ದಣಿಸುತ್ತಿದ್ದನು. ಅವನ ಅಮ್ಮನು ಈ ಅವತಾರ ಪುರುಷನಿಗಾಗಿ ಹೆಮ್ಮೆ ತಾಳಿ, ದ್ವಾಪರ ಯುಗದಲ್ಲಿ ಶ್ರೀ ಕೃಷ್ಣನು ಜನಿಸಿದ ನಂತರ ಮತ್ತೆ ಈ ಯುಗದ ತನಕ ಶೂನ್ಯವೇ ಇದ್ದು, ಈಗ ತಾನೇ ಕೃಷ್ಣನ ಭಾರತದ ಈ ಮಗು ಜನಿಸಿ, ಇನ್ನು ಇಂಥ ಜನನವು ಮುಂದಿನ ತ್ರೇತಾಯುಗಕ್ಕೇ ಮೀಸಲಾಗಿರಿಸಲ್ಪಟ್ಟಿದೆ ಎಂಬ ಭಾವನೆಯಿಂದಿರುತ್ತಿದ್ದಳು. ಈಗ ಒಂದು ಅಸಾಧಾರಣ ಸಾಹಸದಿಂದ ನನ್ನನ್ನು ನಾನೇ ಬಾಗಿಲಿನ ಹೊರಕ್ಕೆಸೆದುಕೊಳ್ಳುವ ನಿರ್ಧಾರ ಮಾಡಿದ ಕಾಲದಲ್ಲಿ, ಈ ಅವತಾರ ಪುರುಷನು ಆ ಪ್ರಶ್ನೆಯನ್ನು ಕೇಳಿದನು.

"ಅಪ್ಪಾ, ದೇವರು ನಮಗೇಕೆ ಕಾಣಿಸಿಕೊಳ್ಳುವುದಿಲ್ಲ?"

"ಯತ್ರನಾರ್ಯಸ್ತು...." ಎಂದು ಮನುವು ಹೇಳಿರುವನಾದರೂ, "ನಿಜವಾಗಿ ಹೆಂಗುಸರಿದ್ದಲ್ಲಿ ದೇವರು ಕಾಣಿಸಿಕೊಳ್ಳುವುದಿಲ್ಲ" ಎಂಬುದಾಗಿ ಹೇಳಬೇಕೆಂದೆನಿಸಿತು. ಆದರೆ, ಹೆಂಗುಸಾದ ಮೇಲೆ ಬಾಗಿಲಲ್ಲಿ ನಿಂತುದನ್ನು ಕಂಡು, ಆಕೆ ಪ್ರತಿಭಟಿಸಿ ದುರಂತಗಳು ಸಂಭವಿಸಬಹುದೆಂದು ಥಕ್ಕನೆ ಹೊಳೆದು, "ಮಗನೇ!" ಎಂದೆ.

ಸುಪ್ರು ತಲೆಯೆತ್ತಿದನು.

"ಮಗನೇ! ಅವನು ಕಾಣಸಿಕ್ಕಿದರೆ ಜನರು ಮನಸ್ಸಿಗೆ ಹೊಳೆದುದನ್ನೆಲ್ಲ ಬೇಡಿ, ಕಾಡುವರೆಂಬುದರಿಂದ ಅವಿತಿದ್ದಾನೆ! ವಿಶೇಷವಾಗಿ ಹಣಕ್ಕಾಗಿ ಕಾಡುವರೆಂದೇ ಅವನಿಗೆ

(20ನೇ ಪುಟದಿಂದ)

"ಇಲ್ಲಿನ ಚಿಮಿಣಿದೀಪಕ್ಕೆ ಎಣ್ಣೆಯಿಲ್ಲ. ಹೋಗುತ್ತಾ, ಆ ಅಂಗಡಿಯವನಿಂದ ಮೂರು ಕಾಸಿನ ಚಿಮಿಣಿಯೆಣ್ಣೆಯನ್ನಿಷ್ಟು ಕಳುಹಿಸಿಕೊಡಿರಿ. ನೋಡಿ, ಸುಲಭದಲ್ಲಿ ಲಕ್ಷಾಧೀಶನಾಗಲು ಸುಸಂದರ್ಭವೊಂದನ್ನು ನಿಮಗೆ ತಿಳಿಸಿದ್ದೇನೆ. ಕೈನೀಡಿ ಲಕ್ಷ್ಮಿಯನ್ನು ವರಿಸುವ ಪುರುಷಸಿಂಹರಾಗಿರಿ. ಎಂದಾದರೂ ಶ್ರೀಮಂತರು ಒಳ್ಳೇ ಭರವಸೆಯ ಲಾಭಕರವಾದ ವೃತ್ತಿಗೆ ಕೈಹಚ್ಚುವರಾದರೆ, ಇಲ್ಲಿದೆ ಈ ಅಪೂರ್ವಾಲೋಚನೆ"—ಎಂದನು.

ಏಕಾದಶಿಯಂತಹ ಪುಣ್ಯಮಯ ದಿನಗಳಲ್ಲೂ, ಜಾಗರಣೇ ನಿಶಿಯಲ್ಲಿ ಅಲೆದಾಡುವ ಇಂತಹ ಪ್ರೇತಗಳು ಮತ್ತೆಲ್ಲಿಯೂ ನೋಡಸಿಗುವುದುಂಟೇ?" ಎನ್ನುತ್ತ, ಮನೆಗೆ ಮರಳಿದೆನು.

—

ಭಯ!" ಎಂದೆ. ಎದೆಯೊಳಗಿದ್ದದ್ದೇ ಸನಗರಿಯಂದೆ ತಾನಾಗಿ ಹೊರಬಂದಿತ್ತು.

"ಹಣವೆಂದರೇನು?"-ಕೇಳಿದನು ಸಂಪ್ರು.

ಪುನಃ, "ಮಗನೇ!" ಎಂದೆ, ಗದ್ಗದ ಸ್ವರದಿಂದ. "ಹಣವೆಂದರೆ ಹಣದ ತದ್ಭವ!"

ಮೀರೆ, ಒಂದಂಗುಲವೂ ಕದಲದೆ, "ಚಿಕ್ಕ ಮಕ್ಕಳೊಡನೆ ಹಾಗೆ ಮಾತಾಡುವುದೇಕೆ" ಎಂದು ಕೇಳಿದಳು.

"ನಾಲಗೆಯೂ ತಲೆಯೂ ಇರುವ ಪ್ರತಿಯೊರ್ವ ತಂದೆಗೆ, ತಮ್ಮ ಮಕ್ಕಳೊಡನೆ ಮಾತಾಡುವ ಹಕ್ಕೂ ಧೈರ್ಯವೂ ಇದ್ದರೆ, ಖಂಡಿತವಾಗಿಯೂ ಇದಕ್ಕಿಂತ ಹೆಚ್ಚು ಮಾತಾಡುತ್ತಿದ್ದರು" ಎಂದೆ.

"ಹಣವು ಹಣದ ತದ್ಭವವಾಗುವುದು ಹೇಗೆ" ಎಂದು ಕೇಳಿದಳು.

"ಹಣವು ಹಣದ ತತ್ಸಮವಾದುದರಿಂದ"—ಎಂದೆ.

"ಹಣವೆಂದರೇನು?" ಎಂದು ಕೇಳಿದಳು.

"ಜೀವವೆಂಬ ಒಕ್ಕಲು, ಬಲಾತ್ಕಾರದಿಂದ ಹೊರಡಿಸಲ್ಪಟ್ಟ ದೇಹವೆಂಬ ಮನೆ, ಅಥವಾ ಕೈ ಕಾಲುಗಳಿದ್ದರೂ, ಮದುವೆಯಾಗಿ ಮಾರಿಯಲ್ಪಡುತ್ತಿರುವುದರಿಂದ, ಇದ್ದೂ ಇರದಂಥ ದೇಹ"—ಎಂದೆ.

"ಹಣವೆಂದರೇನು?" ಎಂದು ಪ್ರಶ್ನಿಸಿದಳು.

"ಹಣವೆಂದರೆ,—ಒಬ್ಬನಿಗೆ ನೋಡಸಿಕ್ಕಿದರೂ ಹಿಡಿಯ ಸಿಕ್ಕದೆ; ಸಿಕ್ಕಿದುದೇನಾದರೂ ಇದ್ದರೆ ದಕ್ಕದೆ, ಒಬ್ಬನಿಗೆ ಪ್ರೀತಿಯಿಂದ ಸಾಲಕೊಟ್ಟುದು ನೀತಿಯಿಂದ ತಿರುಗಿ ಬಾರದೆ; ಇನ್ನದನ್ನು ನೀನು ಕೊಟ್ಟರೂ ಸೊನ್ನೆ ಎಂಬುತ್ತರ ಸಿಗುತ್ತ; ಅದರ ಹಿಂದೆ ಓಡುವವನಿಂದ ತಾನೂ ಓಡಿ; ಓಡದವನನ್ನು ನೋಡದೆ; ನೋಡುವವನಿಗೆ ನೀಡದೆ; ಆಡಿಸಲ್ಪಟ್ಟವನನ್ನು ಜಾಡಿಸಿ.... ಮೀರಾ, ಅದೊಂದು ಅದ್ಭುತ, ಅನುಪಮ, ಅಮೋಘತರದ ಕೆಟ್ಟ ವಸ್ತು!"—ಎಂದೆ.

ಮೀರೆ, ಬಾಗಿಲ ಬಳಿಯಿಂದ ನಾಲ್ಕಂಗುಲ ಸರಿದು, ಹುಬ್ಬುಗಂಟಿಕ್ಕಿ, "ಜಾತಿಯಿಲ್ಲದ ಮಾತುಗಳನ್ನು ಹೊರಡಿಸುವ ಶಕ್ತಿಯೂ ಅದರಲ್ಲಿದೆ! ನನಗೆ ಒಂದು ರೂಪಾಯಿ ಬೇಕು"—ಎಂದಳು, ನಿರ್ಧಾರವಾಗಿ.

"ನೀನು ಬಾಗಿಲಿಂದ ನಾಲ್ಕಂಗುಲ...." ನಾನು ಬಾಯ್ದೆಗೆದೆ.

"........ ಮತ್ತು ಎಂಟಾಣೆ ಚಿಲ್ಲರೆ" ಎಂದಳು.

"ಸ್ವರಕ್ಷಣೆ,...." ನಾನು ಪುನಃ ಯತ್ನಿಸಿದೆ.

"ನನ್ನ ರವಕೆಗಳು, ಸಪ್ಪುವಿನ ಅಂಗಿಗಳು ಹೊಲಿದ ಮಜೂರಿ ಐದೂ ರೂಪಾಯಿ ನಾಲ್ಕಾಣೆ ಪ್ರತ್ಯೇಕ" ಎಂದಳು.

ನನ್ನ ಮಾತನ್ನು ಅವಳು ಅಲಕ್ಷಿಸಿದ್ದಕ್ಕೆ ನಾನು ಅವಳ ಮಾತನ್ನು ಲಕ್ಷಿಸದೆ, "ಸಾವಿರಾರು ಜನರು ಕೆಲವೇ ನಿಮಿಷಗಳ ಮೊದಲೂ, ಮತ್ತೆ ಕೆಲವು ಸಾವಿರ ಜನರು ಕೆಲವೇ ನಿಮಿಷಗಳ ನಂತರವೂ ಎಂದು ಮೂರನೇ ಯತ್ನಮಾಡಿದೆ.

"ಮತ್ತೆ ಮುಸುರೆಯವಳ ಮುಸುಡಿಗನೆ ಯೇಲು ಮೂರು ರೂಪಾಯಿ" ಎಂದು, ಪ್ರಾಸವಾಗಿ ಹೇಳಿದಳು.

ನಾನೂ ಪ್ರಾಸಕ್ಕೆ ಪ್ರೇರಣೆಗೊಂಡು,–"ಕೊರತೆಯ ಕೊರಗು–ನಗರಸಭೆಯಲ್ಲಿ ನಗೆಯ ನಗಾರಿ–ರಾಜ್ಯಪಾಲರ ರಾಜೀನಾಮೆ–ಹೆಂಡ ಕುಡಿದು ಹೆಂಡತಿಯನ್ನು ಹಾದಿಯಲ್ಲಿ ಹಾಕಿ ಹೊಡೆದು ಜನರಿಂದ ಒದಿಯಲ್ಪಟ್ಟ ಪ್ರಂದನ ಕಾಂದ–ಮುನಿಸಿಪಾಲಿಟಿಗೆ ಮನಸ್ಸಿಲ್ಲದಿದ್ದರೂ ಮುನಿಸೇಕೆ–ಹೀಗೆ, ಜನರೂ ಸಂಸ್ಥೆಗಳೂ ಬರೆವವರೂ ಓದುವವರೂ ಪ್ರಾಸಕ್ಕೆ ಹೊಂದಿಸಿಕೊಂಡು ತಮ್ಮನ್ನೂ ವಿದ್ಯಮಾನಗಳನ್ನೂ ರೂಪಿಸುವ ಈ ಕಾಲದಲ್ಲಿ–'ದಾರದಲ್ಲಿ ದಾರ: ಆದರೂ ದಾರಿಮಾಡಿ ಜಾರಿದ ಧೀರ" ಎಂದು ಪ್ರಾಸಬದ್ಧವಾಗಿಯೇ ಹಾಡಿ ಹಾರುವುದೂ ಅಸಹಜವಲ್ಲ"–ಎನ್ನುತ್ತ ನಗೆತಕ್ಕೆ ಸಿದ್ಧನಾಗುತ್ತಿರಲು,–

—"ನಮಸ್ಕಾರ ಸ್ವಾಮಿ!" ಎನ್ನುತ್ತ, ಪಾಟ್ಲ ಗಂಗಾಧರನು, ಪಾಟ್ಲ ಕೈಯೆತ್ತಿ ಒಂದೇ ಕೈಯಿಂದ ನಮಸ್ಕಾರವಿತ್ತು ಅತ್ತ ಬಂದನು!

ಕಳೆದ ನಾಗರಪಂಚಮಿ ದಿನವೂ, ಆ ಮೇಲೆ ಗೂಳಿಹಬ್ಬದಂದೂ, ಮುಂದೆ ಗಣೇಶಚತುರ್ಥಿ ದಿನವೂ, ಅನಂತರ ಅನಂತನ ವ್ರತದ ದಿನವೂ, ಕೊನೆಯದಾಗಿ ಮಹಾಲಯದ ಕಾಲದಲ್ಲೂ ಅವನ (ಗಂಗಾಧರ, ಪಾಟ್ಲ) ಆಗಮನದ ರೀತಿಯ ಮತ್ತು ಬಾಳೆಹಣ್ಣುಗಳನ್ನೂ ಆ ಮೇಲೆ ಸ್ವಾಲ ಬಾಳೆಹಣ್ಣುಗಳು ಮತ್ತು ಸೀಯಾಳಗಳನ್ನೂ ಕೊಂಡುಕೊಂಡು, ಅಕ್ಟೋಬರದಿಂದ ಪರ್ಜನ್ಯ ವರ್ಗ ಅವನ ಘಟ್ಟ ಆದುದೆ ಅಜ್ಞಾತವಾಸದಲ್ಲಿರುತ್ತಿದ್ದ ನನ್ನ ಯೋಗಕ್ಷೇಮ ವಿಚಾರಿಸುವ ಧ್ವನಿಯನ್ನೂ ಆ ಗಂಗಾಧರನು ಧರಿಸಿಬಂದಿದ್ದನು.

"ಗಂಗಾಧರ ಬಂದಿರುವನೇ?" ಎನ್ನುತ್ತ ಕೋಟೆ ಸಂಕಯ್ಯನೂ ಬಂದವನಾಗಾಯಿತು. "ಅಮ್ಮಾ" ಎನ್ನುತ್ತ, ಹಾಲಿನ ಸುಬ್ಬಿಯೂ ವೀರೆಯನ್ನು ಸಂಬೋಧಿಸಿದ ಸ್ವರ ಕೇಳಿಸಿತು. ಹಲವು ಮುಹೂರ್ತಗಳೋ ಗ್ರಹಗಳೋ ಒಂದುಗೂಡಿದಂತಾಯಿತು. ಎಲ್ಲರೂ ಒಮ್ಮೆ ನಪ್ಪಗಾದಂತೆಯೂ, ಆ ಮೇಲೆ ಗುಜುಗುಜು ಎದ್ದಂತೆಯೂ, ಮತ್ತೆ ಒಬ್ಬನಿನ್ನೊಬ್ಬನ ಮೇಲೆ ಕೋಪಗೊಂಡಂತೆಯೂ ತೋರಿದಾಗಿ, ಯಾರು ಏಕೆ ಬಂದರು ಎಂಬುದನ್ನು ತಿಳಿಯಲು ಕಷ್ಟವೆನಿಸಿ, ಕೊನೆಗೆ ಮಹಾಪ್ರಯತ್ನದಿಂದ ವಿಷಯವು ತಿಳಿಯಾಯಿತು. ವಿಷಯ ಇಷ್ಟು:

ಕೋಟೆ ಸಂಕಪ್ಪನು ಮೇಲ್ಕೋಟೆ ವೆಂಕಟ್ಟನಿಂದ ಮೂವತ್ತು ರೂಪಾಯಿ ಪಡೆಕೊಂಡು ಒಂದು ತಿಂಗಳಾಗಿತ್ತು. ತಾನು ಕೆಳಕೋಟೆ ಶಂಕರಯ್ಯನಿಗೆ ಅಷ್ಟೇ ರೂಪಾಯಿ ಕೊಡಬೇಕಾಗಿದೆ ಎಂದು ವೆಂಕಯ್ಯನ ಮೇಲೆ ಶಂಕಯ್ಯನ ಒತ್ತಾಯವಾಗಿತ್ತು. ಸಂಕದ ಮನೆ ಸಂಕಯ್ಯನ ಸಾಲ ಮರು ಪಾವತಿಗೋಸ್ಕರ ತನ್ನ ಈ ಒತ್ತಾಯವೆಂದು ಶಂಕಯ್ಯನು ಹಠಾ ಒರಡಿದ್ದನಂದೂ, ಬೆಟ್ಟದ ಮನೆ ಬಿಂಕಯ್ಯನು ಸಂಕದ ಮನೆ ಸಂಕಯ್ಯನನ್ನು ತನ್ನ ಮೂವತ್ತು ರೂಪಾಯಿಗಳಿಗಾಗಿ ಕಾಡುತ್ತಿದ್ದರೆ ಮತ್ತು ಬೈಲಂಗಡ್ಡೆ ಬಂಕಯ್ಯನು ಒಂದು ವಿಷಗಳಿಗೆಯಲ್ಲಿ ಬೆಟ್ಟದ ಮನೆ ಬಿಂಕಯ್ಯನನ್ನು 'ಸಾಲ ಮರುಪಾವತಿಮಾಡಲು ಸೋತ ಸುಳ್ಳಗಾರ'ನೆಂದು ಬಯ್ಯುತ್ತಿದ್ದರೆ.... (ಆ ಮೇಲೆ, ಬಂಕಯ್ಯನು ಮೂವತ್ತು ರೂಪಾಯಿ ತೆರಬೇಕಾದ ಸಂತೋಷದ ಸಿಂಕಯ್ಯನಿಗೆ ಸಾಲವಿತ್ತ ಕಳ್ಳಮನೆ ಕುಂಕಯ್ಯ, ಕುಂಕಯ್ಯನ ಮೇಲೆ ಸರಿಯಾಗಿ ಮೂವತ್ತು ರೂಪಾಯಿಗಳಿಗೇ 'ಡಿಮಾಂಡ್ ನೋಟು' ಇರುವ ಹಳ್ಳದ ಮನೆ ಹುಂಕಯ್ಯ, ಹುಂಕಯ್ಯನಿಗೆ ಕೇವಲ ಮೂವತ್ತೇ ರೂಪಾಯಿಗಳ ರಿಜಿಸ್ಟ್ರೀನೋಟೀಸು ಕೊಟ್ಟ ಮೇಲಿನತೋಟ ಮಂಕಯ್ಯ, ಮಂಕಯ್ಯನಿಗ ಕಾಲುಮುರಿಯುತ್ತೇನೆಂದು ಚಪಲಿಕೆಹಾಕಿದ್ದ ಚಪ್ಪಲೀ ತಪ್ಪಲು ತಂಕಯ್ಯ, ತಂಕಯ್ಯನ ಕೊಡೆ ಎಳೆದುಕೊಂಡ ದಪ್ಪನಾಲು ಡೊಂಕಯ್ಯ, ಡೊಂಕಯ್ಯನ ಮೇಲೆ ಬಹಿರಂಗ ರಸ್ತೆಯಲ್ಲಿ ಉಗುಳಿದ ರಸ್ತೇ ಸಂತೆ ರೊಂಕಯ್ಯ....ಎಲ್ಲಾ ಮೂವತ್ತೇ ರೂಪಾಯಿ........ಇತ್ಯಾದಿ,

ಈ ಕತೆಯೋ?

ಗಂಗಾಧರನಿಗೆ ಹಣ್ಣುಕಾಯಿಗಳ ಕ್ರಯ ಕೊಡದ ನಾನು, ನನ್ನಿಂದ ಹಣ ವಸೂಲು ಮಾಡಲು ನಿಂತ ವೀರಿ, ವೀರೆಯೊಡನೆ ಹಣ ಕೇಳಲು ಬಂದ ಹಾಲಿನ ಸುಬ್ಬಿ, ಸುಬ್ಬಿಯನ್ನಟ್ಟಿ ಬಂದ ಹುಲ್ಲಿನ ಸುಬ್ಬಿ, ಸುಬ್ಬನ ಈ ಗಳಿಗೆಯ ವಿಳಾಸವನ್ನು ಬಲು ಕಷ್ಟದಿಂದ ತಿಳಿಕೊಂಡು ಧಾವಿಸಿ ಬಂದ ಸಿಂಪಣ್ಣಶೆಟ್ಟಿ, ಸಿಂಪಣ್ಣಶೆಟ್ಟಿಯ ನೆರಳನ್ನು ನೋಡುತ್ತಲೇ ಕರೆಸಿ ಬಂದ ಬಂಪಣ್ಣಗಟ್ಟಿ, ಕಂಪಣ್ಣಗಟ್ಟಿಯ ವರ್ತಮಾನ ಸಿಕ್ಕ ನಾಗಲೋಟದಿಂದ ಬಂದ ಕಣ್ಣಾಗಟ್ಟಿ....ಇಲ್ಲಿ ಕೂಡ ಪ್ರತಿಯೊಬ್ಬರು ತರಬೇಕಾದುದು ಮೂವತ್ತೇ ರೂಪಾಯಿ, ಪ್ರತಿಯೊಬ್ಬರಿಗೂ ಬರಬೇಕಾದುದೂ ಮೂವತ್ತೇ ರೂಪಾಯಿ....ಇತ್ಯಾದಿ.

ಎಷ್ಟು ಎಲ್ಲಿ ಈ ಮೂವತ್ತು ರೂಪಾಯಿಗಳ ಸರಪಣಿಯು ಮೊದಲಗೊಂಡು ಆರಂಭವಾಯಿತು, ಎಷ್ಟು ಎಲ್ಲಿ ತನಕ ಸರಪಣಿ ಮುಂದುವರಿದಿದೆ,–ಎಂಬುದನ್ನು ಹೇಳುವ ಗಣಿತಜ್ಞನು ಅಥವಾ ಅಜ್ಞಗಣಕನು ಈ ಲೋಕದಲ್ಲಿರುವುದು ಸಂದೇಹಕರ. ಕನ್ನಡಿ ಹಿಡಿದಾಗ ಏನು ಮತ್ತು ಎಷ್ಟು ಕಾಣುವುದೆಂದು ನೀವೊಮ್ಮೆ ಯತ್ನಿಸಿರಬಹುದು. ಕಂಡುದೇನೆಂಬುದೂ ಸ್ಪಷ್ಟವಿಲ್ಲ; ಎಷ್ಟು ಎಂಬುದು ಎಣಿಕೆಮಾಡಲ್ಪಡಲೇ ಇಲ್ಲ. ಇದಕ್ಕೇ 'ಅನಂತ' ಎನ್ನುತ್ತಾರೆ.

"ಏನಿದು ಆಟ। ರಸಿಕರ ಕೂಟ।" ಎಂದು ಕಾಕಸ್ವರದಲ್ಲಿ ಹಾಡುತ್ತ ಕೇಣು ಬಂದನು.

ಮೂವತ್ತು ರೂಪಾಯಿಗಳ ವಿಚಿತ್ರ, ಸಮಸ್ಯಾತ್ಮಕ ಗಣಿತವನ್ನು ಅವನಿಗ ಹೇಳಿದೆ. ಕೇಣುವು ಎರಡೂ ಕಿವಿಗಳಿಗೆ ಎರಡು ಬೆರಳುಗಳನ್ನೊತ್ತಿ ಕಣ್ಮುಚ್ಚಿ ಆಲಿಸಿದನು. ನಾನು ನಿಲ್ಲಿಸಿದ ಮೇಲೆ ನಿಲ್ಲಿಸೆಂದು ಕೈಸನ್ನೆ ಮಾಡಿ, ಎಲ್ಲರನ್ನುದ್ದೇಶಿಸಿ ನಾಲ್ಕು ಮಾತುಗಳನ್ನಾಡಿದನು:

"ಈ ಲೋಕವು ವಿಚಿತ್ರ, ಆದರೂ ವಿಚಿತ್ರವಲ್ಲ. ಎಲ್ಲವೂ ಗಣಿತದ ನಿಯಮದಂತೆ ಇದರೂ ಸಮಸ್ಯೆಯಲ್ಲ. ನಿನಗೆ ಮೂವತ್ತು ರೂಪಾಯಿಗಳನ್ನು ಕೊಡಬೇಕಾಗಿ...

ಸಿಂಗಲೀಕನು ("ಅಲ್ಲ-ಐರಾವತ" ಎಂದು ತಿದ್ದಿ ಹೇಳಿ) ನಿನಗೆ ಮರತ್ ಕೊಟ್ಟದ್ದರೆ, ಈ... ಗಣಿತ ಸಮಸ್ಯೆಯನ್ನು ಇನ್ನು ಮೂವತ್ತು ರೂಪಾಯಿಗಳಲ್ಲಿ ತೀರಿಸಬಹುದಾಗಿತ್ತು. ಈಗ ಅರುವತ್ತು ರೂಪಾಯಿಗಳಿದ್ದಲ್ಲಿ, ನಿಮಗೊಂದು ದೊಡ್ಡ ಐದು ಜಾಲಿಬುಕ್ಕೀ ತೋರಿಸಬಲ್ಲೆ" ಎಂದರು.

ಯಾರೊಡನೆಯೂ ಅರುವತ್ತು ರೂಪಾಯಿಗಳಿಲ್ಲವೆಂದು ಏಕಕಂಠದಿಂದ ಸಾರಲಾಯಿತು.

"ಸ್ವ. ಅವರಿಗೆ, ಒಬ್ಬೊಬ್ಬರು ಐದೈದೇ ರೂಪಾಯಿ ಕೊಟ್ಟರೆಂದು ಎಣಿಸೋಣ, ಆ ಕೂಡಲೇ ಪ್ರತಿಯೊಬ್ಬರಿಗೆ ಮೂವತ್ತು ರೂಪಾಯಿಗಳಂತೆ ಕೊಡಬಲ್ಲೆ"—ಎಂದನು.

ಈ ಆನಂದಕರ ಆಶ್ಚರ್ಯವನ್ನು ನೋಡುವ ಸಲುವಾಗಿ ಎಲ್ಲರೂ ಐದೈದು ರೂಪಾಯಿಗಳನ್ನಿತ್ತವೆಂದು ಭಾವಿಸೆಂದರು. ಒಟ್ಟು ಅರುವತ್ತೈದು ರೂಪಾಯಿಗಳಲ್ಲಿ, ಐದನ್ನು ಕೇಣು ಪ್ರತ್ಯೇಕಿಸಿಟ್ಟು, ಉಳಿದ ಅರುವತ್ತನ್ನು ನನ್ನ ಕೈಗೆ ಹಾಕಿ, (ಐದೈದರ ಚೀಟುಗಳು-ನಿಜವಾದ ರೂಪಾಯಿಗಳಲ್ಲಿ) "ಮೂವತ್ತನ್ನು ಪಾಟ್ಲ ಗಂಗಾಧರನಿಗೂ, ಮೂವತ್ತನ್ನು ನಿನ್ನ ಯಜಮಾನನಿಗೂ

“ಕಲೆಯಲ್ಲೂ ಕೈಗಾರಿಕೆಗಳಲ್ಲೂ ನಾವು ವಿದೇಶೀಯರಿಂದ ಕಲಿವಂಥದ್ದು ಬಹಳವಿದೆ!”

‘‘ಕಲಾಭವನ’’ದವರ ಸತ್ಕಾರಕೂಟದಲ್ಲಿ ಶ್ರೀ| ವಿಠೋಬ ನಾಗ್ವೇಕರರ ಭಾಷಣ

“ವಿಜ್ಞಾನ ಬಹುವಿಧವಾಗಿ ಮುಂದಡಿ ಯಿಟ್ಟಿದೆ; ಅದರ ಉಪಯೋಗವು. ಬಾಂಗ್ ಕೋಕ್‌ದಿಂದ ಅಮೆರಿಕದ ವರೆಗೆ, ಯುರೋಪಿನಿಂದ ಯುನೈಟೆಡ್ ಕಿಂಗ್ಡಮ್ ವರೆಗೆ— ಎಲ್ಲ ರಂಗಗಳಲ್ಲಿ ಎದ್ದು ಕಾಣುತ್ತಿದೆ. ಸಣ್ಣ ಪುಟ್ಟ ಕೈಗಾರಿಕೆಗಳಲ್ಲಾಗಲಿ ಬೃಹತ್‌ಪ್ರಮಾಣದ ಉದ್ಯಮಗಳಲ್ಲಾಗಲಿ,—ಜಪಾನು, ಇಂಗ್ಲಾಂಡು, ಅಮೆರಿಕಗಳು ಬಹಳವಾಗಿ ಪ್ರಗತಿಹೊಂದಿವೆ—”

—ಎಂಬುದಾಗಿ, ಮಂಗಳೂರಿನ ಶ್ರೀ| ವಿಠೋಬ ನಾಗ್ವೇಕರ್. ಬಿ.ಕೊಮ್. (ಕೋಮಲಾ ಸ್ವೀಟ್ಸ್ ಸಂಸ್ಥಾಪಕರು ವ್ಯವಸ್ಥಾಪಕರು ಹಾಗೂ ಸಂಚಾಲಕರು), ತಾ. ೨೫-೧೦-೭೦ನೇ ರವಿವಾರ, ಮೋಹಿನಿ ವಿಲಾಸದಲ್ಲಿ ಮಂಗಳೂರಿನ ಕಲಾಭವನ ರಿಜಿಸ್ಟರ್ಡ್ ಕಲಾ ಸಂಸ್ಥೆಯವರು ಏರ್ಪಡಿಸಿದ್ದ ಸತ್ಕಾರಕೂಟದಲ್ಲಿ, ಕಲಾಸೇವಕರನ್ನುದ್ದೇಶಿಸಿ ಭಾಷಣಮಾಡುತ್ತ ಹೇಳಿದರು.

ಜಪಾನಿನ ಒಸಾಕಾ ಮಹಾನಗರದಲ್ಲಿ ಜರಗಿದ “ಎಕ್ಸ್‌ಪೋ-೭೦” ಜಾಗತಿಕ ಪ್ರದರ್ಶನಕ್ಕೆ ತೆರಳಿದ ಶ್ರೀ| ನಾಗ್ವೇಕರರು, ತಾವು ಬಾಂಗ್‌ಕೋಕ್, ಹೋಂಗ್‌ಕೊಂಗ್, ಟೋಕಿಯೋ, ಎಕ್ಸ್‌ಪೋ-೭೦ (ಒಸಾಕಾ) ಹೊನಲುಲು, ಲೊಸ್ ಏಂಜಲ್ಸ್ ಮೊದಲಾದ ಕಡೆಗಳಿಗೆ ಪ್ರವಾಸಮಾಡಿ, ಪ್ರತ್ಯಕ್ಷ ಕಂಡುದನ್ನು ತಮ್ಮದೇ ಆದ ಲಲಿತಶೈಲಿಯಲ್ಲಿ ವಿವರಿಸುತ್ತ, ಎಕ್ಸ್‌ಪೋದಲ್ಲಿ ಸ್ವಯಂ ಸೇವಕಿಯರನ್ನಾರಿಸಿದ ಅವರ ಜಾಣ್ಮೆ-ತಮ್ಮ ರಾಷ್ಟ್ರದ ಬಗ್ಗೆ ಇತರ ರಾಷ್ಟ್ರಗಳಿಗೆ ಪ್ರಸನ್ನತೆಯುಂಟಾಗಿ ಉತ್ತಮಾಭಿಪ್ರಾಯ ದೊರೆಯಬೇಕೆಂಬ ಜಪಾನೀಯರ ಕಾಂಕ್ಷೆ ಹಾಗೂ ಯತ್ನಗಳು, ಹವಾನಿಯಂತ್ರಿತ ಜಾರು ಮೆಟ್ಟಲುಗಳ ಮೈಲುಗಟ್ಟಲೆ ಉದ್ದದ ಪಥದ ಮೂಲಕ ಕೆಲವೇ ಗಂಟೆಗಳಲ್ಲಿ ಎಕ್ಸ್‌ಪೋ ಮಹಾಪ್ರದರ್ಶನವನ್ನು ಸಂದರ್ಶಕರಿಗೆ ತೋರಿದ ರೀತಿ, ಅಲ್ಲಿಯ ಸೇವಕಸೇವಕಿಯರು ಅನುಕೂಲ-ಮಿತವ್ಯಯದ ಹೊಟೇಲುಗಳಿಗೆ ತಮ್ಮನ್ನು ದಿಗ್ದರ್ಶಿಸಿದ ಸೌಜನ್ಯ, ಮುಂತಾದುವೆಲ್ಲವನ್ನೂ ಶ್ರೀ| ನಾಗ್ವೇಕರರು ಚಲೋದಾಗಿ ವರ್ಣಿಸಿದರು.

ಅಮೆರಿಕದ ಥಿಯೇಟರುಗಳಿರದಲ್ಲಿ ತಾವು ಕಂಡ ಸಂಗೀತ-ನೃತ್ಯರೂಪಕಗಳ ವಿವರಣೆಯಿಯುತ್ತ, ಕ್ಷಣಾರ್ಧದಲ್ಲಿ ರಂಗಮಂಚವು ಕೆಳಗೊತ್ತಲ್ಪಟ್ಟು ದೃಶ್ಯ ಬದಲಾವಣೆಯಾಗುವ ವಿಧಾನ, ಒಂದು ದೃಶ್ಯದಿಂದ ಇನ್ನೊಂದರ ಅಂತರದಲ್ಲಿ ಅವಿರತವಾಗಿ ಹರಿದುಬರುವ ಸಂಗೀತ, ನೃತ್ಯಗಳಿಗೆ ಆಯ್ಕೆಮಾಡಲ್ಪಟ್ಟ ಸುಂದರ ನರ್ತಕಿಯರಲ್ಲಿ ಏಕರೂಪತೆ-ಏಕಚಲನೆಗಳ ಸೊಬಗು—ಇದನ್ನು ಬಣ್ಣಿಸುತ್ತ. “ಡಿಸ್ನೇಲೇಂಡ್” ದರ್ಶನದ ತನ್ನ ಚಿರಸ್ಮರಣೀಯ ಅನುಭವಗಳನ್ನು ಹೇಳಿ, ಭಾರತದಲ್ಲಿ ಇಂಥ ಸ್ಥಾಯಿ ಮಹಾಪ್ರದರ್ಶನಗಳು ಅವಶ್ಯವೆನ್ನುತ್ತ, ಅವೆಲ್ಲ ದೇಶಗಳಿಂದ-ಚಿಕ್ಕ ಬಾಂಗ್‌ಕೊಕ್ ನಿಂದ ಕೂಡ-ನಾವು ಕಲಿಯಬೇಕಾದ ಸ್ವಚ್ಛತೆ-ಶಿಸ್ತುಗಳು ಅನೇಕ—ಎಂದರು.

ಅಧ್ಯಕ್ಷಸ್ಥಾನದಿಂದ ಮಾತಾಡುತ್ತ, ಕಲಾಭವನದ ಅಧ್ಯಕ್ಷ ಶ್ರೀ| ಮಧುಸೂದನ ಡಿ. ಕುಶೆಯವರು (ಶ್ರೀ| ಕುಶೆಯವರೂ ಕೆಲ ತಿಂಗಳ ಹಿಂದೆ ಪ್ರಪಂಚಪರ್ಯಟನ ಮಾಡಿ ಮರಳಿದವರು) ಶ್ರೀ| ನಾಗ್ವೇಕರರ ಉಪನ್ಯಾಸಕ್ಕೆ ಆಧಾರ ಸೂಚಿಸಿದರು.

ಆರಂಭದಲ್ಲಿ, ಕಲಾಭವನದ ಜತೆಕಾರ್ಯದರ್ಶಿ ಶ್ರೀ| ಎಂ. ಕೃಷ್ಣಗೋಪಾಲರವರು ಅಧ್ಯಕ್ಷರಿಗೂ ಮುಖ್ಯ ಅತಿಥಿಯವರಿಗೂ ಆಸನಸ್ವೀಕಾರಮಾಡುವಂತೆ ಕೇಳಿಕೊಂಡ ನಂತರ, ಅಧ್ಯಕ್ಷರು ಶ್ರೀ| ನಾಗ್ವೇಕರರಿಗೆ ಪುಷ್ಪಹಾರತೊಡಿಸಿದರು. ಶ್ರೀ| ಕಂಡ್ಲಿ ವಾಸುದೇವ ಶೆಣೈಯವರು ಸ್ವಾಗತಿಸುತ್ತ, ಕಲಾಭವನದವರು ಈ ವರ್ಷ, ಕಲೆಯ ವಿಷಯವಾಗಿ ಉಪನ್ಯಾಸಮಾಲೆಯನ್ನು ಕ್ರಮಿಸುವ ಕಾರ್ಯಕ್ರಮವಿಟ್ಟುಕೊಂಡಿದ್ದಾರೆಯೆಂದು ಹೇಳಿದರು. ಅಧ್ಯಕ್ಷ ಭಾಷಣಾನಂತರ ಜತೆಕಾರ್ಯದರ್ಶಿ ಶ್ರೀ| ಎಸ್. ಆರ್. ಬಾಲಗೋಪಾಲರವರು ಧನ್ಯವಾದಗಳನ್ನಿತ್ತರು.

* * * *

ಮಂಜೇಶ್ವರದಲ್ಲಿ ಶ್ರೀ ಕಾಶೀಮಠಾಧೀಶರ ದಿಗ್ವಿಜಯೋತ್ಸವ

ಮಂಜೇಶ್ವರದಲ್ಲಿ, ಈ ವರ್ಷ ಚಾತುರ್ಮಾಸ ದೀಕ್ಷೆ ವಹಿಸಿದ್ದ ಶ್ರೀ ಕಾಶೀಮಠಾಧೀಶ ಶ್ರೀಮತ್ ಸುಧೀಂದ್ರತೀರ್ಥ ಸ್ವಾಮಿಯವರ ದಿಗ್ವಿಜಯೋತ್ಸವವು, ತಾ. ೨೫-೧೦-೭೦ನೇ ರವಿವಾರ ರಾತ್ರೆ, ಅತ್ಯಂತ ವಿಜೃಂಭಣೆಯಿಂದ ನೆರವೇರಿತು. ಊರಪರವೂರ ಸ್ವಸಮಾಜದ ಹಲವು ಬಾಂಧವರು ಭಾಗವಹಿಸಿದ್ದು, ನೂರಾರು ದೀಪಗಳಿಂದಲಂಕೃತವಾದ ವೀಥಿಗಳಲ್ಲಿ ಸಾಲಂಕೃತ ವಾಹನದಲ್ಲಿ ಶ್ರೀಶ್ರೀಯವರು ವಿರಾಜಮಾನರಾಗಿ, ಅಲ್ಲಲ್ಲಿ ನೆರೆದಿದ್ದ ಶಿಷ್ಯವರ್ಗದವರಿಗೆ ಫಲಮಂತ್ರಾಕ್ಷತೆಗಳನ್ನಿತ್ತು ಹರಸಿದರು.

ಶಿವಮೊಗ್ಗದಲ್ಲಿ ಶ್ರೀ ಕೈವಲ್ಯಮಠಾಧೀಶರು

ಶಿವಮೊಗ್ಗದಲ್ಲಿ, ಗೌಡಸಾರಸ್ವತ ಬ್ರಾಹ್ಮಣ ಸಮಾಜದವರ ಕಲ್ಯಾಣಮಂದಿರದಲ್ಲಿ ಚಾತುರ್ಮಾಸ ದೀಕ್ಷೆ ವಹಿಸಿದ್ದ ಶ್ರೀ ಕೈವಲ್ಯಮಠಾಧೀಶರ ಸನ್ನಿಧಿಯಲ್ಲಿ, ಕಳೆದ ಮೂರು ತಿಂಗಳಿಂದಲೂ ನಿತ್ಯವೂ ಭಜನೆ, ಪಾರಾಯಣ, ಪ್ರವಚನ, ಸಂಗೀತಾದಿ ಕಾರ್ಯಕ್ರಮಗಳು ನಡೆಯುತ್ತಿವೆ. ಶ್ರೀ ಶ್ರೀಯವರು ಈ ವರ್ಷ ಇಲ್ಲಿ ಮೊಕ್ಕಾಂ ಮಾಡಿರುವುದರಿಂದ ಗೌ| ಸಾ| ಬ್ರಾಹ್ಮಣ ಸಮಾಜದವರಲ್ಲಿ ಅಧಿಕ ಉತ್ಸಾಹವೂ, ಧಾರ್ಮಿಕ ವಿಷಯಗಳ ಬಗೆಗೆ ಹೆಚ್ಚಿನ ಒಲವೂ ತೋರಿಬರುತಿದ್ದು, ಶ್ರೀ ಸನ್ನಿಧಿಯಲ್ಲಿ ಗಣೇಶ ಚತುರ್ಥಿ ಸಮಾರಂಭವೂ ಎಂದಿಗಿಂತ ಹೆಚ್ಚಿನ ವೈಭವದಿಂದ ನೆರವೇರಿತ್ತು. ಮಂಗಳೂರು, ಮುಂಬಯಿ ಕಡೆಗಳಿಂದ ಭಜನಾಮಂಡಲಿಗಳು ಬಂದು ಸೇವೆಯೊಪ್ಪಿಸಿದ್ದುವು. ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳೂ ನೆರವೇರಿವೆ.

ಅಂಚೆ-ತಂತಿ ಸಲಹಾಸಮಿತಿಗೆ ಶ್ರೀ| ಕೆ. ಪಿ. ಕಸ್ತೂರಿಯವರು ಸದಸ್ಯರಾಗಿ

ಮೈಸೂರು ಸರ್ಕಲ್, ಪ್ರಾದೇಶಿಕ ಪೋಸ್ಟ್ ಎಂಡ್ ಟೆಲಿಗ್ರಾಫ್ಸ್ ಸಲಹಾ ಸಮಿತಿಯ ಸದಸ್ಯರಾಗಿ, ಕೆನರಾ ಚೇಂಬರ್ ಒಫ್ ಕೊಮರ್ಸ್ ಎಂಡ್ ಇಂಡಸ್ಟ್ರಿಯವರು, ಮೆ| ಪಿ. ವಿ. ಪೈ ಎಂಡ್ ಕೋ-ಮಂಗಳೂರು ಈ ಸಂಸ್ಥೆಯ ಶ್ರೀ| ಕಸ್ತೂರಿ ಕಮಲಾಕ್ಷ ಪೈಯವರನ್ನು ನಾಮಕರಣಮಾಡಿರುವರು.

(೨೩ನೇ ಪುಟದಿಂದ)

ಕೊಡು. ಅವರು ತಮ್ಮ ಪಾಲಿಗರಿಗೆ ಕೊಡುತ್ತ ಹೋಗಲಿ” ಎಂದನು.

ಏನದ್ಭುತ! ನಾನು ಮೂವತ್ತು ರೂಪಾಯಿಗಳನ್ನು ಗಂಗಾಧರನಿಗ ಕೊಡುತ್ತಲೇ, ಗಂಗಾಧರನು ಕೋಟಿ ಸಂಕಯ್ಯನಿಗೂ, ಕೋಟಿ ಸಂಕಯ್ಯನು ಮೇಲ್ಕೊಳಿ ವೆಂಕಯ್ಯನಿಗೂ, ವೆಂಕಯ್ಯನು ಕಂಕಯ್ಯನಿಗೂ, ಕಂಕಯ್ಯನು ಸುಂಕಯ್ಯನಿಗೂ........ಅದೇ ರೀತಿ ಅನಂತ ತತ್ವ.

ಇತ್ತ—ಮಾರೆ ಸುಬ್ಬಿಗೆ, ಸುಬ್ಬಿ ಸುಬ್ಬನಿಗೆ, ಸುಬ್ಬ ಸಿಂಪಣ್ಣನಿಗೆ, ಸಿಂಪಣ್ಣ ಕಣ್ಣಾಕುಟ್ಟಿಗೆ........ಪುನಃ ಅದೇ ಅನಂತ ತತ್ವ.

ಎಲ್ಲರಿಗೂ ಮೂವತ್ತು ರೂಪಾಯಿಗಳಂತೆ ಸಿಕ್ಕಿತು, ಮೂವತ್ತು ರೂಪಾಯಿಗಳಂತೆ ತೆತ್ತು ಸಾಲ ಸಂದಾಯ ಮಾಡಿದರು. ಎಲ್ಲರೂ ಹರ್ಷಚಿತ್ತರಾದರು, ಎಲ್ಲರೂ ಋಣಮುಕ್ತರಾದರು. ಐನ್‌ಸ್ಟೈಯಿನನ ‘ರಿಲೇಟಿವಿಟಿ’ ತತ್ವ ಮೊದಲಾದುವುಗಳಿಂದ ತಲೆಕೆರಡು ಮಾಡಿಕೊಳ್ಳುವ ಅವಶ್ಯಕತೆಯಿಲ್ಲದ ‘ಶೀಣುಗಣಿತ’ವು ಅರುವತ್ತು ರೂಪಾಯಿಗಳನ್ನು ಮೂವತ್ತರಂತೆ ಎಲ್ಲರಿಗೂ ಹಂಚುವಂತೆ ಮಾಡಲು ಈಗ ತಾನು ಅರುವತ್ತರಿಂದ ಎರಡು ಮೂವತ್ತುಗಳನ್ನು ಮಾಡಿರುವುದಾದರೂ ವಾಸ್ತವವಾಗಿ ಎರಡೇ ಮೂವತ್ತು ಇರುತ್ತದೆ ಮತ್ತು ಆ ಮೂವತ್ತೂ—ಮೂವತ್ತು ಕೋಟಿ ಬಾರಿ ಅತ್ತಿತ್ತ ಹೋದರೂ ಅಷ್ಟೂ ಜನರೊಡನೆ ಇಲ್ಲದೆ ಇದ್ದು, ಇದ್ದೂ ಇಲ್ಲದೆ ಮೂವತ್ತೇ ಆಗಿರುತ್ತದೆಂದು ಗಿರ್ರನೆ ತಲೆ ತಿರುಗುವಂತೆ ಹೇಳಲು,—

—ಥಕ್ಕನೆ ನನ್ನ ಚಿರಜೀವಿಯ ನೆನಪಾಗಿ ಅವನನ್ನು ಕರೆದು ಮಮತೆಯಿಂದ, “ಮಗನೇ, ನೋಡು. ದೇವರು ಎಲ್ಲ ಕಡೆಗಳಲ್ಲೂ ಇದ್ದಾನೆ ಮತ್ತು ಇಲ್ಲ, ಕಾಣಿಸುತ್ತಾನೆ ಮತ್ತು ಇಲ್ಲ. ಅಂತೂ ದೇವರು ಅಂದರೆ ಅನಂತ: ಅನಂತ ಎಂದರೆ ಈಗ ನೋಡಿದೆಯಲ್ಲಾ —ಮುಗಿಯದ ಸರಪಣಿ. ಹಣದ ಸಮಸ್ಯೆಯೂ ಸಮಸ್ಯೆಯೆಹುದು, ಅದರೂ ಅಲ್ಲ. ಸಾಲ ಪಡಕೊಂಡವ ಮತ್ತು ಸಾಲಿಗ ಎಂಬವರು ಇಬ್ಬರೆಂದು ಕಾಣಿಸಿದರೂ ಅದು ಬರೇ ಭ್ರಾಂತಿ....” ಎನ್ನುತ್ತಿರಲು,—

ಆ ವಾಮನ ಮೂರ್ತಿಯು (ಸುಪುತ್ರ), ಅಗ ತಾನೆ ತಾಯಿಯಿಂದ ಪಡೆದ ಮಿಠಾಯಿ(ಪೆಪ್ಪರ್)ಯನ್ನು ಬಾಯಿಗೆ ಹಾಕಿ, ನನ್ನನ್ನು ಲಕ್ಷಿಸದೆ ನಡೆದು ಹೋದನು ಎಂಬಲ್ಲಿಗೆ—“ಸಾಲ ಮತ್ತು ಸಾಲಿಗರು” ಎಂಬೀ ವೃತ್ತಾಂತ ಮುಗಿದುದು.

....೦೦೦೦೦....

ದಿ| ಬೇಲಗದ್ದೆ ಅಪ್ಪಯ್ಯ ಸ್ಮಾರಕ ಪರ್ಯಾಯ ಫಲಕ

ಕಲಾಭವನ (ರಿ) ಮಂಗಳೂರು ಇವರ ಕಾರ್ಯಕಾರಿ ಸಮಿತಿಯ ಸಭೆಯು ತಾ. ೨೬ರಂದು ಸಾಯಂಕಾಲ ಭವನದ ಕಾರ್ಯಾಲಯದಲ್ಲಿ ಶ್ರೀ| ಕುಡ್ವಿ ವಾಸುದೇವ ಶೆಣೈಯವರ ಅಧ್ಯಕ್ಷತೆಯಲ್ಲಿ ಜರಗಿದಾಗ, ಜೈಹಿಂದ್ ನಾಟಕ ಸಭಾ, ಜಪ್ಪು ಇವರು ಸ್ಪರ್ಧೆಯಲ್ಲಿ ವಿತರಣೆಗೆಂದು ನೀಡಿರುವ ಪ್ರಸಿದ್ಧ ನಾಟಕಕರ್ತ–ದಿಗ್ದರ್ಶಕ–ನಟ ದಿ| ಬೇಲಗದ್ದೆ ಅಪ್ಪಯ್ಯ ಸ್ಮಾರಕ ಪರ್ಯಾಯ ಫಲಕವನ್ನು ಕೃತಜ್ಞತಾಪೂರ್ವಕ ಸ್ವೀಕರಿಸಿ ಅದನ್ನು ಸ್ಪರ್ಧೆಯಲ್ಲಿ ಉತ್ತಮ ದಿಗ್ದರ್ಶನಕ್ಕಾಗಿ ನೀಡುವುದೆಂದಾಯಿತು: ದಿವಂಗತ ಅನಂತಪದ್ಮನಾಭರಾಯರ ಹೆಸರಲ್ಲಿ ನಗರದ ಕೋಕಿಲಾ ಆರ್ಟ್ಸ್‌ನವರು ಕಳೆದ ವರ್ಷ ಕೊಟ್ಟಂತೆ ಸ್ಪರ್ಧೆಯಲ್ಲಿ ಉತ್ತಮ ಬಾಲನಟನಿಗೆಂದು ಈ ವರ್ಷವೂ ಇತ್ತ ಬಹುಮಾನವನ್ನು ಆದರಪೂರ್ವಕ ಸ್ವೀಕರಿಸಲಾಯಿತು. ಈ ಮೊದಲಿನ ವರ್ಷಗಳಂತೆ ಈ ವರ್ಷವೂ 'ಕಲಾಕುಂಜ' ಸ್ಮೃತ್ಯಂಕವನ್ನು ಪ್ರಕಟಿಸುವರೆ ಅವಶ್ಯವುಳ್ಳ ಸಿದ್ಧತೆಗಳಿಗೆ ಕೂಡಲೇ ತೊಡಗುವುದೆಂದಾಯಿತು. ಕೊನೆಯಲ್ಲಿ ಕಾರ್ಯದರ್ಶಿ ಶ್ರೀ| ಎಸ್. ಆರ್. ಬಾಲಗೋಪಾಲರು ಧನ್ಯವಾದಗಳನ್ನಿತ್ತರು.

ಮಂಗಳೂರು ಬಂದರದ ಪ್ರಥಮ ಹಂತ

ಪಣಂಬೂರಿನಲ್ಲಿ ನಿರ್ಮಾಣವಾಗುತ್ತಿರುವ ೨೪.೬೦ ಕೋಟಿ ರೂಪಾಯಿ ವೆಚ್ಚದ ಸರ್ವಋತು ಬಂದರದ ಮೊದಲ ಹಂತದ ಕೆಲಸ ೧೯೭೨ರೊಳಗೆ ಸಿದ್ಧವಾಗುವುದೆಂದು ನಿರೀಕ್ಷಿಸಲಾಗಿದೆ. ಮೊದಲ ಹಂತದ ಕೆಲಸಕ್ಕೆ ೨೧.೯೦ ಕೋಟಿ ರೂಪಾಯಿ ತಗಲುವುದೆಂದು ತಿಳಿಯಲಾಗಿದೆ. ಹಾಸನ–ಮಂಗಳೂರು ಮೀಟರ್‌ಗೇಜ್ ರೈಲ್ವೇ ಕೆಲಸವೂ ಭರದಿಂದ ಸಾಗುತ್ತಿದ್ದು ಬಂದರದ ಮೊದಲ ಹಂತದ ಕೆಲಸ ಮುಗಿಯುವ ವೇಳೆಗೆ ಅದರ ಕೆಲಸ ಪೂರ್ಣ ಮುಗಿದು ರೈಲು ಓಡಾಟಕ್ಕೆ ಆರಂಭವಾಗುವುದೆನ್ನಲಾಗಿದೆ.

ಎನ್. ಸಿ. ಸಿ. ಶಿಬಿರ

ಕಾರ್ಕಳ ಭುವನೇಂದ್ರ ಕೊಲೇಜ್ ವಠಾರದಲ್ಲಿ ಅಕ್ಟೋಬರ್ ೧೭ರಂದು ಆರಂಭವಾದ ಎನ್. ಸಿ. ಸಿ. ಶಿಬಿರದ ಸಮಾರೋಪ ತಾ. ೨೬ರಂದು ನಡೆಯಿತು. ಡಾ| ಟಿ. ಎಂ. ಎ. ಪೈಯವರು ಪ್ರಧಾನ ಅತಿಥಿಯಾಗಿದ್ದರು.

ಶ್ರೀ| ಮಂಜೇಶ್ವರ ಕೇಶವಭಕ್ತರ ನಿಧನ

ದಿ| ಮಂಜೇಶ್ವರ ಸುಬ್ರಾಯ ಭಕ್ತರ ಏಕಮಾತ್ರ ಪುತ್ರ ಶ್ರೀ| ಕೇಶವಭಕ್ತರವರು ಅ. ೨೯ನೇ ಗುರುವಾರ ಸಾಯಂಕಾಲ ನಿಧನಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ. ಮರಣಕಾಲದಲ್ಲಿ ಅವರ ವಯಸ್ಸು ೫೭.

ಕರ್ನಾಟಕ ಪ್ರಾಂತೀಕರಣ ಸಮಿತಿ

ಕರ್ನಾಟಕ ಪ್ರಾಂತೀಕರಣ ಸಮಿತಿಯ ಮಹಾಸಭೆಯು ತಾ. 25ರಂದು ಬಡಿಯಡ್ಕದಲ್ಲಿ ಡಾ| ಪಿ. ಎಸ್. ಶಾಸ್ತ್ರಿಗಳ ಆಸ್ಪತ್ರೆ ವಠಾರದಲ್ಲಿ ಸೇರಿದಾಗ ಶ್ರೀ| ಬಿ. ಎಸ್. ಕಕ್ಕಿಲ್ಲಾಯರನ್ನು ಅಧ್ಯಕ್ಷರನ್ನಾಗಿಯೂ, ಶ್ರೀ| ಕಳ್ಳಿಗೆ ಮಹಾಬಲಭಂಡಾರಿ ಮತ್ತು ಶ್ರೀ| ಯು. ಪಿ. ಕುಣಿಕುಳ್ಳಾಯರನ್ನು ಉಪಾಧ್ಯಕ್ಷರುಗಳನ್ನಾಗಿಯೂ ಶ್ರೀ| ಕಯ್ಯಾರ ಕಿಂಞಣ್ಣ ರೈಯವರನ್ನು ಕಾರ್ಯದರ್ಶಿಯನ್ನಾಗಿಯೂ ಆರಿಸಲಾಯಿತು. ಶ್ರೀಗಳಾದ ವೈ. ಎಸ್. ವಿ. ಭಟ್ ಮತ್ತು ಕೆ. ಶ್ಯಾಮರಾಯರು ಜೊತೆಕಾರ್ಯದರ್ಶಿಗಳಾಗಿಯೂ ಶ್ರೀ| ಬಂದಿಗೆ ಶಾಮಭಟ್ಟರು ಕೋಶಾಧಿಕಾರಿಗಳಾಗಿಯೂ ಆಯ್ಕೆಗೊಂಡಿರುವರು.

ಸುವರ್ಣೋತ್ಸವ ಮಂದಿರ ಉದ್ಘಾಟನೆ

ಮಂಗಳೂರಿಗೆ ಸಮೀಪದ ಸೋಮೇಶ್ವರ ಉಚ್ಚಿಲ ಬೋವಿ ಹಾಯರ್ ಪ್ರೈಮರಿ ಶಾಲಾ ಸುವರ್ಣಮಹೋತ್ಸವ ಸ್ಮಾರಕ ಕಟ್ಟಡದ ಉದ್ಘಾಟನೆಯು ಇತ್ತೀಚೆಗೆ ಉಡುಪಿ ತಾಲೂಕು ಅಭಿವೃದ್ಧಿ ಮಂಡಳಿ ಅಧ್ಯಕ್ಷ ಶ್ರೀ| ಎಂ. ಮಧ್ವರಾಜರ ಅಧ್ಯಕ್ಷತೆಯಲ್ಲಿ ಶ್ರೀ| ಎಂ. ಜೈರಾಜ್, ಡಿಪ್ಯೂಟಿ ಡೈರೆಕ್ಟರ್ ಆಫ್ ಫಿಶರೀಸ್, ಮಂಗಳೂರು ಅವರಿಂದ ನಡೆಯಿತು. 60 ಸಾವಿರ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾದ ಈ ಭವನದ ರಚನೆಗೆ ಸಹಾಯಮಾಡಿದ ದಾನಿಗಳ ಭಾವಚಿತ್ರಗಳನ್ನು ವಿಧಾನಸಭಾಸದಸ್ಯ ಶ್ರೀ| ಎಸ್. ಕೆ. ಅಮೀನರು ಅನಾವರಣಗೈದರು.

ನೊರ್ತ್ ರೋಟರಿಗೆ ಗವರ್ನರರ ಸಂದರ್ಶನ

ಮಂಗಳೂರು ನೊರ್ತ್ ರೊಟರಿ ಕ್ಲಬ್ಬಿಗೆ. ತಾ. ೨೭ನೇ ಕುಜವಾರ, ರೋಟರಿ ಜಿಲ್ಲಾ ೩೧೮ರ ಗವರ್ನರ್ ಶ್ರೀ ಟಿ. ರಮೇಶಪೈಯವರು ಸಂದರ್ಶನವಿತ್ತು, ಅಂದಿನ ಕಾರ್ಯಕ್ರಮಗಳಲ್ಲಿ ಭಾಗವಹಿಸಿದರು.



ಶ್ರೀ ಟಿ. ರಮೇಶ ಪೈ.

ಸಭಾರಂಭದಲ್ಲಿ ಶ್ರೀ ಆರ್. ಎನ್. ಮಣೇಲರಿಂದ ಪ್ರಾರ್ಥನೆಯಾದ ಬಳಿಕ, ಅಧ್ಯಕ್ಷ ಶ್ರೀ ಬಾಸ್ರಿಯವರು ಸ್ವಾಗತಿಸಿದರು. ಹೊರ ಊರುಗಳಿಂದ ಬಂದ ರೊಟರಿಯನರನ್ನು ಸಭೆಗೆ ಪರಿಚಯಮಾಡಿ ಕೊಡಲಾಯಿತು. ಕಾರ್ಯದರ್ಶಿ ಶ್ರೀ ಎಮ್. ವಿ. ಭಂಡಾರ್‌ಕಾರ್‌ರವರು ಕ್ಲಬ್ಬಿನ ವರದಿಯನ್ನೋದಿದರು. ಶ್ರೀ ಕೆ. ಆರ್. ಕಾರಂತ, ಪಬ್ಲಿಕ್ ರಿಲೇಶನ್ಸ್ ಆಫೀಸರ, ಅವರು ಕ್ಲಬ್ಬಿಗೆ ಬಂದ ಸಂದೇಶಗಳನ್ನೋದಿದರು.

ಶ್ರೀ ಎಸ್. ನಾರಾಯಣರಾವ್‌ರವರನ್ನು ಶ್ರೀ ವಿ. ದೇವದಾಸ ಕಾಮತ ರವರೂ, ಶ್ರೀ ಎಮ್. ರಾಮಕೃಷ್ಣ ಪೈಯವರನ್ನು ಶ್ರೀ ಎಮ್. ಅಚ್ಯುತ ಭಟ್‌ರವರೂ, ಶ್ರೀ ರಾಮಅವತಾರ ಜಾಲಿನ್‌ರವರನ್ನು ಶ್ರೀ ಯು. ರಮೇಶ ಪೈಯವರೂ, ಶ್ರೀ ವಸಂತಮಾಧವ ಹೆಬ್ಬಾರ್‌ರವರನ್ನು, ಶ್ರೀ ಬಿ. ಪಿ ಬಾಳಿಗ ರವರೂ, ಶ್ರೀ ಎಮ್. ವಿ. ಶೇಷಾದ್ರಿಯವರನ್ನು ಶ್ರೀ ಕಸ್ತೂರಿ ವೈಕುಂಠ ಪೈಯವರೂ ಸಭಿಕರಿಗೆ ಪರಿಚಯಮಾಡಿ ಕೊಟ್ಟು ಗವರ್ನರರಿಂದ ಈ ಹೊಸ ಸದಸ್ಯರಿಗೆ ದೀಕ್ಷೆಕೊಡಲಾಯಿತು. ಶ್ರೀ ಪಿ. ರಮೇಶರಾವ್‌ರವರು ರೊಟರಿ ಮಾಹಿತಿ ಭಾಷಣವಿತ್ತರು. ಮಾಜಿ ಅಧ್ಯಕ್ಷ ಡಾ। ಬಿ. ಎನ್. ಗಡಿಯಾರರು ಮಾತಾಡುತ್ತ, ಈ ಕ್ಲಬ್ಬು "ಕನ್ನಡಕಗಳ ಬೇಂಕ್" ಆರಂಭಿಸುವುದೆಂದು ಸಾರಿದರು.

ಡಾ। ವಿ. ಆರ್. ಭಟ್‌ರವರು ಗವರ್ನರರ ಪರಿಚಯ ಮಾಡಿಕೊಟ್ಟರು.

ಗವರ್ನರರು ರೋಟರಿ ಕುರಿತು ಮಾತಾಡುವಾಗ, ನಮ್ಮಲ್ಲಿ ರೂಢಮೂಲವಾಗಿರುವ ಕೆಲವೊಂದು ಹಳೇ ವಿಚಾರಗಳನ್ನು ಬದಿಗೊತ್ತಿ, ನಾವು ಪ್ರತ್ಯಕ್ಷತೆಯ ಕಡೆಗೆ ಸರಿಯಾಗಿ ನೋಡಿ ವ್ಯವಹರಿಸಬೇಕೆನ್ನುತ್ತ, ಅಮೆರಿಕ–ಜಪಾನ್‌ಗಳ ಪ್ರಗತಿಯ ವಿಷಯವಾಗಿಯೂ ಪ್ರಸ್ತಾವಿಸಿ, ಸ್ವಾಮಿ ವಿವೇಕಾನಂದರ ಒಂದೆರಡು ವಾಕ್ಯಗಳನ್ನೂ ಉದ್ಧರಿಸಿದರು.

ಪುತ್ತೂರು ರೋಟರಿ ಕ್ಲಬ್

ಪುತ್ತೂರು ರೋಟರಿ ಕ್ಲಬ್ಬಿನ ಸಾಪ್ತಾಹಿಕ ಸಭೆಯಲ್ಲಿ ಕಾರ್ಕಳ ರೋಟೆರೆಕ್ಟ್ ಕ್ಲಬ್ಬಿನ ಸದಸ್ಯ ಶ್ರೀ ವೆಂಕಟೇಶ ಪ್ರಭು ಅವರು ತಾವು ಇತ್ತೀಚೆಗೆ ಜಪಾನಿಗೆ ತೆರಳಿ ಅಲ್ಲಿಯ ಎಕ್ಸ್‌ಪೋ 70 ಪ್ರದರ್ಶನ ನೋಡಿದ ಮಾಹಿತಿ ವಿವರಿಸಿ ಭಾಷಣಮಾಡಿದ್ದರು. ಇದೇ ಸಭೆಯಲ್ಲಿ ಇತ್ತೀಚೆಗೆ ಅಧ್ಯಾಪಕ ವೃತ್ತಿಯಿಂದ ನಿವೃತ್ತಿ ಹೊಂದಿದ ಸಯ್ಯದ್ ಜ್ಯಾರಿ ಅವರಿಗೆ ರೋಟರಿ ಕ್ಲಬ್ಬಿನ ಪರವಾಗಿ ಸರ್ಟಿಫಿಕೇಟ್ ಮತ್ತು ಬಹುಮಾನಕೊಟ್ಟು ಗೌರವಿಸಲಾಗಿತ್ತು. ಸ್ಥಳೀಯ ಶಾಖೆಗಳಲ್ಲಿ ಆಫೀಸರರಾಗಿರುವ ಲಿ। ಶರ್ಮಾರವರೂ ಸಭೆಯಲ್ಲಿ ಉಪಸ್ಥಿತರಿದ್ದರು. ಸಭಾಧ್ಯಕ್ಷತೆಯನ್ನು ರೋಟರಿ ಅಧ್ಯಕ್ಷ ಪ್ರಿನ್ಸಿಪಾಲ್ ಜಿ. ಕೆ. ಶೆಣೈಯವರು ವಹಿಸಿದ್ದರು.

ಫುಟ್‌ಪಾತಿಗೆ ಕೊಂಕ್ರೀಟು ಹಾಕುವ ಸಮಾರಂಭ

ಮಂಗಳೂರು ನಗರದ ಇತಿಹಾಸದಲ್ಲೇ ಪ್ರಥಮಬಾರಿಗೆ ಕೈಗೊಳ್ಳಲಾದ ವ್ಯಾಸ್ ಕ್ರೊಸ್ ರಸ್ತೆಯ ಬಳಿಯ 345 ಅಡಿ ಉದ್ದದ ಫುಟ್‌ಪಾತಿಗೆ ಕೊಂಕ್ರೀಟ್ ಹಾಕುವ ಯೋಜನೆಯ ಉದ್ಘಾಟನೆಯು ತಾ. 24ರಂದು ಮಂಗಳೂರು ಮುನ್ಸಿಪಲ್ ಕಮಿಷನರ್ ಶ್ರೀ ಆರ್. ಕೆ. ಕೆಲ್ವಾಡಿಯವರಿಂದ ನಡೆಯಿತು. "ಆಕ್ಷಾಯಿ ಹೇಂದ ವಿನಹ ನಮ್ಮ ನಗರಕ್ಕೆ ಅಭಿವೃದ್ಧಿಯ ಬೇರೆ ದಾರಿಯಿಲ್ಲ" ಎಂಬುದಾಗಿ ಇಲ್ಲಿ ಮಾಡಿದ ಭಾಷಣದಲ್ಲಿ ಶ್ರೀ ಕೆಲ್ವಾಡಿ ಹೇಳಿದ್ದರು.

ಹರಿಕಥಾ ಸಪ್ತಾಹ

ಮಂಗಳೂರು ಮಣ್ಣಗುಡ್ಡೆ ಶ್ರೀ ಕೃಷ್ಣಾ ಮಠದಲ್ಲಿ ತಾ. 18ರಿಂದ 24ರ ತನಕ ಸಾರ್ವಜನಿಕರ ಪ್ರೋತ್ಸಾಹದಿಂದ ಶ್ರೀ ಬಿ. ಎಸ್. ಅನಂತ ಪದ್ಮನಾಭರಾವ್ ಅವರಿಂದ ಶ್ರೀಕೃಷ್ಣ ಜನ್ಮ ಮೊದಲ್ಗೊಂಡು ಕಂಸವಧೆ ವರೆಗಿನ ಭಾಗವತ ಕಥಾಭಾಗದ ಹರಿಕಥಾ ಸಪ್ತಾಹ ನಡೆಯಿತು.

ಪೊಪ್ಯುಲರ್ ಕ್ರಿಕೆಟ್ ಪಂದ್ಯ

ಕೆನರಾ ಕ್ರಿಕೆಟ್ ಎಸೋಸಿಯೇಶನಿನ ಆಶ್ರಯದಲ್ಲಿ ಜರಗುವ ಪೊಪ್ಯುಲರ್ ಕ್ರಿಕೆಟ್ ಟೂರ್ನಮೆಂಟಿನ ಮೊದಲ ಪಂದ್ಯ ಪಿ. ಪಿ. ಎಸ. ಎ. ಮತ್ತು ಕೆ. ವೈ. ಸಿ. ಟೀಮುಗಳೊಳಗೆ ತಾ. 25ರಂದು ಮಂಗಳೂರು ನೆಹರೂ ಮೈದಾನಿನಲ್ಲಿ ನಡೆದಾಗ ಪಿ. ಪಿ. ಎಸ್. ಎ. ದವರು ಗೆದ್ದರು.

ನಿಧನ

ರಾಷ್ಟ್ರಕವಿ ದಿ। ಗೋವಿಂದ ಪೈಗಳವರ ಸೋದರ ಶ್ರೀ ಎಂ. ಅನಂತಪೈಯವರು ತಾ. 26ರಂದು ಮಂಗಳೂರಲ್ಲಿ ತಮ್ಮ 76ನೇ ವಯಸ್ಸಿನಲ್ಲಿ ದೈವಾಧೀನರಾದರು. ಇವರು ಮಂಜೇಶ್ವರದಲ್ಲಿ ಬ್ಯಾಂಕರರೂ ಜಮೀನ್ದಾರರೂ ಆಗಿದ್ದರು.

ಮಂಗಳೂರಿನ ಪ್ರಸಿದ್ಧ ಡಾಕ್ಟರರಲ್ಲಿ ಒಬ್ಬರಾದ ಡಾ। ಯು. ಸಿ. ಆರ್. ಭಟ್‌ರವರು ತಾ. 24ರಂದು ಹೃದಯಾಘಾತದಿಂದ ತಮ್ಮ 45ನೇ ವರ್ಷ ಪ್ರಾಯದಲ್ಲಿ ನಿಧನರಾದರು.

ಮಂಗಳೂರು ಜುಮ್ಮಾಮಸೀದಿ ಆಡಳ್ತ ಸಮಿತಿ ಅಧ್ಯಕ್ಷರೂ ಪ್ರಸಿದ್ಧ ಒಣಮೀನು ವ್ಯಾಪಾರಸ್ಥರೂ ಆಗಿದ್ದ ಜನಾಬ್ ಬಿ. ಎಂ. ಅಬುಬಕರ್ ಇಸ್ಮಾಯಿಲ್ ಅವರು ತಾ. 26ರಂದು ರಾತ್ರೆ ಹೃದಯಾಘಾತದಿಂದ ತಮ್ಮ 58ನೇ ವರ್ಷ ಪ್ರಾಯದಲ್ಲಿ ಪೈಗಂಬರವಶರಾದರು.

ಸುಭಾಷಿತ

ಮಾತರ್ಲಕ್ಷ್ಮಿ ಭಜಸ್ವ ಕಂಚಿದಪರಂ ಮತ್ಕಾಂಕ್ಷಿಣೀ ಮಾಸ್ಮಭೂ-
ರ್ಭೋಗೇಷು ಸ್ಪೃಹಯಾಲವೋ ನ ಹಿ ವಯಂ ಕಾ ನಿಸ್ಪೃಹಾಣಾಮಸಿ ॥
ಸದ್ಯಃ ಸ್ಯೂತ ಪಲಾಶಪತ್ರಪುಟಿಕಾ ಪಾತ್ರೇ ಪವಿತ್ರೀಕೃತೈ-
ರ್ಭಿಕ್ಷಾಸಕ್ತುಭಿರೇವ ಸಂಪ್ರತಿ ವಯಂ ವೃತ್ತಿಂ ಸಮೀಹಾಮಹೇ ॥

ಲಕ್ಷ್ಮೀಮಾತೆ! ಇನ್ನುಮುಂದೆ ನೀನು ಬೇರೆ ಯಾರನ್ನಾದರೂ ಭಜಿಸು. ನನ್ನ ಆಸೆ ಬಿಟ್ಟುಬಿಡು. ಏಕೆಂದರೆ, ಈಗ ನಮಗೆ ವಿಷಯಸುಖಾಭಿಲಾಷೆ ಲೇಶವೂ ಇಲ್ಲ, ಅಲ್ಲದೆ, ನಿಸ್ಪೃಹವೃತ್ತಿಯ ಪುರುಷನಿಗೆ ನೀನಾರಂತೆ! ಅಂಥವರು ನಿನ್ನನ್ನು ಲಕ್ಷಿಸುವವರಲ್ಲ. ಅವರೆದುರು ನೀನು ತೀರ ತುಚ್ಛಳು; ನನಗೂ ಹಾಗೇ. ಏಕೆಂದರೆ, ಭಿಕ್ಷೆಬೇಡಿ ಉಪಜೀವಿಸಲು ಸಿದ್ಧನಾಗಿರುವ ನನಗೆ ನಿನ್ನ ಅವಶ್ಯಕತೆಯೇನು?

(ಭರ್ತೃಹರಿಯ "ವೈರಾಗ್ಯಶತಕ"ದಿಂದ)

———

ನ ನಟಾ ನ ವಿಟಾನಮನಗಾಯಕಾಃ ನ ಪರದ್ರೋಹಬದ್ಧ ।
ನೃಪಸದ್ಮನಿ ನಾಮಕೇವಯಂ ಕುಚಭಾರೋನ್ನಮಿತಾ ನಯೋಕ್ಷಿತಃ ॥

ನಾವು ನಟರೂ ಅಲ್ಲ, ವಿಟರೂ ಪರಸ್ತ್ರೀಲೋಲುಪರೂ ಅಲ್ಲ, ಸಂಗೀತಗಾರರೂ ಅಲ್ಲ. ಎರಡನೆಯವನಿಗೆ ದ್ರೋಹಬಗೆಯಬೇಕೆಂಬ ದುರ್ಬುದ್ಧಿಯುಳ್ಳವರಂತೂ ಅಲ್ಲವೇ ಅಲ್ಲ, ಸ್ತನಭಾರದಿಂದ ಬಾಗಿರುವ ಸ್ತ್ರೀಯರೂ ಅಲ್ಲ. ಇಂಥ ನಮಗೆ ಅರಸನ ಒಡ್ಡೋಲಗದೊಳಗೆ ಹೋಗಿ ಆಗ ಲಾಭವೇನು?

(ಭರ್ತೃಹರಿಯ "ವೈರಾಗ್ಯಶತಕ"ದಿಂದ)

———

ಪುರಾವಿದ್ವತ್ತಾ ಸೀದು ಪಶಮವತಾಂ ಕ್ಲೇಶಹತಯೇ ।
ಗತಾಕಾಲೇನಾಸೌ ವಿಷಯಸುಖ ಸಿದ್ಧ್ಯೈ ವಿಷಯಿಣಾಂ ।
ಇದಾನಿಂ ಸಂಪ್ರೇಕ್ಷ್ಯ ಕ್ಷಿತಿತಲಭುಜಃ ಶಾಸ್ತ್ರವಿಮುಖಾ-
ನಹೋಕಷ್ಟಂ ಸಾಽಪಿ ಪ್ರತಿದಿನಭಧೋಽಧಃ ಪ್ರವಿಶತಿ ॥

ವಿದ್ಯೆಯು ಮೊದಲು ಪಂಡಿತೋತ್ತಮರ ಚಿತ್ತದ ಕ್ಲೇಶವನ್ನು ಪರಿಹರಿಸುತಿತ್ತು. ಬರಬರುತ್ತ ಆ ವಿದ್ಯೆ ಕಾಮುಕಪುರುಷರ ವಿಷಯಸುಖಗಳನ್ನೊದಗಿಸುವ ಸಾಧನವಾಯಿತು. ಈಗಂತೂ ಈ ವಿದ್ಯೆಯು ಇನ್ನೂ ದಾರುಣ ಪರಿಸ್ಥಿತಿಗಿಳಿದಿದೆ. ಅಂದರೆ, ಈಗಿನ ಅರಸರು ಶಾಸ್ತ್ರವಿಮುಖರಾಗಿರುವದನ್ನು ಗಮನಿಸಿ ಆ ವಿದ್ಯೆಗೆ ಅಧೋಗತಿ ಪ್ರಾಪ್ತವಾಗಿದೆ.

(ಭರ್ತೃಹರಿಯ "ವೈರಾಗ್ಯಶತಕ"ದಿಂದ)

———

ಪತ್ರಾನೇಕಃ ಕ್ವಚಿದಪಿ ಗೃಹೇ ತತ್ರ ತಿಷ್ಠತ್ಯಥೈಕೋ
ಯತ್ರಾಪ್ಯೇಕಸ್ತದನು ಬಹವಸ್ತತ್ರ ನೈಕೋಪಿ ಚಾಂತೇ !
ಇತ್ಥಂ ಚೇಮೌ ರಜನಿ ದಿವಸೌದೌಲಯಂದ್ವಾ ವಿವಾಕ್ಷೌ
ಕಾಲಃ ಕಾಲ್ಯಾ ಭುವನ ಫಲಕೇ ಕ್ರೀಡತಿ ಪ್ರಾಣಶಾರೈಃ ॥

ಕೆಲಕಾಲದ ಹಿಂದೆ ಬಹಳ ಜನರಿದ್ದಂಥ ಮನೆಯಲ್ಲಿಂದು ಒಬ್ಬನೇ ಕಂಡುಬರುತ್ತಾನೆ. ಹಾಗೇ, ಒಬ್ಬನೇ ಇದ್ದಂಥ ಮನೆಯಲ್ಲಿ ಬಹುಮಂದಿ ಕಾಣುತ್ತಾರೆ. ಆದಾಗ್ಯೂ, ಕೊನೆಗೆ ಒಬ್ಬನೂ ಉಳಿಯಲಾರ, ಎಲ್ಲರೂ ಇಲ್ಲದಾಗುವರು. ಕಾಲಪುರುಷನ ಮಹಿಮೆ ಎಷ್ಟು ವಿಚಿತ್ರ! ಅವನು ಜಗತ್ತಿನ ಪ್ರಾಣಿಗಳೊಂದಿಗೆ ಹೇಗೆ ಆಟವಾಡುತ್ತಿದ್ದಾನೆ!

(ಭರ್ತೃಹರಿಯ "ವೈರಾಗ್ಯಶತಕ"ದಿಂದ)

———

ವರಂ ಪರ್ವತರ್ಗೇಷು ಭ್ರಾಂತಂ ವನಚರೈಃ ಸಹ ।
ನ ಮೂರ್ಖಜಗ ಸಂಪರ್ಕಃ ಸುರೇಂದ್ರಭವನೇಷ್ವಪಿ ॥

ದೇವೇಂದ್ರನ ಭವನದಲ್ಲಿ ಮೂರ್ಖರ ಸಹವಾಸದಲ್ಲಿರುವುದಕ್ಕಿಂತ ದುರ್ಗಮವಾದ ಪರ್ವತಪ್ರದೇಶದೊಳಗೆ ವಾಸಿಸುತ್ತಿರುವಂಥ ವನಚರರೊಂದಿಗಿರುವುದು ಲೇಸು.

(ಭರ್ತೃಹರಿಯ "ನೀತಿಶತಕ"ದಿಂದ)

—

ಆಕ್ಟ್ರಾಯ್ ಹೇರುವ ಮಸೂದೆ ಬಿದ್ದುಹೋಯಿತು

ಮಂಗಳೂರು ನಗರಸಭೆಯೊಳಗೆ ಕೆಲವು ವಸ್ತುಗಳ ಮೇಲೆ ಆಕ್ಟ್ರಾಯ್ ವಿಧಿಸುವ ಕುರಿತು ಕೊಂಗ್ರೆಸ್ ಸದಸ್ಯರೊಬ್ಬರು ಮಂಡಿಸಿದ ಗೊತ್ತುವಳಿಯು ಕಳೆದ ತಾ.೨೮ರಂದು ನಡೆದ ಸಭಾಧಿವೇಶನದಲ್ಲಿ ತೀವ್ರ ಚರ್ಚೆಗೊಳಗಾಗಿ, ಕೊನೆಗೆ ಮತದಾನಕ್ಕೆ ಹಾಕಲಾಗಿ ವಿರೋಧಿಸಿ ೧೬ ಅನುಮೋದಿಸಿ ೧೫ ಮತಗಳು ದೊರೆತು ಬಿದ್ದುಹೋಯಿತು.

ಮಲ್ಪೆಯಲ್ಲಿ ಮತ್ಸ್ಯ ಬಂದರು

ಚತುರ್ಥ ಪಂಚವಾರ್ಷಿಕ ಯೋಜನೆಯಲ್ಲಿ ಮಲ್ಪೆಯನ್ನು ೧೦ ಕೋಟಿ ರೂಪಾಯಿ ವೆಚ್ಚದಲ್ಲಿ ಮತ್ಸ್ಯಬಂದರವನ್ನಾಗಿ ಅಭಿವೃದ್ಧಿಗೊಳಿಸಲಾಗುವುದೆಂದು ಮೈಸೂರು ಮೀನುಗಾರಿಕಾ ಸಚಿವ ಮಾನ್ಯ ಎಚ್. ಸಿ. ಲಿಂಗಾರೆಡ್ಡಿಯವರು ಹಾಸನದಲ್ಲಿ ನಡೆದ ಜಿಲ್ಲಾ ಮೀನುಗಾರಿಕಾ ವಿಚಾರ ಗೋಷ್ಠಿಯಲ್ಲಿ ಮಾತನಾಡುತ್ತ ಹೇಳಿರುವರು.

ಪಣಂಬೂರಿನಲ್ಲಿ ಜಲದುರಂತ

ತಣ್ಣೀರು ಬಾವಿಯ ಕ್ರೈಸ್ತ ಕುಟುಂಬಗಳಿಗೆ ಸೇರಿದ ೧೮ ಮಂದಿ ವಿಹಾರಾರ್ಥ ತಾ. ೨೫ರಂದು ಪಣಂಬೂರು ಸಮುದ್ರ ದಂಡೆಗೆ ತೆರಳಿದ ಸ್ನಾನಮಾಡಲೆಂದು ನೀರಿಗಿಳಿದ ಐವರಲ್ಲಿ ನಾಲ್ವರು ಮೃತ್ಯುವಿಗೀಡಾದ ದುರಂತವೊಂದು ನಡೆಯಿತು. ರಕ್ಷಣೆಯ ಪ್ರಯತ್ನ ನಡೆದರೂ ಒಬ್ಬರನ್ನು ರಕ್ಷಿಸುವುದು ಮಾತ್ರ ಸಾಧ್ಯವಾಯಿತು.

——

Printed at The Prabhat Printers, Ltd., Mangalore. Edited and Published by K. V. Shenoy at Prabhat Office, Car Street, Mangalore-1.